ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 28 | ಜುಲೈ 5–11 2021 | ಪುಟ 16 | ರೂ.10/-

https://janashakthi.wordpress.com e-mail : js_weekly@gmail.com



ಪೆಟ್ರೋಲ್- ಅಡುಗೆ ಅನಿಲ ಬೆಲೆ ಹೆಚ್ಚಳದ ರಾಜಕಾರಣ



ಕಳಪೆ ಆಹಾರದ ಕಿಟ್ ವಿತರಣೆ ನಿರ್ಲಕ್ಷ್ಯವೋ!? ಭ್ರಷ್ಟಾಚಾರವೋ!!?



ಬಲಪಂಥೀಯ ರಾಜಕಾರಣವೇ ಹೆಸರಿನ ರಾಜಕಾರಣ



ಜಮ್ಮು–ಕಾಶ್ಮೀರದಲ್ಲಿ ಮೋದಿ–ಷಾ ಆಟ



ಚೀನಾ ಕಮ್ಯುನಿಸ್ಟ್ ಪಕ್ಷ–100



"ಕೃಷಿ ಉಳಿಸಿ–ಪ್ರಜಾಪ್ರಭುತ್ವ ಉಳಿಸಿ" ದೇಶಾದ್ಯಂತ ಭಾರೀ ಬೆಂಬಲ

ಚಲನಚಿತ್ರ ಕಾಯ್ದೆಗೆ ಪ್ರತಿಗಾಮಿ ತಿದ್ದುಪಡಿಗಳು: ಹಿಂತೆಗೆದುಕೊಳ್ಳಲು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹ

ಮೋದಿ ಸರಕಾರ ಚಲನಚಿತ್ರ (ಸಿನೆಮಟೊಗ್ರಫಿ) ಕಾಯ್ದೆಗೆ ತರಬೇಕೆಂದಿರುವ ತಿದ್ದುಪಡಿಗಳು ಚಲನಚಿತ್ರ ನಿರ್ಮಾತೃಗಳ ಸೃಜನಾತ್ಮಕ ಪ್ರತಿಭೆಗಳು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಸಂವಿಧಾನಿಕ ಹಕ್ಕಿನ ಮೇಲೆ ನಡೆಸಿರುವ ಸರ್ವತೋಮುಖ ಹಲ್ಲೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ. ಕೇಂದ್ರ ಸರಕಾರ ಈ ಕಾಯ್ದೆಯ ವಿಭಾಗ 58(1) (ಚಲನಚಿತ್ರಗಳಿಗೆ ಪ್ರಮಾಣಪತ್ರ ನೀಡುವಲ್ಲಿ ಮಾರ್ಗದರ್ಶನದ ಸೂತ್ರಗಳು) ಇದರ ಉಲ್ಲಂಘನೆಗಾಗಿ "ಪರಿಷ್ಕಾರಕ ಅಧಿಕಾರ"ಗಳನ್ನು ಪಡೆಯುವ ಒಂದು ಉಪಬಂಧವನ್ನು ಸೇರಿಸ ಬಯಸುತ್ತಿದೆ. ಇದು ಅದಾಗಲೇ ಪ್ರಮಾಣ ಪತ್ರ ಪಡೆದಿರುವ ಚಲನಚಿತ್ರಗಳ ಪ್ರದರ್ಶನವನ್ನು ನಿಲ್ಲಿಸುವುದಲ್ಲದೆ ಬೇರೇನೂ ಅಲ್ಲ ಎಂದು ಅದು ಅಭಿಪ್ರಾಯ ಪಟ್ಟಿದೆ. ಇತ್ತೀಚೆಗೆ, ಹಿಂದುತ್ವ ಪಡೆಗಳು ಮತ್ತು ಜಾತಿವಾದಿ ಗುಂಪುಗಳ ನೇತೃತ್ವದ ಬಲಪಂಥೀಯ ಶಕ್ತಿಗಳು ತಮಗೆ ಇಷ್ಟವಾಗದ ಚಲನಚಿತ್ರಗಳನ್ನು ಜನಜಂಗುಳಿಯ ಮೂಲಕ ಸೆನ್ಸಾರ್ ಮಾಡುವ ಘಟನೆಗಳನ್ನು ಕಾಣುತ್ತಿದ್ದೇವೆ. ಈಗ ಸರಕಾರವೇ ತನ್ನ ಸಿದ್ಧಾಂತಗಳನ್ನು ವಿಮರ್ಶಿಸುವ ಚಿತ್ರಗಳನ್ನು ನಿಲ್ಲಿಸುವ ಅಧಿಕಾರವನ್ನು ಪಡೆಯ ಬಯಸುತ್ತಿದೆ. ಈ ಮೊದಲೇ ಚಲನಚಿತ್ರ ಸೆನ್ಸಾರ್ ಮಂಡಳಿಯ ಸ್ವಾಯತ್ತ ಅಧಿಕಾರಗಳನ್ನು ಮಾಹಿತಿ ಮತ್ತು ಪ್ರಸಾರ ಮಂತ್ರಾಲಯ ವಿವಿಧ ರೀತಿಗಳಲ್ಲಿ ಬುಡಮೆಲು ಮಾಡುತ್ತಿದೆ. ಅದು ಎಪ್ರಿಲ್ ತಿಂಗಳಲ್ಲಿ ಸೆನ್ಸಾರ್ ಮಂಡಳಿ ಸೂಚಿಸುವ ಕಡಿತಗಳ ವಿರುದ್ಧ ಮೇಲ್ಮನವಿಗೆ ಇದ್ದ ವ್ಯವಸ್ಥೆಯನ್ನು ನಿರಂಕುಶ ರೀತಿಯಲ್ಲಿ ವಿಸರ್ಜಿಸಿದೆ.

ಇವು ಚಲನಚಿತ್ರ ಪ್ರತಿಭೆ ಮತ್ತು ಸ್ವಾತಂತ್ರ್ಯದ ಕತ್ತು ಹಿಸುಕುವ ಘೋರ ತಿದ್ದುಪಡಿಗಳು, ಇವನ್ನು ತಾನು ಬಲವಾಗಿ ವಿರೋಧಿಸುವುದಾಗಿ ಹೇಳಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಖ್ಯಾತ ಚಲನಚಿತ್ರ ನಿರ್ಮಾತೃಗಳು ಆಗ್ರಹಿಸಿರುವಂತೆ ಚಲನಚಿತ್ರ ಮೇಲ್ಮನವಿ ನ್ಯಾಯಮಂಡಳಿಯನ್ನು ಮತ್ತೆ ಸ್ಥಾಪಿಸಬೇಕು ಎಂದು ಆಗ್ರಹಿಸಿದೆ ಹಾಗೂ ಪ್ರಜಾಪ್ರಭುತ್ವ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಈ ಹಲ್ಲೆಯ ವಿರುದ್ಧ ಚಲನಚಿತ್ರ ಉದ್ಯಮದಲ್ಲಿ ಧೈರ್ಯದಿಂದ ದನ ಎತ್ತಿರುವವರಿಗೆ ಬೆಂಬಲವನ್ನು ವ್ಯಕ್ತಪಡಿಸಿದೆ.

1430 ಗಣ್ಯರ ಆತಂಕ

ಚಲನಚಿತ್ರ ಸೆನ್ಸಾರ್ ಪ್ರಮಾಣ ಪತ್ರವನ್ನು ರದ್ದು ಮಾಡುವ ಅಧಿಕಾರವನ್ನು ಕೇಂದ್ರ ಸರಕಾರಕ್ಕೆ ನೀಡುವ ತಿದ್ದುಪಡಿಯ ಬಗ್ಗೆ ಚಿತ್ರ ನಿರ್ಮಾತೃಗಳು, ಸಂಶೋಧಕರು, ತಂತ್ರಜ್ಞರು, ವಕೀಲರು ಮತ್ತು ನಾಗರಿಕ ಸಮಾಜದ ಗಣ್ಯರು ತೀವ್ರ ಆತಂಕ ವ್ಯಕ್ತಪಡಿಸಿದ್ದಾರೆ. ಸುಮಾರು 1430 ಮಂದಿ ಈ ಕುರಿತ ಒಂದು ಮನವಿಗೆ ಸಹಿ ಹಾಕಿದ್ದು, ಅದರ ಮೂಲಕ ಈ ತಿದ್ದುಪಡಿಯನ್ನು ಕೈಬಿಡಬೇಕು, ಚಲನಚಿತ್ರ ಪ್ರಮಾಣೀಕರಣ ಮೇಲ್ಮನವಿ ನ್ಯಾಯಮಂಡಳಿ(ಎಫ್‌ಸಿಎಟಿ)ಯನ್ನು ಮತ್ತೆ ತರಬೇಕು ಎಂದು ಆಗ್ರಹಿಸಿದ್ದಾರೆ.

ಝೋಯ ಅಖ್ತರ್, ಅನುರಾಗ್ ಕಶ್ಯಪ್, ನಂದಿತ ದಾಸ್, ಶಬಾನಾ ಆಜ್ಮಿ ಮತ್ತಿತರರು ಇದಕ್ಕೆ ಸಹಿ ಹಾಕಿದ್ದಾರೆ.

ಉತ್ತೇಜನಾ ಪ್ಯಾಕೇಜೆಂಬ ಬಿಜೆಪಿ ಸರಕಾರದ ಮತ್ತೊಂದು ವಂಚನೆಯ ಕಸರತ್ತು–ಸಿಐಟಿಯು



ಕೇಂದ್ರ ಹಣಕಾಸು ಮಂತ್ರಿಗಳು ಜೂನ್ 28ರಂದು ಪ್ರಕಟಿಸಿರುವ 'ಉತ್ತೇಜನಾ ಪ್ಯಾಕೇಜ್' ಜನಗಳ ಕಣ್ಣಿಗೆ ಮಣ್ಣೆರಚುವ ಇನ್ನೊಂದು ತಿಣುಕಾಟವಲ್ಲದೆ ಬೇರೇನೂ ಅಲ್ಲ ಎಂದು ದೇಶದ ಒಂದು ಪ್ರಮುಖ ಕಾರ್ಮಿಕ ಸಂಘಟನೆ ಸಿಐಟಿಯು ಹೇಳಿದೆ. ಇದರಲ್ಲಿ ಪ್ರಕಟಿಸಿರುವ ಕ್ರಮಗಳು ಎರಡನೇ ಕೊವಿಡ್ ಅಲೆ ಮತ್ತು ಅದರ ಪರಿಣಾಮವಾಗಿ ವಿವಿಧ ರಾಜ್ಯಗಳಲ್ಲಿ ಹಾಕಿರುವ ಲಾಕ್ ಡೌನ್ ಮತ್ತು ಕರ್ಫ್ಯೂಗಳಿಂದಾಗಿ ತಮ್ಮ ಜೀವನಾಧಾರಗಳು ಧ್ವಂಸಗೊಂಡುದರಿಂದ ಕಂಗಾಲಾಗಿರುವ ಕೋಟ್ಯಂತರ ಜನಗಳಿಗೆ ಬಹು ಅಗತ್ಯವಾದ ಪರಿಹಾರಗಳನ್ನೂ ಕೊಡುತ್ತಿಲ್ಲ, ಅತ್ತ ಅರ್ಥವ್ಯವಸ್ಥೆಯ ಪುನರುಜ್ಜೀವನಕ್ಕೂ ಯಾವುದೇ ನೆರವನ್ನೂ ಕೊಡುತ್ತಿಲ್ಲ. **ಕಳೆದ ವರ್ಷ ಮೊದಲ ಕೊವಿಡ್ ಅಲೆಯ ಸಂದರ್ಭದಲ್ಲಿ ಈ ಸರಕಾರ ಪ್ರಕಟಿಸಿದ 'ಆತ್ಮನಿರ್ಭರ' ಪ್ಯಾಕೇಜಿನಂತೆಯೇ, ಇದು ಕೂಡ ಒಂದು ವಂಚನೆಯ ಕಸರತ್ತು** ಎಂದು ಅದು ವರ್ಣಿಸಿದೆ.

ಈ ಪ್ಯಾಕೇಜ್ ಸಾಲಗಳಿಗೆ ಗ್ಯಾರಂಟಿ ಮತ್ತು ರಿಯಾಯ್ತಿ ಸಾಲಗಳ ಮೇಲೆಯೇ ಗಮನ ಕೇಂದ್ರೀಕರಿಸಿರುವಂತದ್ದು. ಈ ಮಹಾಸೋಂಕಿನ ಎರಡನೇ ಅಲೆಯ ಸಮಯದಲ್ಲಿ ಎಪ್ರಿಲ್–ಮೇ 2021ರಲ್ಲಿ ತಮ್ಮ ಕೆಲಸ ಮತ್ತು ಆದಾಯಗಳನ್ನು ಕಳಕೊಂಡಿರುವ 2.2 ಕೋಟಿ ಕಾರ್ಮಿಕರಿಗೆ ಇದರಲ್ಲಿ ಯಾವ ಕ್ರಮವೂ ಇಲ್ಲ. ಇದೇ ಅವಧಿಯಲ್ಲಿ ಕನಿಷ್ಟಕೂಲಿ ಬಡತನದ ರೇಖೆಯ ಕೆಳಗೆ ತಳ್ಳಲ್ಪಟ್ಟಿರುವ 23 ಕೋಟಿ ಅಸಂಘಟಿತ ವಲಯದ ಕಾರ್ಮಿಕರಿಗೆ ಇದು ಏನ್ನೂ ಕೊಟ್ಟಿಲ್ಲ. ಮೊದಲ ಅಲೆಯಲ್ಲಿ ಕೆಲಸ ಕಳಕೊಂಡ ಕೋಟ್ಯಂತರ ಕಾರ್ಮಿಕರಲ್ಲಿ ಹಲವರಿಗೆ ಇನ್ನೂ ಕೆಲಸ ಸಿಕ್ಕಿಲ್ಲ. ಇದರಲ್ಲಿ ಮಹಿಳೆಯರ ಸಂಖ್ಯೆ ಬಹಳ ದೊಡ್ಡದು. ಅವರಿಗೂ ಇದರಲ್ಲಿ ಏನೂ ಕೊಟ್ಟಿಲ್ಲ.

ನಮ್ಮ ಅರ್ಥವ್ಯವಸ್ಥೆ ಈಗ ಎದುರಿಸುತ್ತಿರುವ ಸಮಸ್ಯೆಯೆಂದರೆ ಬೇಡಿಕೆಯ ಕೊರತೆ ಎಂದು ನೆನಪಿಸಿರುವ ಸಿಐಟಿಯು, ಇಂತಹ ಸನ್ನಿವೇಶದಲ್ಲಿ ಸಾಲ ಗ್ಯಾರಂಟಿಗಳು ಮತ್ತು ಅಗ್ಗದ ಸಾಲಗಳಿಂದ ಅರ್ಥವ್ಯವಸ್ಥೆಯ ಪುನರುಜ್ಜೀವನಕ್ಕೆ ನೆರವಾಗುತ್ತದೆ ಎಂದು ಯೋಚಿಸುವುದು ನಿರರ್ಥಕ ಎಂದು ಹೇಳಿದೆ. ಈಗ ಕೈಗೊಳ್ಳಬೇಕಾದ ಅಗತ್ಯ ಕ್ರಮ ಎಂದರೆ ಜನಗಳ ಜೇಬಿಗೆ ಹಣ ಬರುವಂತೆ ಮಾಡುವುದು, ಆಮೂಲಕ ಅರ್ಥವ್ಯವಸ್ಥೆಯಲ್ಲಿ ಬೇಡಿಕೆ ಉಂಟಾಗುವಂತೆ ಮಾಡುವುದು. ಕಳೆದ ಒಂದು ವರ್ಷದಿಂದ ಸಿಐಟಿಯು ಮತ್ತು ಇತರ ಕಾರ್ಮಿಕ ಸಂಘಟನೆಗಳು ಇದನ್ನು ಆಗ್ರಹಿಸುತ್ತಲೇ ಬರುತ್ತಿವೆ. ಕಾರ್ಮಿಕ ಸಂಘಗಳ ಜಂಟಿ ವೇದಿಕೆಗಳು, ಅರ್ಥಶಾಸ್ತ್ರಜ್ಞರು ಮತ್ತು ಎಡಪಕ್ಷಗಳು ಆದಾಯ ತೆರಿಗೆ ವ್ಯಾಪ್ತಿಯ ಹೊರಗಿರುವ ಕುಟುಂಬಗಳಿಗೆ ತಿಂಗಳಿಗೆ 7500 ರೂ. ನಂತೆ ನಗದು ವರ್ಗಾವಣೆ ಮಾಡಬೇಕು ಎಂದು ಆಗ್ರಹಿಸುತ್ತ ಬಂದಿವೆ.

ಆದರೆ ವಿತ್ತೀಯ ಮೂಢನಂಬಿಕೆಗೆ ಅಂಟಿಕೊಂಡಿರುವ ಈ ಬಿಜೆಪಿ ಸರಕಾರ ಅದನ್ನು ಹಟಮಾರಿತನದಿಂದ ನಿರಾಕರಿಸುತ್ತಲೇ ಬಂದಿದೆ ಎಂದಿರುವ ಸಿಐಟಿಯು ಮತ್ತೊಮ್ಮೆ, ಮುಂದಿನ ಆರು ತಿಂಗಳು ಆದಾಯ ತೆರಿಗೆ ವ್ಯಾಪ್ತಿಯ ಹೊರಗಿರುವ ಕುಟುಂಬಗಳಿಗೆ ತಿಂಗಳಿಗೆ 7500 ರೂ. ನಂತೆ ನಗದು ವರ್ಗಾವಣೆ ಮಾಡಬೇಕು ಎಂದು ಆಗ್ರಹಿಸಿದೆ, ಇದು ಅರ್ಥವ್ಯವಸ್ಥೆಯಲ್ಲಿ ಬೇಡಿಕೆಯನ್ನು ಹೆಚ್ಚಿಸಿ, ಪೂರೈಕೆಯನ್ನು ಸ್ಫುರಿಸಿ ಅರ್ಥವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸುತ್ತದೆ ಎಂದು ಹೇಳಿದೆ.

ವಿನಾಶಕಾರೀ ನಿರ್ಧಾರಕ್ಕೆ ಪ್ರತಿರೋಧದ ದಮನಕ್ಕೆ ಸುಗ್ರೀವಾಜ್ಞೆ–ಸಿಐಟಿಯು ಖಂಡನೆ

ಯುದ್ಧಸಾಮಗ್ರಿ ಕಾರ್ಖಾನೆಗಳ ಮಂಡಳಿ(ಒಎಫ್‌ಬಿ)ಯನ್ನು ವಿಸರ್ಜಿಸಿ ಅದರ ಅಡಿಯಲ್ಲಿರುವ 44 ಕಾರ್ಖಾನೆಗಳನ್ನು ಏಳು ಕಾರ್ಪೊರೇಟ್‌ಗಳಾಗಿ ಮಾಡುವ ಕೇಂದ್ರ ಸರಕಾರದ ನಿರ್ಧಾರ ಕ್ರಮೇಣ ಈ ವಲಯವನ್ನು ಖಾಸಗೀಕರಿಸಿ ವಿದೇಶಿ ಕಂಪನಿಗಳಿಗೆ ತೆರೆಯುವ ಹುನ್ನಾರವನ್ನು ಹೊಂದಿದೆ. ಇದು ದೇಶದ ರಕ್ಷಣಾ ಹಿತಗಳಿಗೆ ವಿನಾಶಕಾರಿ ಎಂದು ಅದನ್ನು ಬಲವಾಗಿ ವಿರೋಧಿಸುತ್ತಿರುವ ರಕ್ಷಣಾ ಉತ್ಪಾದನಾ ವಲಯದ ಕಾರ್ಮಿಕರು ಜೂನ್ 19ರ ಆರಂಭಿಕ ಪ್ರತಿಭಟನೆಯ ನಂತರ ಜುಲೈ 26 ರಿಂದ ಅನಿರ್ದಿಷ್ಟ ಅವಧಿಯ ಮುಷ್ಕರ ನಡೆಸಲು ನಿರ್ಧರಿಸಿದ್ದರು. ಇದನ್ನು ಬಗ್ಗುಬಡಿಯಲು ಕೇಂದ್ರ ಸರಕಾರ ಜೂನ್ 30ರಂದು 'ಅಗತ್ಯ ರಕ್ಷಣಾ ಸೇವೆಗಳ ಸುಗ್ರೀವಾಜ್ಞೆ 2021'ನ್ನು ಜಾರಿ ಮಾಡಿದೆ. ಇದನ್ನು ಸಿಐಟಿಯು ಬಲವಾಗಿ ಖಂಡಿಸಿದೆ. ರಕ್ಷಣಾ ಉತ್ಪಾದನೆಯನ್ನು ಖಾಸಗೀಕರಿಸುವ ಮತ್ತು ವಿದೇಶಿ ಕಂಪನಿಗಳಿಗೆ ಇದರಲ್ಲಿ ಪ್ರವೇಶಕ್ಕೆ ಅವಕಾಶ ಕೊಡುವ ಕ್ರಮಗಳ ವಿರುದ್ಧ ತೀವ್ರ ಹೋರಾಟಕ್ಕೆ ಇಳಿದಿರುವ ವಲಯದ ನೌಕರರ ಒಕ್ಕೂಟಗಳ ಜಂಟಿ ವೇದಿಕೆಯ ಐಕ್ಯ ಹೋರಾಟಗಳಿಗೆ ದೇಶದ ಸಮಸ್ತ ಕಾರ್ಮಿಕ ಆಂದೋಲನ ಸಂಪೂರ್ಣ ಬೆಂಬಲವನ್ನು ಕೊಡುತ್ತದೆ ಎಂದಿರುವ ಸಿಐಟಿಯು, ಈ ಸುಗ್ರೀವಾಜ್ಞೆಯನ್ನು ಹಿಂತೆಗೆದುಕೊಳ್ಳಬೇಕು ಮತ್ತು ಯುದ್ಧಸಾಮಗ್ರಿಗಳ ಕಾರ್ಖಾನೆಗಳ ಕಾರ್ಪೊರೇಟೀಕರಣದ ವಿನಾಶಕಾರಿ ನಡೆಯನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದೆ.

"ಕೃಷಿ ಉಳಿಸಿ–ಪ್ರಜಾಪ್ರಭುತ್ವ ಉಳಿಸಿ" ಕರೆಗೆ ದುಡಿಯುವ ಜನರ ಭಾರೀ ಬೆಂಬಲ: ಎಐಕೆಎಸ್ ಅಭಿನಂದನೆ



ಜೂನ್ 26ರ "ಕೃಷಿ ಉಳಿಸಿ–ಪ್ರಜಾಪ್ರಭುತ್ವ ಉಳಿಸಿ" ಕರೆಗೆ ದೇಶಾದ್ಯಂತ ದುಡಿಯುವ ಜನರಿಂದ ಭಾರೀ ಸ್ಪಂದನೆ ದೊರೆತಿದೆ. ಸುಮಾರಾಗಿ ಎಲ್ಲ ರಾಜ್ಯಗಳ ರಾಜಧಾನಿಗಳಲ್ಲಿ 'ರಾಜಭವನ'ಗಳ ಮುಂದೆ ಲಕ್ಷಾಂತರ ಜನರು ಪ್ರತಿಭಟನೆ ನಡೆಸಿದ್ದಾರೆ. ಸಂಯುಕ್ತ ಕಿಸಾನ್ ಮೋರ್ಚಾ, ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ ಮತ್ತು ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಎಲ್ಲ ಘಟಕಗಳು ಇದರಲ್ಲಿ ಭಾಗವಹಿಸಿದ್ದು, ಎಲ್ಲರಿಗೂ ಅಖಿಲ ಭಾರತ ಕಿಸಾನ್ ಸಭಾ ಹಾರ್ದಿಕ ಅಭಿನಂದನೆ ಸಲ್ಲಿಸಿದೆ.



ದಿಲ್ಲಿ ಗಡಿಗಳಲ್ಲಿ ರೈತರ ಐತಿಹಾಸಿಕ ಹೋರಾಟಕ್ಕೆ ಏಳು ತಿಂಗಳು ಆಗಿರುವ ಸಂದರ್ಭದಲ್ಲಿ, ಮೋದಿ ನೇತೃತ್ವದ ಬಿಜೆಪಿ–ಆರೆಸ್ಸೆಸ್ ಸರಕಾರದ ಅಘೋಷಿತ ತುರ್ತು ಪರಿಸ್ಥಿತಿಯ ವಿರುದ್ಧ ಸಂಯುಕ್ತ ಕಿಸಾನ್ ಮೋರ್ಚಾ ಈ ಕಾರ್ಯಾಚರಣೆಗೆ ಕರೆ ನೀಡಿತ್ತು. ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆ ಇದನ್ನು ಬೆಂಬಲಿಸಿತ್ತು.

ಸುಮಾರಾಗಿ ಎಲ್ಲ ರಾಜ್ಯಗಳಲ್ಲಿ 'ರಾಜಭವನ ಚಲೋ' ಮಾತ್ರವಲ್ಲದೆ, ಸಾವಿರಾರು ಜಿಲ್ಲೆಗಳು, ತಹಸೀಲುಗಳು ಮತ್ತು ಗ್ರಾಮಗಳಲ್ಲಿಯೂ ಈ ಪ್ರತಿಭಟನಾ ಕಾರ್ಯಾಚರಣೆ ನಡೆದಿದೆ ಎಂದು ಎಐಕೆಎಸ್ ಹೇಳಿದೆ. ಸಾಮಾಜಿಕ ಮಾಧ್ಯಮಗಳಲ್ಲಿ ಈ ಬಗ್ಗೆ ವ್ಯಾಪಕ ಪ್ರಚಾರವೂ ನಡೆಯಿತು. ಮುಖ್ಯಧಾರೆಯ ಮಾಧ್ಯಮಗಳೂ ಈ ಕಾರ್ಯಾಚರಣೆಯನ್ನು ಗಮನಿಸದೆ ಇರಲು ಸಾಧ್ಯವಾಗಲಿಲ್ಲ ಎಂದು ಎಐಕೆಎಸ್ ಹೇಳಿದೆ.

ಈ ಭಾರೀ ಯಶಸ್ವಿ ಕಾರ್ಯಾಚರಣೆಯಲ್ಲಿ ಎಐಕೆಎಸ್ ಘಟಕಗಳಲ್ಲದೆ, ಸಿಐಟಿಯು, ಎಐಎಡಬ್ಲ್ಯುಯು, ಎಐಡಿಡಬ್ಲ್ಯುಎ, ಡಿವೈಎಫ್‌ಐ ಮತ್ತು ಎಸ್‌ಎಫ್‌ಐ ಘಟಕಗಳೂ ದೊಡ್ಡ ಪಾತ್ರ ವಹಿಸಿವೆ ಎಂದು ಅವರನ್ನು ವಿಶೇಷವಾಗಿ ಅಭಿನಂದಿಸುತ್ತ ಎಐಕೆಎಸ್ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ, ಈ ಹೋರಾಟ ಮೋದಿ ಸರಕಾರದ ಕಾರ್ಪೊರೇಟ್–ಪರ, ಜನವಿರೋಧಿ, ಸರ್ವಾಧಿಕಾರಶಾಹೀ, ಕೋಮುವಾದಿ ಮತ್ತು ಫ್ಯಾಸಿಸ್ಟ್ ತೆರನ ಆಳ್ವಿಕೆಯ ವಿರುದ್ಧ ಗೆಲುವು ಸಾಧಿಸುವ ವರೆಗೂ ಈ ಹೋರಾಟ ಇನ್ನಷ್ಟು ಹೆಚ್ಚಿನ ಶಕ್ತಿಯೊಂದಿಗೆ ಮುಂದುವರೆಯುತ್ತದೆ ಎಂದು ಹೇಳಿದ್ದಾರೆ.

ಸಂಪಾದಕೀಯ

ಉದ್ಯೋಗ ಖಾತ್ರಿ ಕೆಲಸಗಾರರು ಕಾರ್ಮಿಕರಲ್ಲವೆ?

ಯಾಕೆ ಈ ತಾರತಮ್ಯ? ಉದ್ಯೋಗ ಖಾತ್ರಿ ಕಾಯ್ದೆ ಅಡಿಯಲ್ಲಿ ನಿರ್ದಿಷ್ಟ ಪ್ರಮಾಣದ ಕೆಲಸವನ್ನು ಮಾಡುವ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕೆಲಸಗಾರರಿಗೆ ಯಾವುದೇ ಕಾರ್ಮಿಕ ಕಾಯ್ದೆಯನ್ನು ಅನ್ವಯಿಸುವುದಿಲ್ಲ ಯಾಕೆ?

ಭಾರತ ದೇಶದ ನಮ್ಮ ಸಮಾಜವು ಅಸಮಾನತೆಗಳ, ತಾರತಮ್ಯಗಳ ತವರೂರಾಗಿದೆ. ಅಲ್ಲಿ ಜಾತಿ ಆಧಾರಿತ ಅಸಮಾನತೆ ಶತಮಾನಗಳಿಂದ ಜೀವಂತವಾಗಿದ್ದು ಸಾಮಾಜಿಕ ನ್ಯಾಯವನ್ನು ತುಳಿಯುತ್ತಾ ಬಂದಿದೆ. ಯಾವುದೇ ವೈಜ್ಞಾನಿಕ ಆಧಾರವಿಲ್ಲದ ಈ ಸಾಮಾಜಿಕ ಅಸಮಾನತೆಯನ್ನು ನಮ್ಮ ಧರ್ಮಶಾಸ್ತ್ರಗಳು ಬೆಂಬಲಿಸುತ್ತಾ ಬಂದಿವೆ. ದೇಶಕ್ಕೆ ಸ್ವಾತಂತ್ರ್ಯ ದೊರೆತು ರಾಜಕೀಯ ಸಮಾನತೆ ಸಾಧ್ಯವಾಗಿದ್ದರೂ ಆಳುವ ವರ್ಗಗಳ ಧೋರಣೆಗಳಿಂದಾಗಿ ಸಮಾಜದಲ್ಲಿ ಅನೇಕ ತರಹದ ಅಸಮಾನತೆ ಮುಂದುವರೆಯುತ್ತಿದೆ.

ಒಂದಾಗಿ ಇರಬೇಕಾದ ಕಾರ್ಮಿಕ ವರ್ಗವನ್ನೂ ಇಲ್ಲಿ ಒಡೆದು ಅವರ ನಡುವೆ ತಾರತಮ್ಯ ಬೇರೂರುವಂತೆ ಮಾಡಲಾಗಿದೆ. ಅವರ ದುಡಿಮೆಯನ್ನು ಪರಿಗಣಿಸುವ ವಿಧಾನದಲ್ಲಿ, ಅವರಿಗೆ ನೀಡುವ ವೇತನ ಮತ್ತಿತರ ಸೌಲಭ್ಯಗಳ ವಿಷಯದಲ್ಲಿ ಸಹ ತಾರತಮ್ಯ ರಾರಾಜಿಸುತ್ತದೆ.

ಅಂಗನವಾಡಿಗಳಲ್ಲಿ ಕೆಲಸ ಮಾಡುವ ಮಹಿಳೆಯರು ಸಮಾಜಕ್ಕೆ ಅಮೂಲ್ಯವಾದ ಸೇವೆ ಸಲ್ಲಿಸುತ್ತಿದ್ದರೂ ಅವರ ದುಡಿಮೆಯನ್ನು ಕಾರ್ಮಿಕ ದುಡಿಮೆಯಾಗಿ ಪರಿಗಣಿಸಲು ಜನರಿಂದ ಆಯ್ಕೆಯಾದ ಸರ್ಕಾರ ಹಿಂದೇಟು ಹಾಕುತ್ತಾ ಬಂದಿದೆ. ಬೆಲೆಕಟ್ಟಲಾಗದ ಸೇವೆ ಸಲ್ಲಿಸುತ್ತಿರುವ, ಕೊರೊನಾದಂತಹ ಸಾಂಕ್ರಾಮಿಕವನ್ನು ತಮ್ಮ ಜೀವದ ಹಂಗು ತೊರೆದು ಎದುರಿಸಿ ಕಾರ್ಯನಿರ್ವಹಿಸುತ್ತಿರುವ ಆಶಾ ಮೊದಲಾದ ಕೆಲಸಗಾರರನ್ನು ಕಾರ್ಮಿಕರೆಂದು ಪರಿಗಣಿಸಿ ಯೋಗ್ಯ ವೇತನ ಸೌಲಭ್ಯಗಳನ್ನು ನೀಡುವುದು ಹೊರೆ ಎಂದು ಪರಿಗಣಿಸುವ ಸರ್ಕಾರ ಈ ದೇಶದಲ್ಲಿದೆ.

ಕಟ್ಟಡ ನಿರ್ಮಾಣ ಕೆಲಸದಲ್ಲಿ ತೊಡಗಿರುವ ಅಕುಶಲ ದುಡಿಮೆಗಾರರಿಗೆ ಕಾರ್ಮಿಕ ಕಾನೂನುಗಳ ಅಡಿಯಲ್ಲಿ ಕೆಲವು ಸೌಲಭ್ಯಗಳು ದೊರೆಯುತ್ತಿವೆ. ಇದೊಂದು ಸ್ವಾಗತಾರ್ಹ ವಿಷಯವೇ ಆಗಿದೆ. ಆದರೆ ಅವರಿಗೆ ನೀಡುವ ಸೌಲಭ್ಯಗಳಿಗಾಗಿ ಅವರ ವೇತನದಿಂದ ಮತ್ತು ಕಟ್ಟಡದ ಮಾಲೀಕನಿಂದ ವಸೂಲಿ ಮಾಡಲಾದ ಕಾರ್ಮಿಕರಿಗೇ ಸೇರಬೇಕಾದ ಹಣವನ್ನು ಬಳಸಲಾಗುತ್ತದೆ ಎಂಬುದನ್ನು ಮರೆಮಾಚಲಾಗುತ್ತದೆ.

ಉದ್ಯೋಗ ಖಾತ್ರಿ ಕಾಯ್ದೆ ಅಡಿಯಲ್ಲಿ ದುಡಿಯುತ್ತಿರುವ ಕೆಲಸಗಾರರು ನಮಗ್ಯಾಕೆ ಅಂತಹ ಸೌಲಭ್ಯಗಳಿಲ್ಲ ಎಂದು ಸಹಜವಾಗಿ ಕೇಳುತ್ತಾರೆ. ಅವರು ತಮ್ಮ ಬಾಳಿನ ಗೋಳಿಗೆ ತಮ್ಮನ್ನೇ ಶಪಿಸಿಕೊಳ್ಳುತ್ತಾರೆ. ಇಲ್ಲಿ ಸರ್ಕಾರದ ಧೋರಣೆ ಮುಖ್ಯವಾಗುತ್ತದೆ. ಅಸಂಘಟಿತ ವಲಯದಲ್ಲಿ ಕೆಲಸಮಾಡುತ್ತಿರುವ ಎಲ್ಲ ದುಡಿಮೆಗಾರರನ್ನು ಕಾರ್ಮಿಕರಾಗಿ ಸಮಾನರಾಗಿ ಕಾಣುವುದು, ಸಮಾನ ಸೌಲಭ್ಯಗಳನ್ನು ನೀಡುವುದು ಒಂದು ಜನಪರವಾದ ಸರ್ಕಾರದ ಜವಾಬ್ದಾರಿಯಾಗಿದೆ. ಅಂತಹ ಒಂದು ಸರ್ಕಾರವನ್ನು ಕರ್ನಾಟಕದಲ್ಲಿ ಅಸ್ತಿತ್ವಕ್ಕೆ ತರಲು ನಮಗೆ ಸಾಧ್ಯವಾಗದಿರುವುದು ಒಂದು ದುರಂತ.

ತಮ್ಮ ಶ್ರಮ ಶಕ್ತಿಯನ್ನು ಮಾರಾಟ ಮಾಡಿ ಜೀವನ ಸಾಗಿಸುವವರೆಲ್ಲರೂ ಕಾರ್ಮಿಕರು. ಸಂಬಂಧಪಟ್ಟ ಎಲ್ಲ ಕಾರ್ಮಿಕ ಕಾನೂನುಗಳನ್ನು ಅವರೆಲ್ಲರಿಗೂ ಅನ್ವಯಿಸುವುದಾಗಬೇಕು. ಅವರೆಲ್ಲರೂ ತಮ್ಮ ಶ್ರಮ ಶಕ್ತಿಯನ್ನು ಮಾರಾಟ ಮಾಡಿ ಬದುಕುತ್ತಿರುವುದರಿಂದ ಅವರೆಲ್ಲರನ್ನು ಕಾರ್ಮಿಕರೆಂದು ಪರಿಗಣಿಸಬೇಕು. ಅವರಿಗೆ ಸಮಾನವಾದ ವೇತನ ಹಾಗೂ ಇತರ ಸೌಲಭ್ಯಗಳನ್ನು ನೀಡಬೇಕು.

ಕೃಷಿ ರಂಗದಲ್ಲಿ ಕೂಲಿಗಾಗಿ ಕೆಲಸ ಮಾಡುವವರು ಸಹ ಕಾರ್ಮಿಕರಾಗಿರುತ್ತಾರೆ. ಅದ್ದರಿಂದ ಕಾರ್ಮಿಕ ಕಾನೂನುಗಳನ್ನು ಕೃಷಿ ಕೂಲಿಕಾರರಿಗೂ ಸಮಾನವಾಗಿ ಅನ್ವಯಿಸಬೇಕು. ಇತ್ತೀಚೆಗೆ ರಾಜ್ಯ ಸರ್ಕಾರ ಕೋವಿಡ್ ಹಿನ್ನೆಲೆಯಲ್ಲಿ ಆರ್ಥಿಕ ನೆರವು ಘೋಷಣೆ ಮಾಡಿತ್ತು. ಮುಖ್ಯ ಮಂತ್ರಿ ಯಡಿಯೂರಪ್ಪ ಪ್ರಕಟಿಸಿದ ಈ ನೆರವು ಅತ್ಯಂತ ಕನಿಷ್ಠವಾದುದು. ಆದರೂ ಅದು ಸ್ವಾಗತಾರ್ಹವೇ. ಆದರೆ ಈ ಪ್ಯಾಕೇಜ್ ಎಲ್ಲ ವಲಸೆ ಕಾರ್ಮಿಕರಿಗೆ ತಲುಪುವಂತೆ ಕಾಣುವುದಿಲ್ಲ. ಕೇವಲ ಕೆಲವರಿಗೆ ಕೊಟ್ಟು ಅದರ ಚುನಾವಣಾ ಲಾಭ ಪಡೆಯಲು ಬಿಜೆಪಿಯವರು ಹೊರಟಂತೆ ಕಾಣುತ್ತಿದೆ. ಕೃಷಿ ಕಾರ್ಮಿಕರಿಗಂತೂ ಅವರು ಏನನ್ನೂ ಕೊಡಲಿಲ್ಲ. ದೊಡ್ಡ ಸಂಖ್ಯೆಯಲ್ಲಿರುವ, ವರ್ಷವಿಡಿ ಕೆಲಸದ ಭರವಸೆ ಇಲ್ಲದೆ ಉಪವಾಸ ವನವಾಸ ಅನುಭವಿಸುವ ಕೃಷಿ ಕೂಲಿಕಾರರಿಗೆ ಸರ್ಕಾರ ದೊಡ್ಡ ಅನ್ಯಾಯ ಮಾಡಿದೆ. ಕೃಷಿ ಕೂಲಿಕಾರರ ಯಾವುದೇ ಮಾಹಿತಿಯನ್ನು ಸರ್ಕಾರ ಸಂಗ್ರಹ ಮಾಡುವುದಿಲ್ಲ. ಕೃಷಿ ಕೂಲಿಕಾರರ ಸಂಘಟನೆಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಸರ್ಕಾರದ ಈ ಪಕ್ಷಪಾತದ ಧೋರಣೆ ವಿರುದ್ಧ ಪ್ರಬಲವಾದ ಚಳುವಳಿ ಒಂದೇ ಇದಕ್ಕೆ ಪರಿಹಾರ.

ಒಂದೇ ಕುಟುಂಬದ ಆರು ಜನರ ಸಾವು: ಸ್ಥಳಕ್ಕೆ ನಿಯೋಗ ಭೇಟಿ



ಶಹಾಪುರ ತಾಲ್ಲೂಕಿನ ದೋರನಹಳ್ಳಿ ಗ್ರಾಮದಲ್ಲಿ ಎರಡು ದಿನಗಳ ಹಿಂದೆ ಒಂದೇ ಕುಟುಂಬದ ಆರು ಜನರ ಸಾವನ್ನಪ್ಪಿದ್ದ ಘಟನೆ ನಡೆದಿತ್ತು. ಇಲ್ಲಿಗೆ ಮಹಿಳಾ–ಕೃಷಿ ಕೂಲಿಕಾರರು ಮತ್ತು ರೈತ ಸಂಘಟನೆಯ ಮುಖಂಡರು ಭೇಟಿ ನೀಡಿ ಪರಿಸ್ಥಿತಿಯ ಬಗ್ಗೆ ಅವಲೋಕನ ಮಾಡಿದರು.

ಮೃತ ಪಟ್ಟಿರುವವರು ಭೀಮರಾಯ್ ಸುರಪುರ, ಶಾಂತಮ್ಮ ಇವರ ಕುಟುಂಬದ ಸದಸ್ಯರ ಪರಸ್ಥಿತಿಯ ಬಗ್ಗೆ ಭೇಟಿ ಮಾಡಿ ಸಾಂತ್ವನ ಹೇಳಲಾಯಿತು. ಮೃತ ಭೀಮರಾಯನ ವೃದ್ಧ ತಾಯಿ ಶರಣಮ್ಮ (ತೊಂಬತ್ತಕ್ಕೂ ಹೆಚ್ಚು ವಯೋಮಾನವುಳ್ಳವರು) ಮತ್ತು ಮಗಳು ಚಂದ್ರಕಲಾ ಹಾಗೂ ಸಹೋದರ ಸಹೋದರಿಯರ ದುಃಖದ ಕಟ್ಟೆ ಒಡೆದು ಹೋಗಿತ್ತು. ಸಾಮೂಹಿಕವಾದ ಈ ದಾರುಣ ಸಾವಿನ ಕುರಿತು ಉನ್ನತ ಮಟ್ಟದ ತನಿಖೆ ನಡೆಸಬೇಕೆಂದು ಆಗ್ರಹಿಸಿದರು.

ಖಾಸಗಿ ಹಣಕಾಸು ಸಂಸ್ಥೆಗಳು ಸಾಲ ಕೊಡುವ ಒತ್ತಡ ಹೇರಿ 26%–30% ವರೆಗೆ ಬಡ್ಡಿ ವಸೂಲಿ ಮಾಡಿ ಸಾಲಗಾರರನ್ನು ಇನ್ನಷ್ಟು ಸಂಕಟದ ಕೂಪಕ್ಕೆ ತಳ್ಳುತ್ತಿರುವುದು ನಿಯೋಗವು ಗಮನಿಸಿತು. **NEXTRU RBL bank** ಎಂಬ ಸಂಸ್ಥೆಯು ಮೃತ ಶಾಂತಾಬಾಯಿಗೆ ರೂ. 30,000 ಸಾಲ ಕೊಟ್ಟಿದೆ. ಸಾಲ ಕೊಡುವಾಗಲೇ 2,000 ರೂ ಬಡ್ಡಿ ಕಡಿತವೂ ಮಾಡಿಕೊಂಡಿದೆ. ಈ ಸಾಲವು ಸಂಪೂರ್ಣ ಮನ್ನಾ ಮಾಡಬೇಕೆಂದು ಆಗ್ರಹಿಸಲಾಯಿತು.

ತೀವ್ರ ಸಾಲದ ಹಿನ್ನೆಲೆಯಲ್ಲಿ ಈ ಸಾವುಗಳು ಘಟಿಸಿವೆ. ಸರಕಾರವು ಇಂತಹ ಸಾವುಗಳಿಂದ ಜನತೆಯನ್ನು ರಕ್ಷಿಸಬೇಕಿದೆ. ಕೇರಳ ಸರಕಾರದ ಮಾದರಿಯಲ್ಲಿ ಖಾಸಗಿ ಮತ್ತು ಸರಕಾರಿ ಸಾಲವನ್ನು ಮನ್ನಾ ಮಾಡಬೇಕು.

ಮೃತ ಭೀಮರಾಯ, ಶಾಂತಾಬಾಯಿ ದಂಪತಿಗಳ ಮಗಳೊಬ್ಬಳು ಮಾತ್ರ ಉಳಿದಿದ್ದಾಳೆ. ಮಹಿಳಾ ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಅವಳಿಗೆ ಉದ್ಯೋಗ ಕೊಡಲು ಸಾಧ್ಯವಾಗಬೇಕು. ಅವರ ವಯೋವೃದ್ಧ ತಾಯಿಗೆ ವೃದ್ಧಾಪ್ಯ ವೇತನವು ದೊರೆಯುವಂತೆ ಮಾಡಬೇಕು ಹಾಗೂ ಮೃತರ ಕುಟುಂಬಕ್ಕೆ ಪರಿಹಾರ ಒದಗಿಸಬೇಕು ಎಂದು ನಿಯೋಗವು ಆಗ್ರಹಿಸಿದೆ.

ಯೋಗವು ಇದೇ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಕಚೇರಿಗೂ ಭೇಟಿ ಮಾಡಿ. ಪಂಚಾಯತ ಅಭಿವೃದ್ಧಿ ಅಧಿಕಾರಿ ಹಾಗೂ ಗ್ರಾಮ ಪಂಚಾಯತ್ ಸದಸ್ಯರೊಂದಿಗೆ ಚರ್ಚಿಸಲಾಯಿತು. ಕೂಡಲೇ ಸಾಮಾಜಿಕ ನ್ಯಾಯ ಸಮಿತಿ ಸಭೆ ಸೇರಿ ಸಾಮೂಹಿಕ ಸಾವಿನ ಕುರಿತು ಚರ್ಚಿಸಿ ಆ ಕುಟುಂಬಕ್ಕೆ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಬೇಕೆಂದು ಆಗ್ರಹಿಸಲಾಯಿತು. ಅಂಗನವಾಡಿ ಅಕ್ಕಂದಿರರ ಮೂಲಕ ಸ್ತ್ರೀ ಶಕ್ತಿ ಸಂಘಗಳನ್ನು ಪುನರುಜ್ಜೀವನಗೊಳಿಸಬೇಕೆಂದು ಆಗ್ರಹಿಸಲಾಯಿತು.

ಗ್ರಾಮದಲ್ಲಿ ಸ್ತ್ರೀ ಶಕ್ತಿ ಸಂಘ, ಸ್ವ ಸಹಾಯ ಸಂಘಗಳ ಪುನರುಜ್ಜೀವನ ಮಾಡಿ ಖಾಸಗಿ ಹಣಕಾಸು ಏಜೆನ್ಸಿಗಳ ಅಗಾಧ ಬಡ್ಡಿ ವಸೂಲಾತಿಯಿಂದ ಬಚಾವು ಮಾಡಬೇಕು. ಸರಕಾರಿ ಬ್ಯಾಂಕುಗಳಿಂದಲೇ ಜನತೆಗೆ ಸಾಲ ಸೌಲಭ್ಯ ದೊರಕುವಂತೆ ಕ್ರಮ ವಹಿಸಬೇಕೆಂದು ಸರಕಾರಕ್ಕೆ ಆಗ್ರಹಿಸಿದರು.

ಸಗರ ನಾಡಿನ ಬೆಳೆಗಳಾದ ಹತ್ತಿ, ತೊಗರಿ, ಭತ್ತ, ಶೇಂಗಾ ಮತ್ತು ತೋಟಗಾರಿಕೆ ಬೆಳೆಗಳಾದ ಹಣ್ಣು ಹಂಪಲಗಳ ಬೆಲೆಯ ತೀವ್ರ ಕುಸಿತದಿಂದ ರೈತರು ಸಾಲಗಾರರಾಗಿದ್ದಾರೆ, ಸಾಲ ಕಟ್ಟಲಾಗದೆ ಅಸಹಾಯಕರಾಗಿದ್ದಾರೆ ಮತ್ತು ಕಂಗಾಲಾಗಿದ್ದಾರೆ. ಇದಕ್ಕೆಲ್ಲ ಕೇಂದ್ರ ಮತ್ತು ರಾಜ್ಯ ಸರಕಾರದ ರೈತ ವಿರೋಧಿ ನೀತಿಗಳೇ ಕಾರಣವಾಗಿವೆ. ಈ ಸಾವುಗಳು ಪ್ರಭುತ್ವದ ಹತ್ಯೆಗಳೇ ಆಗಿವೆ. ಇದಕ್ಕೆ ಕೇಂದ್ರ ಮತ್ತು ಸರಕಾರಗಳೇ ಹೊಣೆಯಾಗಿವೆ ಎಂದು ತಿಳಿಸಿದರು.

ನಿಯೋಗದಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷೆ ಕೆ ನೀಲಾ, ಕರ್ನಾಟಕ ಪ್ರಾಂತ ರೈತ ಸಂಘದ ಯಾದಗಿರಿ ಜಿಲ್ಲಾ ಉಪಾಧ್ಯಕ್ಷರಾದ ಚನ್ನಪ್ಪ ಆನೆಗುಂದಿ, ಜಿಲ್ಲಾ ಕಾರ್ಯದರ್ಶಿ ಎಸ್ ಎಂ ಸಾಗರ್, ಕರ್ನಾಟಕ ಪ್ರಾಂತ ಕೃಷಿ ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಅಧ್ಯಕ್ಷ ದಾವುಲಸಾಬ್, ಸಿಐಟಿಯು ತಾಲ್ಲೂಕು ಸಂಚಾಲಕ ಮಲ್ಲಯ್ಯ ಪೋಲಂಪಳ್ಳಿ ಮುಂತಾದವರು ಭೇಟಿ ನೀಡಿದ್ದಾರೆ.



ಮರೆಯಲಾಗದ ಪ್ರಾಣ ಸ್ನೇಹಿತ ಶ್ರೀನಿವಾಸ ಬಜಾಲ್

2002 ಜೂನ್ 24, ನನ್ನ ಮನಸ್ಸನ್ನು ಅತಿಯಾಗಿ ಘಾಸಿಗೊಳಿಸಿದ ದಿನ. ನನ್ನ ಪ್ರಾಣ ಸ್ನೇಹಿತನಾಗಿದ್ದ ಕಾಂ. ಶ್ರೀನಿವಾಸ ಬಜಾಲ್ ನನ್ನು ಕಳೆದುಕೊಂಡ ದಿನ. ಅತ್ಯಲ್ಪ ಕಾಲದ ನಮ್ಮ ಗೆಳೆತನ, ಒಡನಾಟ ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ.

1991 ಜೂನ್ ತಿಂಗಳು, 8ನೇ ತರಗತಿ ಶಿಕ್ಷಣಕ್ಕಾಗಿ ದೂರದ ಗೋರಿಗುಡ್ಡದ ಕಿಟ್ಟೆಲ್ ಮೆಮೋರಿಯಲ್ ಹೈಸ್ಕೂಲ್ ಗೆ ಸೇರ್ಪಡೆಗೊಂಡೆ. ಕಿರಿಯ ವಿದ್ಯಾರ್ಥಿಗಳನ್ನು ಹಿರಿಯ ವಿದ್ಯಾರ್ಥಿಗಳು ಕೀಟಲೆ ಮಾಡುವುದು ಉಪದ್ರ ನೀಡುವುದು ಸರ್ವೆ ಸಾಮಾನ್ಯವಾಗಿತ್ತು. ಆದರೆ 10ನೇ ತರಗತಿಯಲ್ಲಿ ಕಲಿಯುತ್ತಿದ್ದ ಶ್ರೀನಿವಾಸ ಇದಕ್ಕೆ ವ್ಯತಿರಿಕ್ತವಾಗಿದ್ದ. ಮಾತ್ರವಲ್ಲದೆ ಕಿರಿಯ ವಿದ್ಯಾರ್ಥಿಗಳ ಪ್ರೀತಿಗೆ ಪಾತ್ರನಾಗಿದ್ದ. ಎಳೆಯ ಪ್ರಾಯದಲ್ಲೇ ತಮ್ಮ ಉತ್ತಮ ಗುಣನಡತೆಯಿಂದ ಶಾಲೆಯ ಅಧ್ಯಾಪಕರ ವಿದ್ಯಾರ್ಥಿಗಳ ಹೃದಯ ಗೆದ್ದು ನಿಜವಾದ ನಾಯಕನಾಗಿದ್ದ. ನನಗಂತೂ ಅವನ ಗುಣ, ಹಾಸ್ಯ ಪ್ರಜ್ಞೆತುಂಬಾ ಹಿಡಿಸಿತ್ತು. ಸಾಂಸ್ಕೃತಿಕ ಚಟುವಟಿಕೆಯಲ್ಲಿ ನಾವಿಬ್ಬರೂ ಸಮಾನ ಅಭಿರುಚಿ ಹೊಂದಿದ್ದರಿಂದ ಶಾಲೆಯ ಪ್ರತಿಯೊಂದು ಕಾರ್ಯಕ್ರಮ ಗಳಲ್ಲಿ ಒಟ್ಟಾಗಿ ಭಾಗವಹಿಸುತ್ತಿದ್ದೆವು. ಇದೇ ಶಾಲೆಯಲ್ಲಿ ಅಧ್ಯಾಪಕರಾಗಿದ್ದ ಹಿರಿಯ ನಾಟಕ ಕಲಾವಿದರಾದ ರಮಾ ಬಿಸಿ ರೋಡ್ ರವರ ಮಾರ್ಗದರ್ಶನದಲ್ಲಿ ನಡೆದ ಅನೇಕ ನಾಟಕ ತರಬೇತಿ ಹಾಗೂ ಸ್ಪರ್ಧೆಗಳಲ್ಲಿ ಭಾಗವಹಿಸಿ, ನಾವಿಬ್ಬರೂ ಜಿಲ್ಲಾ ಮಟ್ಟದ ಉತ್ತಮ ನಟ ಪ್ರಶಸ್ತಿಗಳನ್ನು ಪಡೆದೆವು. ಇದರಲ್ಲಿ ಓಡುವವರು ಎಂಬ ನಾಟಕ ಹಲವಾರು ಪ್ರದರ್ಶನವನ್ನು ಕಂಡಿತು. ಶಾಲಾ ವಾರ್ಷಿಕೋತ್ಸವಕ್ಕೆ ಅಭಿವ್ಯಕ್ತ ಮಂಗಳೂರು ಇದರ ನಿರ್ದೇಶಕರಾದ ರಾಜಶೇಖರ್ ರವರ ನಾಟಕ ಅಧ್ವಾನಪುರದಲ್ಲೂ ನಾವಿಬ್ಬರೂ ಜೊತೆಯಾಗಿ ಅಬಿನಯಿಸಿದೆವು.

ಇದೇ ಸಂಧರ್ಭದಲ್ಲಿ ಎಕ್ಕೂರಿನಲ್ಲಿ ಬಾಡಿಗೆ ಮನೆಯೊಂದರಲ್ಲಿ ವಾಸವಾಗಿದ್ದ ಶ್ರೀನಿವಾಸನ ಕುಟುಂಬ ನನ್ನ ಮನೆಯ ಹತ್ತಿರದ ಮನೆಯೊಂದಕ್ಕೆ ವಾಸ ಬದಲಾಯಿಸಿದರು. ಹೀಗೆ ನಾವಿಬ್ಬರೂ ಮತ್ತಷ್ಟು ಆತ್ಮೀಯರಾದೆವು. ಹೊಸ ಪ್ರದೇಶವಾದರೂ ಅಲ್ಲಿನ ಹುಡುಗರಿಗೆ ನಾನು ಶ್ರೀನಿವಾಸನನ್ನು ಪರಿಚಯಿಸಿದೆ. ಆದಷ್ಟು ಬೇಗ ಎಲ್ಲರ ಜೊತೆ ಬೆರೆತುಕೊಂಡ. ಕ್ರಿಕೆಟ್ ಆಸಕ್ತಿಯನ್ನು ಬೆಳೆಸಿಕೊಂಡ ಶ್ರೀನಿವಾಸ, ಸ್ಥಳೀಯ ಪ್ರಗತಿ ಕ್ರಿಕೆಟರ್ಸ್ ನಲ್ಲಿ ಮುಂಚೂಣಿ ಆಟಗಾರನಾಗಿ ಎಲ್ಲರ ಪ್ರೀತಿ ಸಂಪಾದಿಸಿದ. ಮೈದಾನದಲ್ಲಿ ಶ್ರೀನಿವಾಸನ ಅಟ ನೋಡುವುದೆಂದರೆ ನಿಜಕ್ಕೂ ರೋಮಾಂಚನ. ರವಿವಾರ ಬಂತೆಂದರೆ ಕ್ರಿಕೆಟ್ ಮ್ಯಾಚ್ ನ ಗೌಜಿ. ಎಲ್ಲರ ಬಾಯಲ್ಲೂ ಶ್ರೀನಿವಾಸನ ಬಗ್ಗೆಯೇ ಮಾತು. ಯಾಕೆಂದರೆ ಶೀನ ಇರುವ ತಂಡ ಗೆಲ್ಲುವುದು ಗ್ಯಾರಂಟಿ.

ಇದೇ ಸಂದರ್ಭದಲ್ಲಿ ನಾನು ಶ್ರೀನಿವಾಸನನ್ನು ಹತ್ತಿರದ ಪಕ್ಕಲಡ್ಕ ಯುವಕ ಮಂಡಲಕ್ಕೆ ಕರೆದೊಯ್ದು ಅಲ್ಲಿನ ಹಿರಿಯ ಕಿರಿಯ ಸದಸ್ಯರೆಲ್ಲರಿಗೂ ಪರಿಚಯಿಸಿದೆ. ಎಲ್ಲರೂ ಶ್ರೀನಿವಾಸನ ಗುಣಕ್ಕೆ ಮಾರು ಹೋದರು.ಮುಂದಕ್ಕೆ ಶ್ರೀನಿವಾಸ PYM ಕ್ರಿಕೆಟ್ ತಂಡದ ಕ್ಯಾಪ್ಟನ್ ಆಗಿ ಅದೆಷ್ಟೋ ಪ್ರಶಸ್ತಿಗಳನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾದ. ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಮುಂಚೂಣಿ ಯಲ್ಲಿದ್ದ ಶ್ರೀನಿವಾಸ ಮತ್ತು ನಾನು ಸೇರಿ ಪಕ್ಕಲಡ್ಕ ಯುವಕ ಮಂಡಲದ ಹಿರಿಯರಾದ ಸತೀಶ್ ಕುಮಾರ್ ಬಜಾಲ್, ಅಶೋಕ ಸಾಲ್ಯಾನ್, ಸುರೇಶ್ ಬಜಾಲ್, ಜಯಪ್ರಕಾಶ್ ಜಲ್ಲಿಗುಡ್ಡ ಮುಂತಾದವರ ಮಾರ್ಗದರ್ಶನ ಪಡೆದು, ಆತ್ಮೀಯ ಸ್ನೇಹಿತರಾದ ನಾಗರಾಜ್ ಬಜಾಲ್, ಸಂದೀಪ್ ಬಜಾಲ್, ದೀಪಕ್ ಬಜಾಲ್, ಸತೀಶ್ ನಾಯಕ್ ಜೊತೆ ಸೇರಿ PYM ಟ್ರೂಪ್ಸ್ ಎಂಬ ಸಾಂಸ್ಕೃತಿಕ ತಂಡವನ್ನು ಹುಟ್ಟು ಹಾಕಿದೆವು. ಬಳಿಕ ಜಿಲ್ಲಾ ರಾಜ್ಯ ಮಟ್ಟದಲ್ಲಿ ಅದೆಷ್ಟೋ ಪ್ರಶಸ್ತಿಗಳನ್ನು ಪಡೆದುಕೊಂಡೆವು. ಕ್ರೀಡೆ ಸಾಂಸ್ಕೃತಿಕ ರಂಗದಲ್ಲಿ ಗುರುತಿಸಿಕೊಂಡ ಶ್ರೀನಿವಾಸ, ಜನರ ಸಮಸ್ಯೆಗಳ ಪರಿಹಾರಕ್ಕಾಗಿ ಚಿಂತಿಸುತ್ತಾ ಉತ್ತಮ ನಾಯಕನಾಗಿ ರೂಪುಗೊಂಡ. ಸ್ಥಳೀಯ ಕೋಮುವಾದಿ ಶಕ್ತಿಗಳು ಕ್ರಿಕೆಟ್ ಆಟವನ್ನು ತನ್ನ ದಾಳವನ್ನಾಗಿಸಿ ಕ್ರಿಕೆಟ್ ಮ್ಯಾಚ್ ನಡೆಯುವ ಜಾಗದಲ್ಲಿ ಕೋಮು ಗಲಭೆ ಸ್ರಷ್ಟಿಸಲು ಹುನ್ನಾರ ನಡೆಸಿದಾಗ ಸ್ವತಃ ಶ್ರೀನಿವಾಸನೇ ಮುಂದೆ ನಿಂತು ಅದಕ್ಕೆ ಅವಕಾಶ ನೀಡಲಿಲ್ಲ. ನನ್ನ ಕೊನೆಯ ಉಸಿರು ಇರುವವರೆಗೂ ಊರಿನ ಸೌಹಾರ್ದತೆ ಹಾಳು ಮಾಡಲು ಬಿಡುವುದಿಲ್ಲ ಎಂದು ಅಬ್ಬರಿಸಿದ.ಇದು ಮತಾಂಧ ಶಕ್ತಿಗಳ ನಿದ್ದೆಗೆಡಿಸಿತು. ಸೌಹಾರ್ದತೆ ಬಯಸುವ ಸರ್ವ ಧರ್ಮದ ಜನತೆಯ ಮದ್ಯೆ ಶ್ರೀನಿವಾಸ ಮತ್ತಷ್ಟು ಕಂಗೊಳಿಸಿದ. DYFI ನಾಯಕನಾಗುವ ಮೂಲಕ ಸೌಹಾರ್ದತೆ ಹಾಗೂ ಊರಿನ ಅಭಿವೃದ್ದಿಯನ್ನೇ ಮೂಲಮಂತ್ರವನ್ನಾಗಿಸಿದ. ಊರಿನಲ್ಲಿ DYFI, CPIM ಪಕ್ಷದ ಯಾವುದೇ ಕಾರ್ಯಕ್ರಮಗಳು ನಡೆದರೆ ಸ್ವಯಂ ಸ್ಪೂರ್ತಿ ಯಿಂದ ಭಾಗವಹಿಸಿ ಇತರರಿಗೂ ಸ್ಪೂರ್ತಿಯಾಗುತ್ತಿದ್ದ. ಹಿರಿಯರನ್ನು ಹಾಗೂ ಸಂಘಟನೆಯ ಮುಖಂಡರನ್ನು ಅತೀಯಾಗಿ ಗೌರವಿಸುತ್ತಿದ್ದ. 1998ರ ಆಗಸ್ಟ್ ತಿಂಗಳಲ್ಲಿ ಒಂದು ವಾರಗಳ ಕಾಲ ಅವಿಭಜಿತ ದ.ಕ. ಜಿಲ್ಲೆಯಾದ್ಯಂತ ಸಂಚರಿಸಿದ ಸ್ವಾತಂತ್ರ್ಯ ಸಂರಕ್ಷಣಾ ಜಾಥಾ ದಲ್ಲಿ ಪ್ರಮುಖ ಕಲಾವಿದನಾಗಿ ಭಾಗವಹಿಸಿದ್ದು ಹಾಗೂ ಬೆಳ್ತಂಗಡಿಯ ಪುದುವೆಟ್ಟು ಎಂಬಲ್ಲಿ ಜರುಗಿದ 10 ದಿನಗಳ ಕಾಲ NSS ಮಾದರಿಯ ಜಿಲ್ಲಾ ಮಟ್ಟದ ಯುವಜನ ಶಿಬಿರ ದಲ್ಲಿ ಭಾಗವಹಿಸಿ ಜಿಲ್ಲೆಯಾದ್ಯಂತ ಯುವಜನ ಚಳುವಳಿಯಲ್ಲಿ ಗುರುತಿಸಿಕೊಂಡ.

ವಲೆನ್ಸಿಯಾ ಎಂಬಲ್ಲಿ ಗ್ಲಾಸ್ ಕಟ್ಟಿಂಗ್ ದುಡಿಮೆ ಮಾಡುತ್ತಾ, ವೃದ್ದ ತಾಯಿ, ಅಂಗವಿಲಕ ಅಕ್ಕನ ಪಾಲಿಗೆ ಆಸರೆಯಾಗಿ, ಮನೆಗೆ ಆಧಾರಸ್ತಂಭವಾಗಿ ರೂಪುಗೊಂಡ. ವಿದ್ಯುತ್ ಇಲ್ಲದ ಮನೆಗೆ ಕರೆಂಟ್ ಹಾಕಿಸಬೇಕೆಂಬ ಕನಸು ಕಂಡಿದ್ದ. ಹೀಗೆ ಶ್ರೀನಿವಾಸ ಮನೆಯಲ್ಲಿ ಜವಾಬ್ದಾರಿಯುತ ಮಗನಾಗಿ, ಕೆಲಸದಲ್ಲಿ ನಿಷ್ಠಾವಂತನಾಗಿ, ಸಮಾಜದಲ್ಲಿ ಉತ್ತಮ ಪ್ರಜೆಯಾಗಿ ಮೂಡಿಬರುತ್ತಿದ್ದ. ಆದರೆ ಇದನ್ನು ಸಹಿಸದ ಮತಾಂಧ ಶಕ್ತಿಗಳು ಶ್ರೀನಿವಾಸನನ್ನು ಇಲ್ಲವಾಗಿಸಲು ಸಂಚು ರೂಪಿಸಿತು. 2002 ಜೂನ್ 24 ರಂದು ಸೋಮವಾರ ಬೆಳಿಗ್ಗೆ 7.30ಕ್ಕೆ ತನ್ನ ಮೈಯಲ್ಲಿ ಹರಿಯುತ್ತಿದ್ದ ರಕ್ತವನ್ನು ಮತ್ತೊಬ್ಬರಿಗೆ ನೀಡಿ ಜೀವ ಉಳಿಸಲು ಹೋಗುತ್ತಿದ್ದ ಶ್ರೀನಿವಾಸನನ್ನು ದೇವಸ್ಥಾನದ ಪಕ್ಕದಲ್ಲೇ ಅಡಗಿ ಕುಳಿತು ಹೊಂಚು ಹಾಕುತ್ತಿದ್ದ ದುರುಳರು ಕ್ಷಣ ಮಾತ್ರದಲ್ಲೇ ತಲವಾರು ಖಡ್ಗಗಳಿಂದ ಹೊಡೆದು ನೆಲಕ್ಕುರುಳಿಸಿದರು. ಇನ್ನೊಂದು ಜೀವಕ್ಕೆ ಸೇರಬೇಕಾದ ರಕ್ತವು ನಡು ಹಾದಿಯಲ್ಲಿ ಚೆಲ್ಲಿತು, ಸಮಾಜದಲ್ಲಿ ಬಾಳಿ ಬದುಕಬೇಕಾದ ಜೀವವೊಂದು ಅನಾವಶ್ಯಕವಾಗಿ ಬಲಿಯಾಯಿತು.

ನಮ್ಮಿಬ್ಬರ ಗೆಳೆತನವಿದ್ದದ್ದು ಕೇವಲ 11 ವರ್ಷ....

ಶ್ರೀನಿವಾಸ ಇನ್ನಿಲ್ಲವಾಗಿ 19 ವರ್ಷಗಳು ಸಂದಿವೆ....

ಆದರೂ ಅದೆಷ್ಟೋ ಹ್ರದಯಗಳಲ್ಲಿ ಭದ್ರವಾಗಿ ನೆಲೆಯೂರಿದ್ದಾನೆ......

ಕಾಂ. ಶ್ರೀನಿವಾಸ ಬಜಾಲ್ ಲಾಲ್ ಸಲಾಂ.....

–ಸುನಿಲ್ ಕುಮಾರ್ ಬಜಾಲ್



ರಾಜ್ಯದಲ್ಲಿ 14 ಲಕ್ಷ ಮಕ್ಕಳ ಬಳಿ ಮೊಬೈಲ್ ಸೌಲಭ್ಯವಿಲ್ಲ– ಶೇಕಡಾ 40ರಷ್ಟು ವಿದ್ಯಾರ್ಥಿಗಳು ಶಿಕ್ಷಣ ದೂರ

ಗುರುರಾಜ್ ದೇಸಾಯಿ

ಕೋವಿಡ್ ಸಾಂಕ್ರಾಮಿಕ ರೋಗದ ಪರಿಣಾಮವಾಗಿ ಕಳೆದ ಒಂದೂವರೆ ವರ್ಷದಿಂದಲೂ ಮಕ್ಕಳ ಶಿಕ್ಷಣದಲ್ಲಿ ಸಾಕಷ್ಟು ತೊಡಕುಗಳು ಎದುರಾಗುತ್ತಲೇ ಇವೆ. ಕಳೆದ 15 ತಿಂಗಳಿಂದ ಶಾಲೆಗಳು ಸಂಪೂರ್ಣವಾಗಿ ಮುಚ್ಚಲ್ಪಟ್ಟಿವೆ. ಆದರೆ, ಸರಕಾರ ಅನ್‌ಲೈನ್ ಶಿಕ್ಷಣ ಜಾರಿಗೊಳಿಸಿತ್ತು. 2020–2021ರ ಸಾಲಿನಲ್ಲಿ ಅನ್‌ಲೈನ್ ಶಿಕ್ಷಣ ವಿದ್ಯಾಭ್ಯಾಸ ಮುಂದುವರೆಸಿದ್ದು, ಅದರಲ್ಲಿ ಕೇವಲ ಶೇಕಡಾ 60ರಷ್ಟು ಮಕ್ಕಳು ಮಾತ್ರ ಎಂದು ಶಿಕ್ಷಣ ಇಲಾಖೆಯು ಕೈಗೊಂಡ ಸರ್ವೆ ಮೂಲಕ ವಿಚಾರ ಬೆಳಕಿಗೆ ಬಂದಿದೆ.

ಹೈಕೋರ್ಟ್ ನಿರ್ದೇಶನದ ಮೇರೆಗೆ ಶಿಕ್ಷಣ ಇಲಾಖೆಯು ಈ ಸಮೀಕ್ಷೆಯನ್ನು ಕೈಗೊಂಡಿತ್ತು. ರಾಜ್ಯದಲ್ಲಿ ಸರಿಸುಮಾರು ಶೇಕಡಾ 40ರಷ್ಟು ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ ಎಂದು ಮಾಹಿತಿ ಲಭ್ಯವಾಗಿದೆ. 2020–21ನೇ ಶೈಕ್ಷಣಿಕ ಸಾಲಿನ 1 ರಿಂದ 10ನೇ ತರಗತಿವರೆಗಿನ ಮಕ್ಕಳಿಗೆ ಸಂಬಂಧಿಸಿದಂತೆ ಶಿಕ್ಷಣ ಇಲಾಖೆ ನಡೆಸಿದ ಸರ್ವೆಯ ಮೂಲಕ ಸಾಕಷ್ಟು ಅಂಶಗಳು ಬಹಿರಂಗಗೊಂಡಿವೆ.

ಶೈಕ್ಷಣಿಕ ಚಟುವಟಿಕೆಗಳು ಸಮರ್ಪಕವಾಗಿ ಜಾರಿಯಾಗುತ್ತಿಲ್ಲ. ಕೋವಿಡ್‌ನಿಂದ ಅತ್ಯಂತ ಪ್ರಮುಖ ಕ್ಷೇತ್ರಗಳು ಸಂಪೂರ್ಣವಾಗಿ ಸ್ತಬ್ಧಗೊಂಡಂತೆಯೇ ಇತ್ತು. ಇನ್ನೂ ಚೇತರಿಕೆ ಕಂಡಿಲ್ಲ. ಇದರ ಮಧ್ಯೆಯೂ ಶಿಕ್ಷಣ ರಂಗಕ್ಕೂ ಸಹ ಭಾರಿ ಪ್ರಮಾಣದಲ್ಲಿ ತೊಡಕುಂಟಾಗಿದೆ.

ಆನ್‌ಲೈನ್ ಶಿಕ್ಷಣ ವ್ಯವಸ್ಥೆ ಮಕ್ಕಳನ್ನು ಕರೆತರಲಾಗದಿರುವುದು ಅತ್ಯಂತ ಪ್ರಮುಖ ಅಂಶವಾಗಿದೆ. ಶೇಕಡಾ 60ರಷ್ಟು ವಿದ್ಯಾರ್ಥಿಗಳನ್ನು ಮಾತ್ರ ಆನ್‌ಲೈನ್ ಶಿಕ್ಷಣ ತಲುಪಿದೆ ಎನ್ನುವುದು ವರದಿಯಲ್ಲಿ ತಿಳಿಸಲಾಗಿದೆ. ಇನ್ನುಳಿದ ಶೇಕಡಾ 40ರಷ್ಟು ವಿದ್ಯಾರ್ಥಿಗಳು ಶಾಲೆಗೆ ದಾಖಲಾಗಿದ್ದರೂ ಶಿಕ್ಷಣದಿಂದ ವಂಚಿತರಾಗಿದ್ದಾರೆ. ರಾಜ್ಯದಲ್ಲಿರುವ ವಿದ್ಯಾರ್ಥಿಗಳಲ್ಲಿ ಎಷ್ಟು ಮಂದಿ ಬಳಿ ಸ್ಮಾರ್ಟ್‌ಫೋನ್ ಇದೆ. ಸ್ಮಾರ್ಟ್‌ಫೋನ್ ಇದ್ದರೂ ಇಂಟರ್‌ನೆಟ್ ಸೌಲಭ್ಯ ಇರುವವರ ಪ್ರಮಾಣ ಎಷ್ಟು ಎನ್ನುವುದರ ಬಗ್ಗೆ ಅಂಕಿ ಅಂಶಗಳನ್ನು ಸಂಗ್ರಹಿಸಲಾಗಿದೆ.

- ಕರ್ನಾಟಕ ರಾಜ್ಯದಲ್ಲಿ 1 ರಿಂದ 10ನೇ ತರಗತಿವರೆಗಿನ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ 1,05,09,367.
- ಅಧಿಕೃತವಾಗಿ ಶಾಲೆಗೆ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ 93,01,805.
- ಮೊಬೈಲ್ ಬಳಸುವ ವಿದ್ಯಾರ್ಥಿಗಳ ಸಂಖ್ಯೆ 79,03,329.
- ಸ್ಮಾರ್ಟ್‌ಫೋನ್ ಹೊಂದಿದ ಮಕ್ಕಳ ಸಂಖ್ಯೆ 58,59,907.
- ಸ್ಮಾರ್ಟ್‌ಫೋನ್ ಇದ್ದು, ಇಂಟರ್‌ನೆಟ್ ಸೌಲಭ್ಯವುಳ್ಳ ಮಕ್ಕಳ ಸಂಖ್ಯೆ 37,79,965.
- ಸುಮಾರು 8,65,259 ವಿದ್ಯಾರ್ಥಿಗಳಿಗೆ ಟಿವಿ, ರೇಡಿಯೋ ಸೌಲಭ್ಯವಿಲ್ಲ
- ಬೇಸಿಕ್ ಮೊಬೈಲ್ ಹೊಂದಿರುವ ಮಕ್ಕಳ ಪ್ರಮಾಣ 21 ಲಕ್ಷಕ್ಕೂ ಹೆಚ್ಚು

ಶಿಕ್ಷಣ ಇಲಾಖೆ ಪ್ರಕಾರ ಸುಮಾರು 21 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳ ಬಳಿ ಬೇಸಿಕ್ ಮೊಬೈಲ್‌ಗಳಿವೆ. ಇದರಲ್ಲಿ ಸುಮಾರು 14 ಲಕ್ಷಕ್ಕೂ ಹೆಚ್ಚು ಮಕ್ಕಳ ಬಳಿ ಮೊಬೈಲ್ ಇಲ್ಲ. ಇವೆಲ್ಲದರ ಪರಿಣಾಮವಾಗಿ ದೊಡ್ಡ ಸಂಖ್ಯೆಯ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಒಟ್ಟಾರೆ ಎಲ್ಲಾ ಅಂಶಗಳನ್ನು ಪರಿಗಣಿಸಿದ್ದಲ್ಲಿ 60 ಲಕ್ಷ ಮಕ್ಕಳಿಗೆ ಮಾತ್ರ ಆನ್‌ಲೈನ್ ಶಿಕ್ಷಣ ಪಡೆಯುತ್ತಿದ್ದಾರೆ. ಬಾಕಿ ಉಳಿದ 40 ಲಕ್ಷ ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಈ ಮಕ್ಕಳ ಬಳಿ ಟಿವಿ, ಇಂಟರ್ನೆಟ್, ಮೊಬೈಲ್, ಡಿಜಿಟಲ್ ತಂತ್ರಜ್ಞಾನದ ಸೌಲಭ್ಯವಿಲ್ಲದ ಕಾರಣ ಶಿಕ್ಷಣದಿಂದ ದೂರ ಉಳಿದಿದ್ದಾರೆ.

ಮಕ್ಕಳು ಸ್ಮಾರ್ಟ್‌ಫೋನ್ ಇದ್ದು ಅದನ್ನು ಬಳಸಿಕೊಂಡು ಮತ್ತು ದೂರದರ್ಶನದ ಮೂಲಕವೂ ವ್ಯಾಸಂಗದಲ್ಲಿ ತೊಡಗಿದ್ದಾರೆ. ಅದೇ ರೀತಿಯಲ್ಲಿ 10,45,288 ವಿದ್ಯಾರ್ಥಿಗಳು ರೇಡಿಯೋ ಮೂಲಕ ಪಾಠ, ಪ್ರವಚನಗಳನ್ನು ಕೇಳಿಸಿಕೊಳ್ಳುತ್ತಿದ್ದಾರೆ.

ಅಂದರೆ, ಟಿವಿ, ರೇಡಿಯೋ ಸೌಲಭ್ಯವನ್ನು ಹೊಂದದ ದೊಡ್ಡ ಪ್ರಮಾಣದ ಮಕ್ಕಳು ಶಾಲೆಗೆ ತೆರಳಿಯೇ ಶಿಕ್ಷಣ ಕಲಿಯಬೇಕಾದ ಅನಿವಾರ್ಯತೆ ಇದೆ ಅಥವಾ ಶಿಕ್ಷಕರೊಂದಿಗೆ ನೇರ ಸಂವಹನ ನಡೆಸಿ ಪಾಠ ಕಲಿಯುವುದು ಬಿಟ್ಟರೇ ಬೇರೆ ಮಾರ್ಗಗಳು ಇಲ್ಲ.

ಶಿಕ್ಷಣ ಇಲಾಖೆಯ ಸರ್ವೆಯು ಸರ್ಕಾರಿ, ಅನುದಾನಿತ, ಖಾಸಗಿ ಶಾಲೆಗಳ ವಿದ್ಯಾರ್ಥಿಗಳನ್ನು ಒಳಗೊಂಡಿದ್ದು, ಶಿಕ್ಷಣ ಇಲಾಖೆಯ ಖಂಖಿ ವೆಬ್‌ಸೈಟ್‌ನಲ್ಲಿ ಇರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಆಧರಿಸಿ ಪರಾಮರ್ಶೆ ನಡೆಸಿದಾಗ ಡಿಜಿಟಲ್ ಯುಗದಲ್ಲೂ ಅಂತರ್ಜಾಲ ಶಿಕ್ಷಣ ಪಡೆಯದಿರುವವರ ಪ್ರಮಾಣ ದೊಡ್ಡ ಪ್ರಮಾಣದಲ್ಲಿದೆ ವಾಸ್ತವ ಅಂಶಗಳು ಬಯಲಾಗಿದೆ.

ಕೆಲವು ಪ್ರಮುಖ ಜಿಲ್ಲೆಗಳ ಅಂಕಿಅಂಶಗಳ ಪ್ರಕಾರ ಉತ್ತರ ಕನ್ನಡ ಜಿಲ್ಲೆಯಲ್ಲಿ 1.1 ಲಕ್ಷ ವಿದ್ಯಾರ್ಥಿಗಳಿದ್ದಾರೆ. ಅದರಲ್ಲಿ 42,309 ವಿದ್ಯಾರ್ಥಿಗಳಿಗೆ ಇಂಟರ್‌ನೆಟ್ ಸಂಪರ್ಕವಿಲ್ಲ. ➚

ಕಳಪೆ ಆಹಾರದ ಕಿಟ್ ವಿತರಣೆ ನಿರ್ಲಕ್ಷ್ಯವೋ!? ಅಥವಾ ಭ್ರಷ್ಟಾಚಾರವೋ!!?



ಕಟ್ಟಡ ಕಾರ್ಮಿಕರಿಗೆ ನೀಡಲಾಗುತ್ತಿರುವ ಆಹಾರದ ಕಿಟ್‌ಗಳು ಕಳಪೆಯಾಗಿವೆ ಎಂದು ಕಾರ್ಮಿಕರು ಆರೋಪಿಸಿದ್ದಾರೆ. ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಮತ್ತು ಕಾರ್ಮಿಕ ಇಲಾಖೆಯು ಕೋವಿಡ್ ಸಮಯದಲ್ಲಿ ಕಾರ್ಮಿಕರ ಜೊತೆ ಚೆಲ್ಲಾಟವಾಡುತ್ತಿವೆ ಎಂದು ಕಾರ್ಮಿಕರು ಆಕ್ರೋಶವ್ಯಕ್ತಪಡಿಸಿದ್ದಾರೆ.

ಕಾರ್ಮಿಕ ಸಚಿವ ಶಿವರಾಂ ಹೆಬ್ಬಾರ್ ರವರು ಪ್ರತಿಕ್ರಿಯೆ ನೀಡಿ 'ಬೇಳೆ ಮತ್ತಿತರ ಪದಾರ್ಥಗಳ ಗುಣಮಟ್ಟ ಸರಿಯಾಗಿಲ್ಲ ಎಂಬ ದೂರುಗಳ ಬಗ್ಗೆ ಶೀಘ್ರವೇ ಪರಿಶೀಲನೆ ನಡೆಸಿ, ಕ್ರಮ ಕೈಗೊಳ್ಳಲಾಗುವುದು' ಎಂದು ತಿಳಿಸಿದರೆ, 'ತೊಗರಿ ಬೇಳೆ ಸರಿ ಇಲ್ಲ ಎಂಬ ದೂರು ಬಂದ ಕೂಡಲೇ ಸರಿ ಪಡಿಸಲಾಗಿದೆ. ಆ ಬೇಳೆಯನ್ನು ಬದಲಿಸಿ, ಬೇರೆ ಬೇಳೆ ನೀಡುವ ವ್ಯವಸ್ಥೆ ಮಾಡಲಾಗಿದೆ. ಆಯಾ ಕ್ಷೇತ್ರದಲ್ಲಿನ ಕಾರ್ಮಿಕರ ಸಂಖ್ಯೆ ಪರಿಗಣಿಸಿ, ಶಾಸಕರಿಗೆ ತಲಾ 10 ಸಾವಿರ ಕಿಟ್ ನೀಡುವ ಚಿಂತನೆ ಇದೆ' ಎಂದು ಬೆಂಗಳೂರು ವಿಭಾಗದ ಉಪ ಕಾರ್ಮಿಕ ಆಯುಕ್ತ ಉಮೇಶ್ ತಿಳಿಸಿದ್ದಾರೆ.

ಕಾರ್ಮಿಕರ ಕಲ್ಯಾಣ ಮಂಡಳಿ ನೀಡುತ್ತಿರುವ ಆಹಾರದ ಕಿಟ್ ನಲ್ಲಿ ಏನೇನಿದೆ ಅಂತಾ ನೋಡೊದಾದ್ರೆ, 5 ಕೆಜಿ ಅಕ್ಕಿ, 2 ಕೆಜಿ ಗೋಧಿ ಹಿಟ್ಟು, 1 ಕೆಜಿ ಬೇಳೆ, ರವೆ, ಅವಲಕ್ಕಿ, ಉಪ್ಪು, ಸಕ್ಕರೆ, 1 ಲೀಟರ್ ಅಡುಗೆ ಎಣ್ಣೆ ಸೇರಿದಂತೆ ಒಟ್ಟು ಹತ್ತು ಪದಾರ್ಥಗಳ ಕಿಟ್ ನೀಡಲಾಗುತ್ತಿದೆ. ಸದ್ಯ, ಇಂತಹ 3.80 ಲಕ್ಷ ಕಿಟ್‌ಗಳನ್ನು ಸಿದ್ಧಪಡಿಸಿ ವಿತರಿಸಲಾಗುತ್ತಿದೆ. ಒಟ್ಟು 5 ಲಕ್ಷದಿಂದ 6 ಲಕ್ಷ ಕಿಟ್‌ಗಳನ್ನು ವಿತರಿಸುವ ಉದ್ದೇಶವನ್ನು ನಾವು ಹೊಂದಿದ್ದೇವೆ ಅಂತಾ ಕಲ್ಯಾಣ ಮಂಡಳಿ ಹೇಳಿಕೆಯನ್ನು ನೀಡಿದೆ.

ಇನ್ನೂ ಈ ಆಹಾರದ ಕಿಟ್ ನ್ನು ತಯಾರು ಮಾಡೋದಕ್ಕೆ ಯಾರಿಗೆಲ್ಲ ಗುತ್ತಿಗೆಯನ್ನು ನೀಡಿದ್ದಾರೆ ಎನ್ನುವುದನ್ನು ನೋಡುವುದಾದರೆ, ಶೆಫ್‌ಟಾಕ್ , ಅದಮ್ಯ ಚೇತನ, ಆರ್ಟ್ ಆಫ್ ಲಿವಿಂಗ್, ರೇಯಾನ್ ಎಂಟರ್‌ಪ್ರೈಸಸ್, ಪ್ರತಿಗಿಂಗ ಎಂಟರ್‌ಪ್ರೈಸಸ್, ವೈಟ್ ಪೆಟಲ್ಸ್ ಸಂಸ್ಥೆಗಳು ಗುತ್ತಿಗೆ ಪಡೆದಿವೆ. ಕಳಪೆ ಆಹಾರ ಪೂರೈಕೆ ಮಾಡುವಲ್ಲಿ ಇವರುಗಳ ಕೊಡುಗೆ ದೊಡ್ಡದಿದೆ ಎನ್ನುವ ಆರೋಪವೂ ಕೂಡ ಈ ವೇಳೇ ಕೇಳಿ ಬರ್ತಾ ಇದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗಿರುವುದು ಏನೂ ಅಂದ್ರೆ, ಕಳಪೆ ದಿನಸಿ ಪದಾರ್ಥಗಳನ್ನು ನೀಡಿದ್ದಷ್ಟೆ ಅಲ್ಲದೆ, ಒಂದು ಆಹಾರದ ಕಿಟ್‌ಗೆ ಹೆಚ್ಚುವರು ಹಣವನ್ನು ನೀಡಲಾಗುತ್ತಿದೆ ಎಂಬ ಆರೋಪಗಳು ಕೇಳಿ ಬರುತ್ತಿವೆ.

ಎಪಿಎಂಸಿಯೇ ನಿಗದಿ ಮಾಡಿರುವ ದರದ ಪಟ್ಟಿ ಹೀಗಿದೆ ಅದನ್ನು ನಾವು ನೋಡ್ತಾ ಹೋಗೋಣ, ಸ್ಕ್ರೀನ್ ನಲ್ಲೂ ನಿಮಗೆ ಕಾಣ್ತಾ ಇದೆ. 5 ಕೆಜಿ ಅಕ್ಕಿಗೆ ಎಪಿಎಂಸಿ ನಿಗದಿ ಮಾಡಿರುವ ದರ 175 ರೂ, ಅಂದ್ರೆ ಒಂದು ಕೆಜಿ ಅಕ್ಕಿಗೆ 35 ರೂ, ತೊಗರಿಬೇಳೆ 1 ಕೆಜಿಗೆ 90 ರೂ, ಗೋದಿ ಹಿಟ್ಟು 2 ಕೆಜಿ ಗೋದಿ ಹಿಟ್ಟಿಗೆ 60 ರೂ. 1 ಲೋಟರ್ ಅಡುಗೆ ಎಣ್ಣೆ 136 ರೂ ಒಟ್ಟಾರೆ 10 ವಸ್ತುಗಳಿಗೆ 667 ರೂ ಆಗುತ್ತದೆ. ಆದರೆ ಕಲ್ಯಾಣ ಮಂಡಳಿ ನೀಡುತ್ತಿರುವ ಆಹಾರದ ಕಿಟ್‌ಗ ವ್ಯಯ ಮಾಡುತ್ತಿರುವ ಹಣ 938 ರೂ. ಬರೋಬ್ಬರಿ 271 ರೂ ವ್ಯತ್ಯಾಸ ಕಾಣ್ತಾ ಇದೆ. ಒಟ್ಟು ಲಕ್ಷ ಜನರಿಗೆ ಆಹಾರದ ಕಿಟ್ ವಿತರಿಸಲು ನಿರ್ಧರಿಸಲಾಗಿದೆ. 16 ಕೋಟಿರೂ ನಷ್ಟು ನಷ್ಟ ಅಥವಾ ಭ್ರಷ್ಟಾಚಾರ ನಡೆದಿದೆ ಎಂದು ಕಟ್ಟಡ ಕಾರ್ಮಿಕ ಸಂಘಟನೆಯ ಬೆಂಗಳೂರು ಜಿಲ್ಲಾಧ್ಯಕ್ಷ ಲಿಂಗರಾಜ್ ರವರು ಮಾತನಾಡಿದ್ದಾರೆ. ಅವರು ಏನ್ ಮಾತನಾಡಿದ್ದಾರೆ ನೋಡೋಣ ಕಾರ್ಮಿಕ ಕಲ್ಯಾಣ ಮಂಡಳಿಯು ಒಂದು ಆಹಾರದ ಕಿಟ್‌ಗೆ 938 ರೂ ಖರ್ಚು ಮಾಡಲಾಗಿದೆ. ಅಂದರೆ, ಪ್ರತಿ ಕಿಟ್‌ನಲ್ಲಿ ರೂ. 300ಕ್ಕೂ ಹೆಚ್ಚು ಕಮಿಷನ್ ಪಡೆಯಲಾಗುತ್ತಿದೆ. ರೇಷನ್ ಕಿಟ್ ನಲ್ಲಿ ಅವ್ಯವಹಾರ ನಡೆಸಿದ್ದಾರೆ ಎನ್ನುವುದಕ್ಕೆ ಸಾಧಾರಣವಾಗಿ ಒಂದು ಲೆಕ್ಕವನ್ನು ಉದಾಹರಣೆಯಾಗಿ ನೋಡುವುದಾದರೆ, ಒಂದು ರೇಷನ್ ಕಿಟ್ ಅಂದಾಜು ಮೌಲ್ಯ ಎಪಿಎಂಸಿ ಮಾರುಕಟ್ಟೆ ಸಗಟು ವ್ಯಾಪಾರಕ್ಕೂ, ಕಾರ್ಮಿಕ ಕಲ್ಯಾಣ ಮಂಡಳಿ ಖರೀದಿಸಿರುವ ಆಹಾರ ಕಿಟ್‌ಗಳ ಬೆಲೆಯಲ್ಲಿ ಸಾಕಷ್ಟು ವ್ಯತ್ಯಾಸವನ್ನು ಗುರುತಿಸಬಹುದು. ಮಂಡಳಿಯು ನಿಗದಿಪಡಿಸಿ ಬೆಲೆ ರೂ.938, ಆದರೆ ಮಾರುಕಟ್ಟೆಯಲ್ಲಿ ಅಷ್ಟೆ ಪ್ರಮಾಣದ ದಿನಸಿಗೆ 667 ರೂ ಆಗುತ್ತದೆ. ಹಾಗಾಗಿ ಸುಮಾರು 5 ಲಕ್ಷ ಆಹಾರ ಕಿಟ್‌ಗಳಿಂದ ಸುಮಾರು 13 ರಿಂದ 15 ಕೋಟಿ ಹೆಚ್ಚುವರಿ ಮೊತ್ತ ಮಂಡಳಿ ನೀಡ್ತಾ ಇದೆ. ಇದನ್ನು ಮಂಡಳಿಗೆ ಆಗುತ್ತಿರುವ ನಷ್ಟ ಎನ್ನಬೇಕೊ ಅಥವಾ ಭ್ರಷ್ಟಾಚಾರ ಎನ್ನಬೇಕೋ ಎನ್ನುವುದು ಲಿಂಗರಾಜ್ ರವರ ಪ್ರಶ್ನೆಯಾಗಿದೆ. ಈ ಬಗ್ಗೆ ಸಮಗ್ರ ತನಿಖೆ ತನಿಖೆಯಾದಾಗಲೆ ಸ್ಪಷ್ಟ ಚಿತ್ರಣ ಗೊತ್ತಾಗಲಿದೆ.

ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಯಿಂದ ವಲಸೆ ಕಾರ್ಮಿಕರಿಗೆ ಹಂಚಲು ಕರೆಯಲಾದ ಟೆಂಡರ್ ಪ್ರಕ್ರಿಯೆ, ಆಹಾರ ಕಿಟ್‌ಗಳ ಕಳಪೆ ಗುಣಮಟ್ಟ ಮತ್ತು ಖರೀದಿಯಲ್ಲಿ ಅವ್ಯವಹಾರ ಕುರಿತು ಲೋಕಾಯುಕ್ತಕ್ಕೆ ದೂರು ಸಲ್ಲಿಸಲು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಶನ್ ಸಂಘಟನೆಯು ನಿರ್ಧಾರವನ್ನು ಮಾಡಿದೆ. ಇದೇ ವೇಳೆ ವಲಸೆ ಕಾರ್ಮಿಕರು ಸೇರಿದಂತೆ ದೇಶದ ಎಲ್ಲ ಬಡವರ್ಗದವರಿಗೂ 'ಒಂದು ರಾಷ್ಟ್ರ, ಒಂದು ಪಡಿತರ ಚೀಟಿ, ಯೋಜನೆಯನ್ನು ದೇಶಾದ್ಯಂತ ಜಾರಿಗೆ ತರುವಂತೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸುಪ್ರೀಂ ಕೋರ್ಟ್ ಗಡುವು ನೀಡಿದೆ.

ಆಯಾ ರಾಜ್ಯಗಳಲ್ಲಿ ಕೋವಿಡ್ ಸಾಂಕ್ರಾಮಿಕ ಪರಿಸ್ಥಿತಿ ಇರುವವರೆಗೂ ವಲಸೆ ಕಾರ್ಮಿಕರ ನಡುವೆ ಉಚಿತವಾಗಿ ವಿತರಿಸಲು ರಾಜ್ಯಗಳಿಗೆ ಆಹಾರ ಧಾನ್ಯಗಳನ್ನು ಹಂಚಿಕೆ ಮಾಡುವಂತೆ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ನ್ಯಾಯಪೀಠ ನಿರ್ದೇಶಿಸಿದೆ. ಇದೇ ವೇಳೆ ವಲಸೆ ಕಾರ್ಮಿಕರಿಗೆ ಉಚಿತ ಆಹಾರ ಧಾನ್ಯ ವಿತರಿಸಲು ಅನುಕೂಲವಾಗು ವಂತೆ ಕೇಂದ್ರ ಸರ್ಕಾರ ರಾಜ್ಯ ಸರಕಾರಗಳಿಗೆ ಪಡಿತರವನ್ನೂ ಪೂರೈಸುವಂತೆಯೂ ಸೂಚಿಸಿದೆ. ಕಾರ್ಮಿಕರು ಕೆಲಸಕ್ಕಾಗಿ ವಲಸೆ ಹೋಗಿರುವ ಹೊರ ರಾಜ್ಯಗಳಲ್ಲಿ ಕೆಲಸ ಮಾಡುವ ಸ್ಥಳದಲ್ಲೇ ಉಚಿತ ಪಡಿತರ ಪಡೆಯಬಹುದು. ಇಲ್ಲಿ ಪಡಿತರ ಚೀಟಿ ನೋಂದಣಿ ಮಾಡಿಸದಿದ್ದರೂ ಕಾರ್ಮಿಕರಿಗೆ ಈ ಸೌಲಭ್ಯ ದೊರೆಯಲಿದೆ. ದೇಶದಲ್ಲಿ 38 ಕೋಟಿ ಜನ ವಲಸೆ ಕಾರ್ಮಿಕರಿಗೆ ಸಹಾಯ ಆಗಲಿದೆ. ಹಾಗಾಗಿ ಒಂದೇ ರಾಷ್ಟ್ರ ಒಂದು ಪಡಿತರ ಚೀಟಿ ಯೋಜನೆಯನ್ನು ಜಾರಿಗೆ ತರಬೇಕು. ಜುಲೈ 31 ರೊಳಗೆ ಎಲ್ಲರಿಗೂ ರೇಷನ್ ಸಿಗುವಂತಾಗಬೇಕು ಎಂದು ಸುಪ್ರೀಂ ಕೋರ್ಟ್ ಎಲ್ಲಾ ರಾಜ್ಯಗಳಿಗೂ ನಿರ್ದೇಶನ ನೀಡಿದೆ.

ಇನ್ನೊಂದು ಆತಂಕದ ವಿಚಾರ ಏನೂ ಅಂದ್ರೆ, ಆಹಾರದ ಕಿಟ್‌ನ್ನು ವಿತರಿಸುವುದಕ್ಕಾಗಿ ಪ್ರತಿ ವಿಧಾನಸಭಾ ಕ್ಷೇತ್ರದ ಶಾಸಕರಿಗೆ 10 ಸಾವಿರ ದಿನಸಿ ಕಿಟ್‌ನ್ನು ನೀಡಲು ಕಲ್ಯಾಣ ಮಂಡಳಿ ನಿರ್ಧರಿಸಿದೆ. ಇದು ಹೀಗೆ ಆದಲ್ಲಿ ಇನ್ನಷ್ಟು ಅಪಾಯ ಹೆಚ್ಚಾಗಲಿದೆ. ಯಾಕೆ ಅಂದ್ರೆ ಈ ಕಿಟ್‌ಗಳು ಶಾಸಕರ ಹಿಂಬಾಲಕರಿಗೆ ತಲುಪುತ್ತವೆ ಅಥವಾ ಶಾಸಕರು ಇವುಗಳನ್ನು ರಾಜಕೀಯವಾಗಿ ಬಳಸಿಕೊಳ್ಳುವ ಸಾಧ್ಯತೆಗಳಿರುತ್ತವೆ. ಹಾಗಾಗಿ ಇದರ ಬದಲು ಕಾರ್ಮಿಕರ ಖಾತೆಗೆ 10 ಸಾವಿರ ರೂ ಪಾವತಿಸುವಂತೆ ಹಲವಾರು ಬಾರಿ ಒತ್ತಾಯ ಮಾಡಿದರೂ ಕಾರ್ಮಿಕ ಇಲಾಖೆ ನಮ್ಮ ಮಾತುಗಳಿಗೆ ಬೆಲೆ ನೀಡುತ್ತಿಲ್ಲ ಎಂಬುದು ಕಾರ್ಮಿಕ ಸಂಘಟನೆಗಳ ಆರೋಪ ಆಗಿದೆ.

ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಕಾರ್ಮಿಕರೇ ದುಡಿದ ಕೂಡಿಟ್ಟ ಹಣ ಸಾಕಷ್ಟು ಇದೆ. ಅವರದೆ ಹಣವನ್ನು ಖರ್ಚು ಮಾಡಲು ಸರಕಾರ ಹಿಂದೇಟು ಹಾಕುತ್ತಿರುವುದು ನಾಚಿಕೇಗೇಡಿನ ಸಂಗತಿ. ಅದರಲ್ಲೂ ಕಳಪೆ ಆಹಾರ ಧಾನ್ಯಗಳನ್ನು ವಿತರಣೆ ಮಾಡಿದ್ದಂತು ಸರಿಯಾದ ಕ್ರಮವೇ ಅಲ್ಲ. ಅವರ ಎಷ್ಟೇ ಸಮರ್ಥನೆ ಮಾಡಿಕೊಂಡರೆ ಅವರ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ. ಇಂತಹ ಕ್ರಮಗಳು ಮತ್ತೆ ಪುನಾರಾವರ್ತನೆಯಾಗದಂತೆ ಇಲಾಖೆ ಮತ್ತು ಸರಕಾರ ಜಾಗೃತೆ ವಹಿಸಬೇಕಾಗಿದೆ.

–ಗುರುರಾಜ್ ದೇಸಾಯಿ

➔ ಕಲಬುರಗಿ ಜಿಲ್ಲೆಯಲ್ಲಿ 5.4 ಲಕ್ಷ ವಿದ್ಯಾರ್ಥಿಗಳ ಪೈಕಿ 1.7 ಲಕ್ಷ ವಿದ್ಯಾರ್ಥಿಗಳಿಗೆ ಇಂಟರ್‌ನೆಟ್ ಸೌಲಭ್ಯವಿಲ್ಲ. ಅಲ್ಲಿಯೇ 1.4 ಲಕ್ಷ ವಿದ್ಯಾರ್ಥಿಗಳ ಬಳಿ ಸ್ಮಾರ್ಟ್‌ಫೋನ್ ಸಹ ಲಭ್ಯವಿಲ್ಲ.

ಬಳ್ಳಾರಿ ಜಿಲ್ಲೆಯಲ್ಲಿ ಇಂಟರ್‌ನೆಟ್ ಸೌಲಭ್ಯವಿಲ್ಲದೆ 2.6 ಲಕ್ಷ ವಿದ್ಯಾರ್ಥಿಗಳಿದ್ದಾರೆ. 2.2 ಲಕ್ಷ ವಿದ್ಯಾರ್ಥಿಗಳ ಬಳಿ ಡಿಜಿಟಲ್ ಸಾಧನವಿಲ್ಲ. 44,295 ವಿದ್ಯಾರ್ಥಿಗಳ ಮನೆಯಲ್ಲಿ ದೂರದರ್ಶನ, ರೇಡಿಯೋ ಸಂಪರ್ಕವೂ ಇಲ್ಲ. ವಿಜಯಪುರದಲ್ಲಿ 5 ಲಕ್ಷ ವಿದ್ಯಾರ್ಥಿಗಳ ಪೈಕಿ 2.2 ಲಕ್ಷ ವಿದ್ಯಾರ್ಥಿಗಳಿಗೆ ಇಂಟರ್‌ನೆಟ್ ಸೌಲಭ್ಯವಿಲ್ಲ. 1.8 ಲಕ್ಷ ವಿದ್ಯಾರ್ಥಿಗಳ ಬಳಿ ಡಿಜಿಟಲ್ ಸಾಧನವಿಲ್ಲ. 75,419 ವಿದ್ಯಾರ್ಥಿಗಳ ಮನೆಯಲ್ಲಿ ದೂರದರ್ಶನ, ರೇಡಿಯೋ ಇಲ್ಲ. ಈ ಅಂಕಿಅಂಶಗಳೇ ರಾಜ್ಯದಲ್ಲಿ ಅರ್ಧಕ್ಕರ್ಧ ವಿದ್ಯಾರ್ಥಿಗಳು ಶಿಕ್ಷಣದಿಂದ ದೂರವುಳಿದಿದ್ದಾರೆ ಎಂಬ ಅಂಶಗಳು ತಿಳಿದುಬಂದಿವೆ.

2020–21ನೇ ಸಾಲಿನ ಶೈಕ್ಷಣಿಕ ವರ್ಷದಲ್ಲೇ ಲಕ್ಷಾಂತರ ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದು, ಈ ಬಾರಿಯೂ ಅದೇ ಪರಿಸ್ಥಿತಿ ಮುಂದುವರೆಯುವ ಸಾಧ್ಯತೆಗಳು ಹೆಚ್ಚಾಗಿಯೇ ಇದೆ. ಸರಕಾರವು ಮಕ್ಕಳ ಭವಿಷ್ಯದ ಬಗ್ಗೆ ತೀರಾ ಗಂಭೀರವಾಗಿ ಆಲೋಚಿಸಬೇಕಾದ ಅನಿವಾರ್ಯತೆ ಇದೆ.

ಕೇರಳದಲ್ಲಿ ಡಿಜಿಟಲ್ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿದೆ. ಮೊಬೈಲ್, ಲ್ಯಾಪ್‌ಟಾಪ್ ವಂಚಿತ ಮಕ್ಕಳಿಗೆ ಉಚಿತ ಲ್ಯಾಪ್‌ಟಾಪ್ ನ್ನು ಸರಕಾರವೇ ನೀಡಿದೆ. ಯಾವೊಬ್ಬ ಮಗುವೂ ಶಿಕ್ಷಣದಿಂದ ವಂಚಿತವಾಗಬಾರದು ಎನ್ನುವುದು ಕೇರಳದ ಎಡರಂಗ ಸರಕಾರದ ಉದ್ದೇಶ. ನೆಟ್ವರ್ಕ ಸಮಸ್ಯೆಯಾಗದಂತೆ ನೆಟ್‌ವರ್ಕ್ ಗಳ ಗುತ್ತಿಗೆದಾರರ ಸಭೆ ಕರೆದು ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗದಂತೆ ನೆಟ್ವರ್ಕ್ ಬಲಪಡಿಸುವ ಕುರಿತು ಚರ್ಚೆಯೂ ನಡೆದಿದೆ. ಆದರೆ ರಾಜ್ಯದಲ್ಲಿ ಮಾತ್ರ ಇಂತಹ ಪ್ರಯತ್ನಗಳು ನಡೆಯುತ್ತಿಲ್ಲ. ಕೇರಳದ ಡಿಜಿಟಲ್ ಶಿಕ್ಷಣ ಪ್ರಕ್ರಿಯೆಯನ್ನು ರಾಜ್ಯ ಸರಕಾರ ಅಧ್ಯಯನ ಮಾಡಬೇಕಿದೆ. ಹಾಗೂ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಸೌಲಭ್ಯಗಳನ್ನು ನೀಡಬೇಕಿದೆ.

ಲಸಿಕೆ ನೆನಪಿಸುವ ಸಂದೇಶಕ್ಕೆ ಅನುಗುಣವಾಗಿ ಲಸಿಕೆಯನ್ನು ಒದಗಿಸಲು ಸಿಪಿಐ(ಎಂ) ಒತ್ತಾಯ

83 ದಿನಗಳ ನಂತರ ಕೋವಿಶೀಲ್ಡ್ ಎರಡನೆ ಡೋಸೇಜ್ ಲಸಿಕೆ ಪಡೆಯಲು ನೆನಪಿಸುವ ಸಂದೇಶಗಳು ಸಾವಿರಾರು ಸಂಖ್ಯೆಯಲ್ಲಿ ಮೊದಲ ಡೋಸೇಜ್ ಪಡೆದವರಿಗೆ ಬರುತ್ತಿವೆ. ಆದರೆ ಸಂದೇಶಕ್ಕೆ ಅನುಗುಣವಾಗಿ ಲಸಿಕೆಗಳನ್ನು ಸರ್ಕಾರ ಸಾರ್ವಜನಿಕ ಆಸ್ಪತ್ರೆಗಳಿಗೆ ಒದಗಿಸದ ಕಾರಣ ಮಹಾನಗರದ ಜನತೆ ಲಸಿಕೆಗಾಗಿ ಅಲೆದಾಡುತ್ತ ಪರದಾಡುತ್ತಿದ್ದಾರೆ. ಮುಂಜಾನೆಯಿಂದ ಕಾದು ಕುಳಿತರು ಲಸಿಕೆ ಕೊರತೆಯಿಂದಾಗಿ ಲಸಿಕೆ ದೊರೆಯದೆ ನಿರಾಶರಾಗಿ ಹಿಂದಿರುಗುವ ಪರಿಸ್ಥಿತಿ ತಲೆದೋರಿದೆ. ಇದನ್ನು ಸರಿಪಡಿಸಿ ಸಂದೇಶಗಳ ಪ್ರಮಾಣಕ್ಕೆ ಅನುಗುಣವಾಗಿ ಲಸಿಕೆಯನ್ನು ಒದಗಿಸ ಬೇಕೆಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ಒತ್ತಾಯಿಸಿವೆ.

ಪ್ರತಿ ನಿತ್ಯ ಕಾದು ಕುಳಿತ ಲಸಿಕೆ ದೊರೆಯದೆ ಹಿಂತಿರುಗುವ ಪರಿಸ್ಥಿತಿಗೆ ಸರ್ಕಾರವು ಜನತೆಯನ್ನು ದೂಡಿದೆ. ಲಸಿಕೆ ದೊರೆಯದೆ ಖಾಸಗಿ ಆಸ್ಪತ್ರೆಗಳ ಎಡೆಗೆ ಕೆಲವರನ್ನು ಇದು ದೂಡುತ್ತಿದೆ. ಇದರಿಂದಾಗಿ ಖಾಸಗಿ ಆಸ್ಪತ್ರೆಗಳು ಲೂಟಿಗೆ ಇಳಿದಿವೆ. ಜನತೆ ಬಂದೊಡನೆ ಅವರಿಗೆ ಟೋಕನ್ ನೀಡುವ ಮತ್ತು ಸರದಿಯಂತಾದರು ಲಸಿಕೆಯ ಭರವಸೆ ಇಲ್ಲದೆ ಜನತೆ ಹತಾಶರಾಗುತ್ತಿದ್ದಾರೆ. ಪರಿಣಾಮವಾಗಿ ಆರೋಗ್ಯ ಕೇಂದ್ರಗಳ ಸಿಬ್ಬಂದಿಯ ಜೊತೆ ಜನತೆ ವಾಗ್ವಾದಕ್ಕೆ ಇಳಿಯುವ ಪರಿಸ್ಥಿತಿ ನಿರ್ಮಿತವಾಗುತ್ತಿದೆ ಎಂದು ಸಿಪಿಐ(ಎಂ) ಆತಂಕ ವ್ಯಕ್ತಪಡಿಸಿದೆ.

ಇದೆ ವೇಳೆ ಕೆಲವೆಡೆ ಬಿಜೆಪಿ ನಾಯಕರು ತಮ್ಮ ಬೆಂಬಲಿಗರಿಗೆ ಮಾತ್ರ ಸರದಿ ಮೀರಿ ಲಸಿಕೆ ಹಾಕಿಸುವ ಸ್ವಜನ ಪಕ್ಷಪಾತದಲ್ಲಿ ತೊಡಗಿರುವ ದೂರುಗಳು ಕೇಳಿ ಬರುತ್ತಿವೆ. ಅಮಾಯಕ ಜನತೆ ಮಾತ್ರ ಪ್ರತಿ ನಿತ್ಯ ಸಾಲಿನಲ್ಲಿ ನಿಂತು ಲಸಿಕೆ ಸಿಗದೆ ಹಿಂತಿರುಗುತ್ತಿದ್ದಾರೆ. ಹತ್ತಾರು ದಿನ ಅಲೆದಾಡುವ ದುಸ್ಥಿತಿಗೆ ದೂಡಲ್ಪಟ್ಟಿದ್ದಾರೆ ಎಂದಿದೆ ಸಿಪಿಐ(ಎಂ).

ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಮತ್ತು ಬಿಬಿಎಂಪಿ ಕೂಡಲೆ ಪಾರದರ್ಶಕವಾಗಿ ಲಸಿಕೆ ಹಾಕುವ ಪದ್ಧತಿಯನ್ನು ಟೋಕನ್ ಪ್ರಕಾರ ನಿಗದಿತ ಪ್ರತಿ ಸ್ಥಳದಲ್ಲಿ ನೀಡ ಬೇಕು. ಟೋಕನ್ ಅನುಸಾರವಾಗಿ ಅಗತ್ಯ ಲಸಿಕೆಯನ್ನು ಒದಗಿಸಲು ಕ್ರಮ ವಹಿಸ ಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ. ಬಿಜೆಪಿ ಸರ್ಕಾರದ ಘೋಷಣೆಗಳು ಮಾತ್ರ ಅಬ್ಬರವಾಗಿವೆ ಆದರೆ ಜನತೆ ಮಾತ್ರ ಅವುಗಳನ್ನು ನಂಬಿ ಆಸ್ಪತ್ರೆಗು ಮನೆಗೂ ಲಸಿಕೆಗಾಗಿ ಅಲೆದಾಡುವ ದುಸ್ಥಿತಿಗೆ ತಲುಪಿದ್ದಾರೆ. ಇದನ್ನು ಕೂಡಲೆ ಸರಿಪಡಿಸಲು ಅಗತ್ಯಕ್ರಮ ವಹಿಸದೆ ಹೀಗೆ ಮುಂದುವರೆಯಲು ಬಿಟ್ಟರೆ ಸಂಭವನೀಯ ಕೋವಿಡ್ 3ನೇ ಅಲೆಯಿಂದ ಅಪಾರ ಪ್ರಮಾಣದ ಸಾವು ನೋವು ಸಂಕಟಗಳನ್ನು ಜನತೆ ಎದುರಿಸಬೇಕಾಗಿ ಬರಲಿದೆ ಎಂಬ ಆತಂಕವನ್ನು ಸಿಪಿಐ(ಎಂ) ವ್ಯಕ್ತಪಡಿಸಿದೆ.

ಅತಿಥಿ ಅಂಕಣ



ಪ್ರೊ. ರಾಜೇಂದ್ರ ಚೆನ್ನಿ

ಬಲಪಂಥೀಯ ರಾಜಕಾರಣವೇ ಹೆಸರಿನ ರಾಜಕಾರಣ

ಕರ್ನಾಟಕದ ರಾಜಕೀಯದಲ್ಲಿ ಒಂದೂ ರೂಪಾಯಿ ಖರ್ಚು ಇಲ್ಲದೆ, ಯಾವ ಶ್ರಮವೂ ಇಲ್ಲದೆ ಮಾಡಬಹುದಾದ ರಾಜಕೀಯವೆಂದರೆ ಕನ್ನಡ ಅಭಿಮಾನದ ರಾಜಕೀಯ. ಈ ರಾಜಕೀಯದಲ್ಲಿ ಕನ್ನಡವೆಂದರೆ ಒಂದು ಗಾಳಿಮಾತು, ಒಂದು ಘೋಷಣೆ. ಅದು ಸಾಮಾಜಿಕವಾಗಿ, ಆರ್ಥಿಕವಾಗಿ ಅಮೂರ್ತವಾದುದು. ಗಂಭೀರವಾದ ವಿಚಾರವೆಂದರೆ ಕನ್ನಡ ಪರ ರಾಜಕೀಯವು ಒಂದು ನಗೆನಾಟಕದ ಮಟ್ಟಕ್ಕೆ ಕುಸಿದಿದೆ. ಊರಿನ ಹೆಸರುಗಳ ಬಗೆಗಿನ ಸುಳ್ಳು ಸುದ್ದಿಯೇ ರಾಜಕಾರಣವಾಗಬೇಕೆ? ಇದನ್ನು ವಿಸ್ತರಿಸಿ ನೋಡುವುದಾದರೆ ಇಡೀ ಬಲಪಂಥೀಯ ರಾಜಕಾರಣವೇ ಹೆಸರು ಬದಲಿಸುವ ರಾಜಕಾರಣವಾಗಿದೆ. ಮುಖ್ಯವಾಗಿ ಭಾರತದ ಮುಸ್ಲಿಮ್ ಚರಿತ್ರೆಗೆ ಸಂಬಂಧಿಸಿದ ಊರುಗಳ, ಕಟ್ಟಡಗಳ ಹೆಸರು ಬದಲಿಸುವ ರಾಜಕಾರಣವಿದಾಗಿದೆ. ಆದರೆ ಸಾಮಾಜಿಕ, ಆರ್ಥಿಕ ರಚನೆಗಳನ್ನು, ವಾಸ್ತವಗಳನ್ನು ಬದಲಾಯಿಸುವ ಕಾರ್ಯಸೂಚಿಯೇ ಈ ರಾಜಕಾರಣದಲ್ಲಿಲ್ಲ.

ಕರ್ನಾಟಕದಲ್ಲಿಯೂ ಸುಳ್ಳುಸುದ್ದಿ ಕಾರ್ಖಾನೆಗಳು ಕೋವಿಡ್ ಕಾಲದಲ್ಲಿ ಭರಾಟೆಯಿಂದ ಕೆಲಸ ಮಾಡುತ್ತಿವೆ ಮತ್ತು ಈ ಸುದ್ದಿಗಳ ಸೃಷ್ಟಿಗೆ ಮುಖ್ಯಕಾರಣರಾದ ಬಿ.ಜೆ.ಪಿ. ರಾಜಕಾರಣಿಗಳು ಅವುಗಳ ಬಗ್ಗೆ ತಕ್ಷಣ ಪ್ರತಿಕ್ರಿಯೆ ನೀಡಿ ನಗೆಪಾಟಲಾಗುತ್ತಿದ್ದಾರೆ. ಇತ್ತೀಚೆಗೆ ಕೇರಳ ಸರಕಾರವು ಕಾಸರಗೋಡಿನ ಅನೇಕ ಊರುಗಳ ಕನ್ನಡ ಹೆಸರುಗಳನ್ನು ಬದಲಾಯಿಸಿ ಮಲಯಾಳೀಕರಿಸುತ್ತಿದೆ ಎಂಬ ಸುದ್ದಿಯು ಹೊರಟಿತು. ನಮ್ಮ ಮುಖ್ಯಮಂತ್ರಿಗಳಿಗೆ ತಮ್ಮ ಸ್ಥಾನದ ಗೌರವ, ಶಿಷ್ಟಾಚಾರ ಇವುಗಳ ಬಗ್ಗೆ ಮೊದಲಿನಿಂದಲೂ ಅಜ್ಞಾನವಿರುವುದರಿಂದ ಈ ಸುದ್ದಿಗೆ ತಕ್ಷಣ ಪ್ರತಿಕ್ರಿಯಿಸಿ ಕೇರಳದ ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ ಎಂದು ಇನ್ನೊಂದು ಸುದ್ದಿಯು ಹೊರಟಿತು. ಒಬ್ಬ ಮುಖ್ಯಮಂತ್ರಿಯ ಕ್ಷಮತೆ ಅವರಲ್ಲಿರುವ ವಾಸ್ತವಗಳ ಅರಿವು ಮತ್ತು ವಸ್ತುಸಂಗತಿಗಳನ್ನು ಸಂಗ್ರಹಿಸುವ ಇಲಾಖೆಗಳ ಮೇಲೆ ಅವರಿಗಿರುವ ಹಿಡಿತವನ್ನು ಅವಲಂಬಿಸಿರುತ್ತದೆ. ದುರ್ದೈವದಿಂದ ನಮ್ಮ ಸನ್ಮಾನ್ಯ ಮುಖ್ಯಮಂತ್ರಿಯವರು ತಾವು ಸಾಮಾನ್ಯ ಕಾರ್ಯಕರ್ತರು ಎಂದು ಭಾವಿಸಿದ್ದಾರೆ. ಹೀಗಾಗಿ ನೆರೆ ರಾಜ್ಯದ ಮುಖ್ಯಮಂತ್ರಿಯವರೊಡನೆ ಚರ್ಚಿಸದೆ, ಬಂದಿರುವ ಸುದ್ದಿಯ ಸತ್ಯಾಸತ್ಯತೆಯನ್ನು ಪರಿಶೀಲಿಸದೆ ಕನ್ನಡ ಹೆಸರುಗಳನ್ನು ಬದಲಾಯಿಸುವುದರ ವಿರುದ್ಧ ಹೇಳಿಕೆಯನ್ನು ಕೊಟ್ಟರು. ಈಗ ನೋಡಿದರೆ ಕೇರಳದ ಮುಖ್ಯಮಂತ್ರಿಯವರು ಹೀಗೆ ಮಾಡುವ ಪ್ರಸ್ತಾಪವೇ ಇಲ್ಲವೆಂದೂ ಮತ್ತು ಇಲ್ಲದ ಸಮಸ್ಯೆಯನ್ನು ಹುಟ್ಟುಹಾಕಿರುವುದು ಆಶ್ಚರ್ಯಕರವೆಂದೂ ಹೇಳಿಕೆ ನೀಡಿದ್ದಾರೆ.



ಇದರಿಂದಾಗಿ ಹರಾಜಾಗಿದ್ದು ನಮ್ಮ ಮುಖ್ಯಮಂತ್ರಿಗಳ ಮಾನವೇ. ಕಮ್ಯೂನಿಸ್ಟ್ ಆಡಳಿತವಿರುವ ಸರಕಾರದ ವಿರುದ್ಧ ಕನ್ನಡಾಭಿಮಾನದ ಅಸ್ತ್ರವನ್ನು ಪ್ರಯೋಗಿಸಲು ಅವಕಾಶ ಸಿಕ್ಕಿದೆಯೆಂದು ಉತ್ಸಾಹದಿಂದ ಒಬ್ಬ ಸಂಸದರು ಮತ್ತು ಇತರರು ತಾವೂ ಇಂಥ ಹೇಳಿಕೆಗಳನ್ನು ನೀಡಿದರು. ಕರ್ನಾಟಕದ ರಾಜಕೀಯದಲ್ಲಿ ಒಂದೂ ರೂಪಾಯಿ ಖರ್ಚು ಇಲ್ಲದೆ, ಯಾವ ಶ್ರಮವೂ ಇಲ್ಲದೆ ಮಾಡಬಹುದಾದ ರಾಜಕೀಯವೆಂದರೆ ಕನ್ನಡ ಅಭಿಮಾನದ ರಾಜಕೀಯ. ಈ ರಾಜಕೀಯದಲ್ಲಿ ಕನ್ನಡವೆಂದರೆ ಒಂದು ಗಾಳಿಮಾತು, ಒಂದು ಘೋಷಣೆ. ಅದು ಸಾಮಾಜಿಕವಾಗಿ, ಆರ್ಥಿಕವಾಗಿ ಅಮೂರ್ತವಾದುದು. ಉದಾಹರಣೆಗೆ ಇತ್ತೀಚೆಗೆ ಕರಾವಳಿಯಲ್ಲಿ ಒ.ಖ.ಕ.ಐ. ಕಂಪನಿಯಲ್ಲಿ ಅತಿ ಕಡಿಮೆ ಸಂಖ್ಯೆಯ ಕನ್ನಡಿಗರು ಉದ್ಯೋಗಗಳಿಗಾಗಿ ಆಯ್ಕೆಯಾಗಿ ಬೃಹತ್ ಪ್ರತಿಭಟನೆ ನಡೆದಾಗ ಇದೇ ಸಂಸದರು ಹುಟ್ಟು ಮೂಕರಾಗಿಬಿಟ್ಟಿದ್ದರು. ಇನ್ನೊಬ್ಬ ಸುಪ್ರಸಿದ್ಧ ಕೂಗುಮಾರಿಯವರು ಚಾತುರ್ಮಾಸ ಪ್ರವೇಶ ಮಾಡಿದ ಕರ್ನಾಟಕದ ಮೊದಲ ಮಹಿಳೆಯಾಗಿ ಮೌನವಾದರು.

ಕಾರಣ ಸರಳವಿದೆ. ಬಿ.ಜೆ.ಪಿ. ಪಕ್ಷವು ಉತ್ತರ ಭಾರತದ, ಹಿಂದಿ ಪ್ರಾಂತ್ಯಗಳ ಪಕ್ಷ. ಅದು ದಕ್ಷಿಣಭಾರತವನ್ನು ಪ್ರತಿನಿಧಿಸುವುದಿಲ್ಲ. ಇತ್ತೀಚಿನ ಲೇಖನವೊಂದರಲ್ಲಿ ಇತಿಹಾಸಕಾರ ರಾಮಚಂದ್ರ ಗುಹಾ ವಿವರಿಸಿದಂತೆ ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಇತರ ಎಲ್ಲಾ ಸೂಚ್ಯಂಕಗಳಲ್ಲಿ ಮುಂದಿರುವ ದಕ್ಷಿಣ ಭಾರತದ ರಾಜ್ಯಗಳು ರಾಷ್ಟ್ರ ರಾಜಕಾರಣದಲ್ಲಿ ಕೇವಲ ಅಂಚಿನಲ್ಲಿವೆ. ನನ್ನ ದೃಷ್ಟಿಯಲ್ಲಿ ಇದಕ್ಕೆ ಕಾರಣವೆಂದರೆ ಸಿದ್ಧಾಂತದಲ್ಲಿ ಹಾಗೂ ಕಾರ್ಯಚಟುವಟಿಕೆಯಲ್ಲಿ ಇಲ್ಲಿಯ ಬಿ.ಜೆ.ಪಿ. ರಾಜಕಾರಣಿಗಳನ್ನು ಲೆಕ್ಕಕ್ಕೇ ಇಲ್ಲದಷ್ಟು ಅಪ್ರಸ್ತುತರು. ಅವರನ್ನು ಉತ್ತರಭಾರತದ ರಾಜಕೀಯವು ಎಂದಿಗೂ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಏನೇ ಇದ್ದರೂ ಅವರು ಸಂಖ್ಯಾ ಬಲಕ್ಕೆ ಬೇಕಾಗಿರುವ ಅಂಕಿಗಳು ಮಾತ್ರ. ನಮ್ಮ ಬಿ.ಜೆ.ಪಿ. ಸಂಸದರಲ್ಲಿ ಒಂದು ಸಾರಿಯೂ ಸಂಸತ್‌ನಲ್ಲಿ ಬಾಯಿಬಿಡದವರ ಸಂಖ್ಯೆಯು ಗಿನ್ನೆಸ್ ದಾಖಲೆಯಾಗಿದೆ. ಹೀಗಾಗಿ ಅವರುಗಳು ಪ್ರಮಾಣ ಸ್ವೀಕರಿಸಿದ ಮೇಲೆ ಕರ್ನಾಟಕದಲ್ಲಿಯೇ ಇದ್ದುಕೊಂಡು ತಮ್ಮ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಭ್ರಷ್ಟಾಚಾರ ಹಾಗೂ ಲೈಂಗಿಕ ಹಗರಣಗಳನ್ನು ಮಾಡುತ್ತಾ ಕ್ರಿಯಾಶೀಲರಾಗಿದ್ದಾರೆ. ಇವರಿಗೆ ಕೇರಳದ ಎಡಪಂಥೀಯ ಸರಕಾರವು ಊರುಗಳ ಕನ್ನಡ ಹೆಸರುಗಳನ್ನು ಬದಲಾಯಿಸುತ್ತಿದೆ ಎನ್ನುವ ಸಂಗತಿ ಒಂದು ವರವಾಗಿ ಕಂಡಿತು. ಆದರೇನು ಮಾಡುವುದು ವಿಜಯ ಪಿಣರಾಯಿ ಅವರು ಇವರೆಲ್ಲ ನೆಲಕ್ಕೆ ಮೂಗು ತಿಕ್ಕುವಂತೆ ಅಂಥ ಪ್ರಸ್ತಾಪವೇ ಇಲ್ಲವೆಂದು ಬಿಟ್ಟಿದ್ದಾರೆ!

ಗಂಭೀರವಾದ ವಿಚಾರವೆಂದರೆ ಕನ್ನಡ ಪರ ರಾಜಕೀಯವು ಒಂದು ನಗೆನಾಟಕದ ಮಟ್ಟಕ್ಕೆ ಕುಸಿದಿದೆ. ನಾನು ಪ್ರಸ್ತಾಪಿಸಿದ ಗುಹಾ ಅವರ ಲೇಖನದಲ್ಲಿ ಬರುವ ಒಂದು ವಿವರವೆಂದರೆ ಇಲ್ಲಿಯ ಅನುಕೂಲ ಪರಿಸ್ಥಿತಿಯಿಂದಾಗಿ ಇಲ್ಲಿಗೆ ವಲಸೆ ಬಂದು ಉದ್ಯಮ, ವ್ಯಾಪಾರಗಳನ್ನು ಆರಂಭಿಸುವ ಉತ್ತರ ಭಾರತೀಯರ, ಇತರ ಪ್ರದೇಶಗಳ ಸಂಖ್ಯೆಯು ದೊಡ್ಡದಾಗಿದೆ. ಆದರೆ ಇಲ್ಲಿಂದ ಹೊರಗಡೆಗೆ ಹೋಗಿ ಉದ್ಯಮಶೀಲರಾದ ಕನ್ನಡಿಗರ ಸಂಖ್ಯೆ ಬಹಳ ಕಡಿಮೆ. ಇದಕ್ಕೆ ಕಾರಣವೆಂದರೆ ಕನ್ನಡಿಗರ ಸಾಹಸಹೀನತೆ ಮಾತ್ರವಲ್ಲ ಉತ್ತರದ ರಾಜ್ಯಗಳು ಈಗ ತಲುಪಿರುವ ಅಮಾನವೀಯ ಪರಿಸ್ಥಿತಿ ಕೂಡ. ಬಿ.ಜೆ.ಪಿ. ಆಳ್ವಿಕೆಯ ಉತ್ತರ ಪ್ರದೇಶ ಮತ್ತು ಬಿಹಾರ್‌ಗಳು ಅನುಭವಿಸುತ್ತಿರುವ ದೊಂಬಿ, ಹಿಂಸೆ, ಅರಾಜಕತೆಗಳು ಭೀಕರವಾಗಿವೆ. ಪ್ರಶ್ನೆಯೆಂದರೆ ವಲಸೆ ಬಂದಿರುವ ಉದ್ಯಮಿಗಳು ಅದೆಷ್ಟು ಜನ ಕನ್ನಡಿಗರಿಗೆ ಉದ್ಯೋಗ ನೀಡಿದ್ದಾರೆ? ಈ ಅಂಕಿ ಸಂಖ್ಯೆಗಳು ನಮ್ಮ ರಾಜಕೀಯ ಪಕ್ಷಗಳ ಬಳಿ ಇವೆಯೆ? ಸಮೀಕ್ಷೆಗಳನ್ನು ನಡಸಲಾಗಿದೆಯೆ? ಇದನ್ನು ಕನ್ನಡದ ದುರಭಿಮಾನ ಎಂದು ಹೇಳುವುದು ಸುಲಭ, ಅಥವಾ ಕರಾವಳಿಯ ಬಲಪಂಥೀಯ ರಾಜಕಾರಣಿಗಳು ಹೇಳಿದ ಹಾಗೆ "ನಮ್ಮ ಹುಡುಗರಿಗೆ ಕೌಶಲ್ಯವಿಲ್ಲ" ಎಂದೂ ಹೇಳಬಹುದು! ನಾನು ಮಾತನಾಡುತ್ತಿರುವುದು ಶ್ರಮಜೀವಿಗಳಲ್ಲಿ ಕನ್ನಡಿಗರಿಗೆ ಎಷ್ಟು ಪಾಲು ಸಿಕ್ಕಿದೆ ಎನ್ನುವುದರ ಬಗ್ಗೆ. ಬೇರೆ ರಾಜ್ಯಗಳಿಗೆ ಅನಿವಾರ್ಯವಾಗಿ ವಲಸೆ ಹೋಗುವವರ ಬಗ್ಗೆ. ಹಿಂದಿ ಹೇರಿಕೆಯಿಂದಾಗಿ ನಮ್ಮ ಬ್ಯಾಂಕುಗಳಿಂದಲೂ ಕಣ್ಮರೆಯಾದ ಕನ್ನಡ ಉದ್ಯೋಗಿಗಳ ಬಗ್ಗೆ. ಇದೆಲ್ಲವೂ ಕನ್ನಡ ರಾಜಕೀಯವಲ್ಲವೆ? ಅದರ ಬದಲಾಗಿ ಊರಿನ ಹೆಸರುಗಳ ಬಗೆಗಿನ ಸುಳ್ಳು ಸುದ್ದಿಯೇ ರಾಜಕಾರಣವಾಗಬೇಕೆ?

ಇದನ್ನು ವಿಸ್ತರಿಸಿ ನೋಡುವುದಾದರೆ ಇಡೀ ಬಲಪಂಥೀಯ ರಾಜಕಾರಣವೆ ಹೆಸರು ಬದಲಿಸುವ ರಾಜಕಾರಣವಾಗಿದೆ. ಮುಖ್ಯವಾಗಿ ಭಾರತದ ಮುಸ್ಲಿಮ್ ಚರಿತ್ರೆಗೆ ಸಂಬಂಧಿಸಿದ ಊರುಗಳ, ಕಟ್ಟಡಗಳ ಹೆಸರು ಬದಲಿಸುವ ರಾಜಕಾರಣವಿದಾಗಿದೆ. ಆದರೆ ಸಾಮಾಜಿಕ, ಆರ್ಥಿಕ ರಚನೆಗಳನ್ನು, ವಾಸ್ತವಗಳನ್ನು ಬದಲಾಯಿಸುವ ಕಾರ್ಯಸೂಚಿಯೇ ಈ ರಾಜಕಾರಣದಲ್ಲಿಲ್ಲ. ನನ್ನ ವಾಸದ ಊರಾಗಿರುವ ಶಿವಮೊಗ್ಗೆಯಲ್ಲಿ ಅನೇಕ ಬೀದಿಗಳ, ಗಲ್ಲಿಗಳ ಹೆಸರುಗಳನ್ನು ಬದಲಾಯಿಸಿ ಅವುಗಳಿಗೆ ಆರ್.ಎಸ್.ಎಸ್. ನಾಯಕರುಗಳ ಹೆಸರಿಡಲಾಗಿದೆ. ಈ ಬೀದಿಗಳು, ಗಲ್ಲಿಗಳು ಮೊದಲಿನಷ್ಟೇ ಕೊಳಕಾಗಿರುವುದು ಸಾಂಕೇತಿಕವಾಗಿದೆ! ಹೆಸರು ಬದಲಿಸಿದರೆ ಚರಿತ್ರೆ ಬದಲಾಗುವುದಿಲ್ಲವೆಂದು ಗೊತ್ತಿದ್ದರೂ ಇಂಥ ಸಾಂಕೇತಿಕ ಭಾವುಕ ಕಾರ್ಯಾಚರಣೆಯು ನಡೆಯುತ್ತಲೆ ಇರುತ್ತದೆ. ಚರಿತ್ರೆಯ ಪುನರ್‌ರಚನೆಯ ಸೈದ್ಧಾಂತಿಕ ರಾಜಕೀಯವೂ ಈ ಕಾರ್ಯಾಚರಣೆಯ ಹಿಂದಿದೆ. ಅನೇಕ ಶತಮಾನಗಳವರೆಗೆ ಸ್ವರಾಜ್ಯವಿಲ್ಲದೆ "ಇನ್ನೊಬ್ಬರ" ಆಳ್ವಿಕೆಗೆ ಒಳಗಾಗಿದ್ದರ ಬಗೆಗಿನ ಕೀಳರಿಮೆಯ ರಾಜಕೀಯವಿದಾಗಿದೆ. ಅಲ್ಲದೆ ಭಾರತದ ಚರಿತ್ರೆಯ ಬಹುತ್ವವನ್ನು ನಿರಾಕರಿಸಿ ಅದರ ಕೋಮುವಾದೀಕರಣವನ್ನು ಮಾಡುವ ಉದ್ದೇಶವು ಈ ರಾಜಕಾರಣಕ್ಕಿದೆ. ಇದು ಪಠ್ಯಪುಸ್ತಕಗಳ ಮೂಲಕ, ಸುಳ್ಳು ಸಂಶೋಧನೆಗಳ ಮೂಲಕ ಹಾಗೂ ಇಂಥ ನಾಮಾಂತರಗಳ ಮೂಲಕ ಮಾಡುವ ಪ್ರಯತ್ನವು ಪ್ರಬಲವಾಗುತ್ತಿದೆ. ಮಹಾರಾಷ್ಟ್ರದಲ್ಲಿ ವಿಶ್ವವಿದ್ಯಾಲಯವೊಂದರ ಹೆಸರನ್ನು ಬಾಬಾ ಸಾಹೇಬ ಅಂಬೇಡ್ಕರ್ ಅವರ ಹೆಸರಿಗೆ ಬದಲಾಯಿಸಬೇಕೆಂದು ನಡೆದ 'ನಾಮಾಂತರ' ಚಳುವಳಿಯು ಸ್ವಾತಂತ್ರ್ಯೋತ್ತರ ಕಾಲದ ಹಿಂಸಾತ್ಮಕ ಚಳುವಳಿಗಳಲ್ಲಿ ಒಂದಾಗಿತ್ತು. ಆದರೆ ಈ ಹಿಂಸೆಗೆ ಬಲಿಯಾದವರು ದಲಿತರು ಮತ್ತು ಮಾನಭಂಗಕ್ಕೆ ಒಳಗಾದವರು ದಲಿತ ಮಹಿಳೆಯರು. ಅಂದರೆ ನಾಮಾಂತರ ರಾಜಕೀಯವು ನಮ್ಮ ಸಮಾಜದ ವಾಸ್ತವಗಳಾದ ವರ್ಗ, ಜಾತಿ, ಲಿಂಗತ್ವಗಳನ್ನು ಒಳಗೊಂಡೇ ಇರುತ್ತದೆ.

ಕಾಸರಗೋಡು ಹಳ್ಳಿಗಳ ಹೆಸರು ಬದಲಾವಣೆ – ಫೇಸ್ ಬುಕ್ಕಿನಲ್ಲಿ

ನಮ್ಮ ಕರ್ನಾಟಕದ ಹೆಮ್ಮೆಯ ಬ್ಯಾಂಕುಗಳನ್ನು ಉತ್ತರ ಭಾರತೀಯರು ಮುಕ್ಕಿ ತಿನ್ನುವಾಗ ನೀವೆಲ್ಲಿ ಕತ್ತೆ ಕಾಯೋಕೆ ಹೋಗಿದ್ದಿರಿ?

ನಿಮ್ಮ ದೊಡ್ಡ ಸಾಹೇಬ್ರು ನಮ್ಮ ಏರ್ಪೋರ್ಟ್ ಅನ್ನು ಅದಾನಿಯ ಕಾಲಬುಡದಲ್ಲಿ ಇಡುವಾಗ ಯಾಕೆ ಗೋಣು ಅಲ್ಲಾಡಿಸಿ ಸುಮ್ಮನಾದಿರಿ?

ಕನ್ನಡದಲ್ಲಿದ್ದ ನಾಮಫಲಕಗಳನ್ನು ಹಿಂದಿಯಲ್ಲಿ ಬದಲಾಯಿಸಿ ಬರೆದಾಗ ನಿಮ್ಮ ನಾಲಗೆ ಯಾಕೆ ಹೊರಳದೇ ಹೋಯ್ತು?

ದಕ್ಷಿಣ ಕನ್ನಡದ ಹೆಚ್ಚಿನ ಬ್ಯಾಂಕುಗಳಲ್ಲಿ ಕನ್ನಡ/ತುಳು ಜನರ ಬದಲಾಗಿ ಹಿಂದಿಯವರು 'ಆಪ್ ಕೋ ಕ್ಯಾ ಚಾಹಿಯೇ' ಎಂದು ಹಲ್ಲು ಕಿರಿಯುವಾಗ, ನಿಮ್ಮ ಸದ್ದೇ ಇರುವುದಿಲ್ಲ?

ಮೊನ್ನೆ ಮೊನ್ನೆ ನಮ್ಮ MRPL ಉದ್ಯೋಗಗಳನ್ನು ಉತ್ತರ ಭಾರತೀಯರು ಕಸಿದುಕೊಂಡಾಗಲೂ ನಿಮ್ಮ ಕೈಯಲ್ಲಿ ಏನೂ ಕಿಸಿಯೋಕ್ಕಾಗಲಿಲ್ಲವಲ್ಲ?

ಈಗ ಯಾವುದೋ ಅನಧಿಕೃತ ಮಾಹಿತಿ ಹಿಡಿದುಕೊಂಡು, ಕೇರಳದ ಮುಖ್ಯಮಂತ್ರಿಗಳಿಗೆ ಬುದ್ಧಿ ಹೇಳಲು ಹೊರಟಿದ್ದೀರಲ್ಲಾ.. ಅದ್ಯಾವ ರಾಜಕೀಯ ಬೇಳೆ ಬೇಯಿಸಲು ಹವಣಿಸುತ್ತಿದ್ದೀರಿ ಸ್ವಾಮೀ? ಕೇರಳಿಗರು ಅಲ್ಲಿದ್ದ ನಿಮ್ಮ ಪಕ್ಷದ ಒಂದು ಗೂಡಂಗಡಿಯನ್ನು ಕೂಡಾ ಕಳೆದ ಚುನಾವಣೆಯಲ್ಲಿ ಮುಚ್ಚಿಬಿಟ್ಟಿದ್ದಾರೆ.. ಇನ್ನೂ ಬೇಕಾ ಮಂಗಳಾರತಿ ನಿಮಗೆ?

ನಮ್ಮ ಜಿಲ್ಲೆಯಲ್ಲಿ, ಅಂದರೆ ನಿಮ್ಮ ಲೋಕಸಭಾ ಕ್ಷೇತ್ರದಲ್ಲಿ ಸಾಕಷ್ಟು ಜ್ವಲಂತ ಸಮಸ್ಯೆಗಳಿವೆ.. ಪಟ್ಟಿ ಬೇಕಾದರೆ ಕೇಳಿ, ಕೊಡುತ್ತೇನೆ.. ಸಾಧ್ಯವಾದರೆ ಅವುಗಳನ್ನು ಬಗೆಹರಿಸಿ.. ಮೇಲೆ ಕೆಳಗೆ ನಿಮ್ಮದೇ ಸರಕಾರವಿದೆ, ನೆನಪಿರಲಿ!!

- Oscar

(Youth Voice ಗೋಡೆಯಲ್ಲಿ ಕಂಡದ್ದು)



ಕೃಪೆ: ಪಿ. ಮಹಮ್ಮದ್, ವಾ.ಭಾ.

ಊರಿನ ಸ್ಥಳ ನಾಮಗಳ ಬದಲಾವಣೆ

ಊರಿನ ಸ್ಥಳ ನಾಮಗಳು ಆಡಳಿತಾತ್ಮಕ ಪ್ರಭಾವ ಮತ್ತು ಭಾಷಿಕ ಪ್ರಭಾವದಿಂದ ಸಹಜವಾಗಿಯೇ ಬದಲಾಗುವುದು ರೂಢಿ. ಉದಾಹರಣೆಗೆ ನೂರು, ಸಾವಿರ ಮತ್ತು ಹಿಂದೆ ನಮ್ಮೂರುಗಳ ಹೆಸರು ಏನಿತ್ತು? ಅದೆಲ್ಲ ಉಳಿದು ಕೊಂಡಿದೆಯಾ?

ಇದು ಸಮರ್ಥನೆಯಲ್ಲ... ಆದರೆ ವಾಸ್ತವ.

ನಾನಿಲ್ಲಿ ದ. ಕ ಜಿಲ್ಲೆಯ ಅಂದರೆ ತುಳುನಾಡಿನ ಮೂಲ ಅಂದರೆ ಮೊದಲಿದ್ದ ಹೆಸರು ಹಾಗೂ ಇತ್ತೀಚೆಗೆ ಕನ್ನಡೀಕರಣಗೊಂಡ ಹೆಸರುಗಳ ಸಣ್ಣ ಉದಾಹರಣೆ ನನ್ನ ಅನುಭವದಲ್ಲಿ ಉಲ್ಲೇಖಿಸುತ್ತೇನೆ..

ತುಳು ಮೂಲ – ಕನ್ನಡ
ಉಬಾರ್ – ಉಪ್ಪಿನಂಗಡಿ
ಇಟ್ಟೆಲ್. – ವಿಟ್ಲ
ಕಾರ್ಲ – ಕಾರ್ಕಳ
ಬೋಳೆರ್ – ಬೆಳ್ತಂಗಡಿ
ಅಜ್ಜೆರೆಕಲ್ಲ್ – ಉಜಿರೆ
ಬಂಟಕಲ್ಲ್ – ಬಂಟ್ವಾಳ
ಏನೂರು – ವೇಣೂರು
ಪಾಣೆರ್ –ಪಾಣೆ ಮಂಗಳೂರು
ಕುಡ್ಲ –ಮಂಗಳೂರು
ಒಡಿಪು – ಉಡುಪಿ
ಕುಡುಮಪುರ – ಧರ್ಮಸ್ಥಳ
ಬೆದ್ರ – ಮೂಡುಬಿದಿರೆ
(ಇದೇ ಥರ ಪಡುಬಿದ್ರೆಗೂ ತುಳುನಾಮ ಇದೆ.)
ಪೊಸಂಗಡಿ – ಹೊಸಂಗಡಿ
ಮಾರಿಪ್ಪಳ್ಳ – ಮಣಿಪಾಲ
ಪೆರಂಗಡಿ – ಹಳೆಯಂಗಡಿ
ಮೂಜಿಕಾರ್ಯ –ಮೂರು ಕಾವೇರಿ
ಕಣಿಯಾರ (ಕಣಿಪುರ) –ಕುಂಬಳೆ, ಕುಂಬ್ಳಾ
ಕುರ್ಚಿಪ್ಪಳ್ಳ –ಉಪ್ಪಳ

ಹೀಗೆ ಹೆಸರಿಸುತ್ತಾ ಹೋದರೆ ಒಂದೊಂದು ಭಾಷೆಯಲ್ಲೂ ಒಂದೂರಿಗೆ ನೂರೆಂಟು ಹೆಸರು.
ಒಂದೂರಿಗೆ ಯಾವ ಭಾಷಿಕ ಹೆಸರು ಬೇಕು..?
ಊರಿಗೊಂದು ಹೆಸರು ಸೃಷ್ಟಿ ಆದದ್ದು ಹೇಗೆ?
ಈಗ ಈ ಚರ್ಚೆ ಯಾಕೆ???
ಇದರ ಹಿಂದೆ ಗೌಪ್ಯ ಅಜೆಂಡಾ ಇದೆ....



ಜಮ್ಮು ಮತ್ತು ಕಾಶ್ಮೀರದ ರಾಜಕೀಯ ಪಕ್ಷಗಳೊಂದಿಗಿನ ಈ ಸಭೆ ಮೋದಿ ಸರ್ಕಾರ ಮತ್ತು ಬಿಜೆಪಿಯ ಇದಕ್ಕಿಂತ ಬಹಳ ಸಂಕುಚಿತವಾದ ಅಜೆಂಡಾದಿಂದಾಗಿ ನಡೆದಿದೆ. ಜಮ್ಮು ಮತ್ತು ಕಾಶ್ಮೀರದ ಅಸ್ಮಿತೆಯನ್ನು ಮರುರೂಪಿಸುವುದು ಹಾಗೂ ಅದರ ಸ್ವಾಯತ್ತತೆಯ ಯಾವುದೇ ಕುರುಹನ್ನು ಅಳಿಸಿ ಹಾಕುವ ಅವರ ಸೈದ್ಧಾಂತಿಕ ಮತ್ತು ರಾಜಕೀಯ ಪರಿಯೋಜನೆಯನ್ನು ಕ್ರೋಡೀಕರಿಸುವ ಯೋಚನೆ ಇದರ ಹಿಂದಿದೆ. ಇದು ದೆಹಲಿ ಮತ್ತು ಕಾಶ್ಮೀರಿ ಜನರ ನಡುವಿನ ಕಂದಕವನ್ನು ಇನ್ನಷ್ಟು ಹೆಚ್ಚಿಸಿದೆ. ಕಾಶ್ಮೀರಿ ಜನರು ನಿರಾಶೆಗೊಂಡಿದ್ದಾರೆ ಹಾಗೂ ಹತಾಶರಾಗಿದ್ದಾರೆ. ಅಂತಿಮವಾಗಿ, ಕೇಂದ್ರ ಸರ್ಕಾರ ಕಾಶ್ಮೀರದ ಮೇಲೆ ಬಲವಂತದಿಂದ ಹಾಗೂ ಜನರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಬಗ್ಗುಬಡಿದು ಅಧಿಕಾರ ನಡೆಸಬಹುದಷ್ಟೇ.

ಜಮ್ಮು ಮತ್ತು ಕಾಶ್ಮೀರದ ಸ್ವರೂಪ ನಾಶ ಮೋದಿ-ಷಾ ಜೋಡಿಯ ಆಟದ ಹುನ್ನಾರ



ಪ್ರಕಾಶ ಕಾರಟ್

ನರೇಂದ್ರ ಮೋದಿ–ಅಮಿತ್ ಷಾ ಜೋಡಿ ಜಮ್ಮು ಮತ್ತು ಕಾಶ್ಮೀರದ ಮೂಲ ಸ್ವರೂಪವನ್ನು ತನ್ನ ಹಿಂದುತ್ವ ಸಿದ್ಧಾಂತದ ಆಧಾರದಲ್ಲಿ ಬದಲಾಯಿಸುವ ತಮ್ಮ ಧ್ಯೇಯಕ್ಕೆ ಕಟಿ ಬದ್ಧವಾಗಿದೆ.

ಪ್ರಧಾನಿ ನರೇಂದ್ರ ಮೋದಿ, ಜಮ್ಮು ಮತ್ತು ಕಾಶ್ಮೀರದ 14 ರಾಜಕೀಯ ಪಕ್ಷಗಳ ಸಭೆಯನ್ನು ಕರೆದಿದ್ದು ಒಂದು ಅಸಮಾನ್ಯ ನಡೆ ಎಂದು ಕಾಣಲಾಗಿದೆ. ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನವನ್ನು ನೀಡಿದ್ದ ಸಂವಿಧಾನದ 370ನೇ ವಿಧಿಯನ್ನು 2019 ಆಗಸ್ಟ್ 5ರಂದು ಏಕಾಏಕಿಯಾಗಿ ರದ್ದುಪಡಿಸಿ ರಾಜ್ಯವನ್ನು ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜಿಸಿ ನಂತರ ಅಲ್ಲಿನ ಮುಖ್ಯ ರಾಜಕೀಯ ಪಕ್ಷಗಳ ನಾಯಕರನ್ನು ಬಂಧಿಸಿ ಹಾಗೂ ಅವರನ್ನು ಭ್ರಷ್ಟರು ಹಾಗೂ ರಾಷ್ಟ್ರ–ವಿರೋಧಿಗಳು ಎಂದು ಬಿಂಬಿಸುವ ಮೂಲಕ ಕೆಟ್ಟ ಹೆಸರು ತರಲು ಸತತ ಪ್ರಯತ್ನಗಳನ್ನು ಮಾಡಲಾಗಿತ್ತು. ನಾಯಕರ ರಾಜಕೀಯ ಚಟುವಟಿಕೆಗಳಿಗೆ ಅಡ್ಡಿಪಡಿಸಲು ಎಲ್ಲ ಪ್ರಯತ್ನಗಳನ್ನು ನಡೆಸಲಾಯಿತು. ಇವೆಲ್ಲವುಗಳ ಹೊರತಾಗಿಯೂ ಗುಪ್ಕರ್ ಘೋಷಣೆಯ ಜನತಾ ಮೈತ್ರಿಕೂಟ (ಪೀಪಲ್ಸ್ ಅಲಯನ್ಸ್ ಫಾರ್ ಗುಪ್ಕರ್ ಡಿಕ್ಲರೇಷನ್), ಸಂಕ್ಷಿಪ್ತವಾಗಿ, ಗುಪ್ಕರ್ ಮೈತ್ರಿಕೂಟ ಈ ಸಭೆಯಲ್ಲಿ ಭಾಗವಹಿಸಲು ಒಪ್ಪಿತು. ಗುಪ್ಕರ್ ಮೈತ್ರಿಕೂಟದಲ್ಲಿ ಎರಡು ಪ್ರಮುಖ ಪಕ್ಷಗಳಾದ ನ್ಯಾಷನಲ್ ಕಾನ್ಫರೆನ್ಸ್(ಎನ್‌ಸಿ) ಮತ್ತು ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿ ಪಕ್ಷ (ಪಿಡಿಪಿ) ಕೂಡ ಸೇರಿವೆ. ಜಮ್ಮು ಮತ್ತು ಕಾಶ್ಮೀರದಲ್ಲಿ ರಾಜಕೀಯ ಪ್ರಕ್ರಿಯೆ ಆರಂಭಿಸುವ ಉಪಕ್ರಮಕ್ಕೆ ಪ್ರತಿಕ್ರಿಯಿಸಲು ನಿರಾಕರಿಸಿದವು ಎಂದು ಪ್ರಧಾನಿ ಮತ್ತು ಗೃಹ ಸಚಿವರು ಆರೋಪಿಸಲು ಅವಕಾಶ ನೀಡದಿರಲಿಕ್ಕಾಗಿ ಅವು ಸಭೆಯಲ್ಲಿ ಪಾಲ್ಗೊಳ್ಳಲು ಸಮ್ಮತಿಸಿದವು.

ಜೂನ್ 24ರಂದು ನಡೆದ ಸಭೆಯಲ್ಲಿ ಯಾವುದೇ ಫಲಿತಾಂಶ ಹೊರಹೊಮ್ಮಲಿಲ್ಲ. ಆದರೆ, ಈ ರೀತಿಯ ಸಭೆಯ ಅವಶ್ಯಕತೆ ಹಾಗೂ ಉದ್ದೇಶದ ಬಗ್ಗೆ ಹಲವು ಅನುಮಾನಗಳು ಮಾತ್ರ ಹುಟ್ಟಿಕೊಂಡಿದ್ದು ಸುಳ್ಳಲ್ಲ.

ಜಮ್ಮು ಮತ್ತು ಕಾಶ್ಮೀರದಲ್ಲಿನ ಕೇಂದ್ರ ಸರ್ಕಾರದ ಕ್ರಮ ಅಂತಿಮ ಘಟ್ಟ ತಲುಪಿರುವುದರಿಂದ ಅದನ್ನು ಹಿಂದಕ್ಕೆ ತಿರುಗಿಸುವ ಒತ್ತಡಕ್ಕೆ ಪ್ರಧಾನಿ ಮೋದಿ ಒಳಗಾಗಿದ್ದಾರೆ ಎಂದು ಕೆಲವು ರಾಜಕೀಯ ವೀಕ್ಷಕರು ಅಭಿಪ್ರಾಯ ಪಟ್ಟಿದ್ದಾರೆ. ಮೋದಿ ತಮ್ಮ ಹಿಂದಿನ ನಿಲುವಿನಂದ ಹಿಂದೆ ಸರಿದು ಯಾವ ರಾಜಕೀಯ ನಾಯಕರನ್ನು ಬಿಜೆಪಿ ಖಂಡಿಸಿತ್ತೋ ಹಾಗೂ ದಬ್ಬಾಳಿಕೆ ನಡೆಸಿತ್ತೋ ಅವರೊಂದಿಗೆಯೇ ರಾಜಕೀಯ ಪ್ರಕ್ರಿಯೆ ಪುನರಾರಂಭಿಸುವ ಒತ್ತಡಕ್ಕೆ ಒಳಗಾಗಿದ್ದಾರೆ ಎಂಬುದು ಅವರ ಅಭಿಮತ. ಆದರೆ ಇಂಥ ವಾದವನ್ನು ಯಾವುದೇ ಮುಲಾಜಿಲ್ಲದೆ ತಳ್ಳಿ ಹಾಕಬಹುದಾಗಿದೆ. ಯಾಕೆಂದರೆ, ಹಿಂದುತ್ವ ಸಿದ್ಧಾಂತಕ್ಕೆ ಅನುಗುಣವಾಗಿ ಜಮ್ಮು ಮತ್ತು ಕಾಶ್ಮೀರದ ಮೂಲ ಸ್ವರೂಪವನ್ನೇ ಬದಲಾಯಿಸಲು ಮೋದಿ–ಷಾ ಜೋಡಿ ಸಂಕಲ್ಪ ತೊಟ್ಟಿದೆ.

ಭೌಗೋಳಿಕ–ರಾಜಕೀಯ ಪರಿಗಣನೆಗಳ ಹಿನ್ನೆಲೆಯಲ್ಲಿ ಅವರು ಈ ಕ್ರಮಕ್ಕೆ ಮುಂದಾಗಿದ್ದಾರೆ ಎನ್ನುವುದು ಕೆಲವರ ವಾದವಾಗಿದೆ. ತಾಲಿಬಾನ್ ಪ್ರಾಬಲ್ಯ ಹೆಚ್ಚುತ್ತಿರುವ ಆಫ್ಘಾನಿಸ್ತಾನದ ವಿದ್ಯಮಾನಗಳು ಹಾಗೂ ಅಲ್ಲಿನ ಘಟನಾವಳಿಗಳಲ್ಲಿ ಪಾಕಿಸ್ತಾನದ ಪ್ರಮುಖ ಪಾತ್ರವಿರುವುದು ಮೋದಿಯ ಈ ನಡೆಗೆ ಮುಖ್ಯ ಕಾರಣವಾಗಿರಬಹುದು. ಆಫ್ಘಾನಿಸ್ತಾನದಿಂದ ಇದೇ ಸೆಪ್ಟೆಂಬರ್‌ನಲ್ಲಿ ತನ್ನ ಪಡೆಗಳನ್ನು ವಾಪಸ್ ಪಡೆಯಲಿರುವ ಅಮೆರಿಕ, ಕಾಶ್ಮೀರದಲ್ಲಿನ ಈಗಾಗಲೇ ಹದಗೆಟ್ಟಿರುವ ಪರಿಸ್ಥಿತಿ ಇನ್ನಷ್ಟು ಹದಗೆಡದಂತೆ ನೋಡಿಕೊಳ್ಳುವ ಕೆಲಸ ಮಾಡುತ್ತಿದೆ ಎಂದು ಕೆಲವರು ಭಾವಿಸಿದ್ದಾರೆ.

ಪಾಕಿಸ್ತಾನ–ಆಫ್ಘಾನಿಸ್ತಾನದಲ್ಲಿನ ವಿದ್ಯಮಾನಗಳು ನಿಜವಾಗಿಯೂ ಭಾರತಕ್ಕೆ ಕಳವಳಕಾರಿಯೇ. ಆದರೆ, ಇಂಥ ಬಾಹ್ಯ ವಿಚಾರಗಳು ಜಮ್ಮು ಮತ್ತು ಕಾಶ್ಮೀರದಲ್ಲಿ ಮೋದಿಯವರ ಪ್ರಸಕ್ತ ನಡೆಗೆ ಕಾರಣವಾಗಲಾರದು.

ಜಮ್ಮು ಮತ್ತು ಕಾಶ್ಮೀರದ ರಾಜಕೀಯ ಪಕ್ಷಗಳೊಂದಿಗಿನ ಈ ಸಭೆ ಮೋದಿ ಸರ್ಕಾರ ಮತ್ತು ಬಿಜೆಪಿಯ ಇದಕ್ಕಿಂತ ಬಹಳ ಸಂಕುಚಿತವಾದ ಅಜೆಂಡಾದಿಂದಾಗಿ ನಡೆದಿದೆ. ಜಮ್ಮು ಮತ್ತು ಕಾಶ್ಮೀರದ ಅಸ್ಮಿತೆಯನ್ನು ಮರುರೂಪಿಸುವುದು ಹಾಗೂ ಅದರ ಸ್ವಾಯತ್ತತೆಯ ಯಾವುದೇ ಕುರುಹನ್ನು ಅಳಿಸಿ ಹಾಕುವ ಅವರ ಸೈದ್ಧಾಂತಿಕ ಮತ್ತು ರಾಜಕೀಯ ಪರಿಯೋಜನೆಯನ್ನು ಕ್ರೋಡೀಕರಿಸುವ ಯೋಚನೆ ಇದರ ಹಿಂದಿದೆ.

ಜಮ್ಮು ಮತ್ತು ಕಾಶ್ಮೀರವನ್ನು ವಿಭಜಿಸಿ ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖ್ ಎಂಬ ಎರಡು ಕೇಂದ್ರಾಡಳಿತ ಪ್ರದೇಶ ರಚಿಸಿದ ಬರ್ಬರ ಕೃತ್ಯ ಒಂದು ವ್ಯವಸ್ಥಿತ ಹಾಗೂ ಉದ್ದೇಶಪೂರ್ವಕ ಕ್ರಮವಾಗಿತ್ತು.


ಸಂವಿಧಾನದ 370ನೇ ವಿಧಿಯು ನ್ಯಾಯಾಂಗದ ಪರಿಶೀಲನೆಗೆ ಒಳಪಡದಂತೆ ಇದುವರೆಗೆ ವ್ಯವಸ್ಥಿತವಾಗಿ ಖಾತರಿಪಡಿಸಿಕೊಂಡಿರುವ ಮೋದಿ ಸರಕಾರ, ಇಲ್ಲಿನ ಜನಸಂಖ್ಯಾ ಸಂರಚನೆಯನ್ನು ಬದಲಾಯಿಸಲು ಬುಡಮಟ್ಟದಲ್ಲಿ ಕೆಲಸ ಮಾಡುತ್ತಿದೆ. ಇದಕ್ಕಾಗಿ ಹೊರ ರಾಜ್ಯದವರು ಕೂಡ ಅಲ್ಲಿ ಜಮೀನು ಖರೀದಿಸಲು ಹಾಗೂ ಇತರ ಸಂಪನ್ಮೂಲ ಪಡೆದು ಕೊಳ್ಳಲು ಅವಕಾಶ ನೀಡುವ ಈಗ ವಾಸಕ್ಕೆ ಸಂಬಂಧಿಸಿದ (ಡೊಮಿಸೈಲ್) ಹೊಸ ಕಾನೂನು ತಂದಿದೆ.

ರಾಜಕೀಯ ರಂಗದಲ್ಲಿ, ಕೇಂದ್ರಾಡಳಿತ ಪ್ರದೇಶದ ಚುನಾವಣಾ ಕ್ಷೇತ್ರಗಳ ಹೊಸ ಪುನರ್‌ವಿಂಗಡಣೆಗಾಗಿ ಪುನರ್‌ವಿಂಗಡಣಾ ಆಯೋಗವನ್ನು ರಚಿಸಲಾಗಿದೆ. ಹಳೆಯ ಜಮ್ಮು ಮತ್ತು ಕಾಶ್ಮೀರ ವಿಧಾನ ಸಭೆಯಲ್ಲಿ ಒಟ್ಟು 87 ಸ್ಥಾನಗಳಿದ್ದು, ಆ ಪೈಕಿ ಕಣಿವೆಯಲ್ಲಿ 46, ಜಮ್ಮುನಲ್ಲಿ 37 ಮತ್ತು ಲಡಾಖ್‌ನಲ್ಲಿ 4 ಸ್ಥಾನಗಳಿದ್ದವು. 20 ಸ್ಥಾನಗಳನ್ನು ಪಾಕಿಸ್ತಾನ ಆಕ್ರಮಿತ ಕಾಶ್ಮೀರ (ಪಿಒಕೆ) ಪ್ರದೇಶಕ್ಕೆ ಮೀಸಲಿಡಲಾಗಿದೆ. ಈಗ ಹೊಸ ಅಸೆಂಬ್ಲಿ ಹಿಂದಿನದ್ದಕ್ಕಿಂತ 7 ಹೆಚ್ಚು, ಅಂದರೆ ಒಟ್ಟು 94 ಸ್ಥಾನಗಳನ್ನು ಹೊಂದಲಿದೆ. ಮರುವಿಂಗಡಣೆ ಪ್ರಕ್ರಿಯೆ ಜಮ್ಮು ವಲಯದಲ್ಲಿ ಸ್ಥಾನ ಹೆಚ್ಚಿಸುವ ನಿರೀಕ್ಷೆಯಿದೆ. ಅಲ್ಲದೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿಯನ್ನೂ ಕಲ್ಪಿಸುವ ಸಂಭವವಿದೆ. ವಿಧಾನಸಭೆಯಲ್ಲಿ ಕಣಿವೆಯ ತೂಕವನ್ನು ಇಳಿಸುವುದು ಇದರ ಹಿಂದಿನ ಹುನ್ನಾರವಾಗಿದೆ. ಜಮ್ಮುನಲ್ಲಿ ಬಿಜೆಪಿ ಪ್ರಾಬಲ್ಯ ಖಾತರಿಪಡಿಸಿ ಭವಿಷ್ಯದಲ್ಲಿ ಯಾವುದೇ ಸರ್ಕಾರ ಬಿಜೆಪಿಯ ಬೆಂಬಲವಿಲ್ಲದೆ ಅಸ್ತಿತ್ವದಲ್ಲಿ ಉಳಿಯಲಾಗದಂತೆ ಮಾಡುವುದಕ್ಕಾಗಿಯೇ ಇಷ್ಟೆಲ್ಲಾ ಕೈವಾಡಗಳು.

ಮರುವಿಂಗಡಣೆ ಮೂಲಕ ಜಮ್ಮು ಮತ್ತು ಕಣಿವೆ ನಡುವೆ ಕೋಮು ವಿಭಜನೆಯನ್ನು ಹೆಚ್ಚಿಸುವುದು ಬಿಜೆಪಿ ಉದ್ದೇಶವಾಗಿದೆ. ಅದೇ ಹೊತ್ತಿಗೆ, ಕಣಿವೆಯ ಪ್ರಮುಖ ಪ್ರಾದೇಶಿಕ ಪಕ್ಷಗಳನ್ನು ಅಸ್ತವ್ಯಸ್ತಗೊಳಿಸುವಲ್ಲಿ ಮತ್ತು ಬಿಜೆಪಿಯೊಂದಿಗೆ ಶಾಮೀಲಾಗುವ ಹೊಸ ಶಕ್ತಿಗಳನ್ನು ಸೃಷ್ಟಿಸುವಲ್ಲಿ ಕೇಂದ್ರ ಸರ್ಕಾರ ಮತ್ತು ಬಿಜೆಪಿ ನಿರತವಾಗಿವೆ.

ಜೂನ್ 24ರ ಸಭೆಯಲ್ಲಿ ದಿಕ್ಕು ಏನೆಂಬುದು ಸ್ಪಷ್ಟವಾಗಿದೆ: ಕ್ಷೇತ್ರಗಳ ಪುನರ್‌ವಿಂಗಡಣೆ ಮೊದಲು; ಅದಕ್ಕೆ ಎಲ್ಲ ಪಕ್ಷಗಳು ಸಹಕರಿಸಬೇಕು ಹಾಗೂ ಅದನ್ನು ಕಾನೂನು ಬದ್ಧಗೊಳಿಸಬೇಕು ಎನ್ನುವುದೇ ಅದರ ಸಂದೇಶ. ಅದಾದ ನಂತರ, ಚುನಾವಣೆ ನಡೆಸುವುದು. ಅದರ ನಂತರವಷ್ಟೆ 'ಸೂಕ್ತ ಸಮಯದಲ್ಲಿ' ರಾಜ್ಯ ಸ್ಥಾನಮಾನದ ವಿಚಾರ. 'ಚುನಾವಣೆ ನಡೆಯಲು ಅನುಕೂಲವಾಗುವಂತೆ ಕ್ಷೇತ್ರ ಮರುವಿಂಗಡಣೆ ತ್ವರಿತವಾಗಿ ಆಗಬೇಕು. ಅದರಿಂದ ಜಮ್ಮು–ಕಾಶ್ಮೀರದ ಅಭಿವೃದ್ಧಿ ಪಥಕ್ಕೆ ಬಲ ನೀಡುವ ಒಂದು ಚುನಾಯಿತ ಸರಕಾರ ಸಿಗುವಂತಾಗಬೇಕು" ಎಂದು ಸಭೆಯ ನಂತರ ಪ್ರಧಾನಿ ಮೋದಿ ಟ್ವೀಟ್ ಮಾಡಿದ್ದಾರೆ. ಇದು ದೆಹಲಿ ಅಥವಾ ಪುದುಚೇರಿಯಲ್ಲಿ ಇರುವಂಥ ರೀತಿಯ ಚುನಾಯಿತ ಸರ್ಕಾರ ಆಗಲಿದೆಯೇ?

ಅಮಿತ್ ಷಾ ಟ್ವೀಟ್‌ನಲ್ಲಿ ಈ 'ಕಾಲಾನುಕ್ರಮಣಿಕೆ'ಯನ್ನು ಪುನರುಚ್ಚರಿಸಲಾಗಿದೆ. 'ಸಂಸತ್ತಿನಲ್ಲಿ ಭರವಸೆ ನೀಡಿರುವಂತೆ ರಾಜ್ಯದ ಸ್ಥಾನಮಾನ ನೀಡುವತ್ತ ಪುನರ್‌ವಿಂಗಡಣೆ ಪ್ರಕ್ರಿಯೆ ಹಾಗೂ ಶಾಂತಿಯುತ ಚುನಾವಣೆ ಪ್ರಮುಖ ಮೈಲಿಗಲ್ಲುಗಳು' ಎಂದು ಷಾ ಟ್ವೀಟ್‌ನಲ್ಲಿ ಹೇಳಿದ್ದಾರೆ.



"ನಮ್ಮ ನಡುವೆ ಏಕೆ ಈ ದೂರ?"

ದಿಲ್ಲಿ ಮತ್ತು ದಿಲ್(ಹೃದಯ)ಗಳ ದೂರವನ್ನು ಇಳಿಸಬೇಕು ಎಂದು ಪ್ರಧಾನಿಗಳು ಹೇಳಿದರಂತೆ. ಆದರೆ ಈ ಸಭೆಯ ಮೂಲಕ ಅದನ್ನು ಇನ್ನಷ್ಟು ಹೆಚ್ಚಿಸಲಾಗಿದೆ

ವ್ಯಂಗ್ಯಚಿತ್ರ: ಪೆನ್‌ಪೆನ್ಸಿಲ್‌ಡ್ರಾ

ಯಾವ ರೀತಿಯ ರಾಜ್ಯ ಸ್ಥಾನಮಾನ ನೀಡಲಾಗುತ್ತದೆಂದು ಸಭೆಯಲ್ಲೂ ಸ್ಪಷ್ಟಪಡಿಸಿಲ್ಲ ಹೊರಗೂ ಹೇಳಿಲ್ಲ. ಇದು ಲಡಾಖ್ ಸೇರಿದ ಏಕೀಕೃತ ಜಮ್ಮು ಮತ್ತು ಕಾಶ್ಮೀರದ ಪೂರ್ಣ ರಾಜ್ಯದ ಸ್ಥಾನಮಾನವೇ? ಅಥವಾ ಅಧಿಕಾರ ಮೊಟಕುಗೊಂಡು ಉಪ ರಾಜ್ಯಪಾಲರ ಮಾತೇ ನಡೆಯುವ ದೆಹಲಿಯಂಥ ಸರಕಾರವೇ?

ದೆಹಲಿಯಲ್ಲಿ ನಡೆದ ಸಭೆ ಹಾಗೂ ಅದರ ಫಲಿತಾಂಶದ ಬೆಲೆ ಎಷ್ಟು ಎಂಬುದನ್ನು ಕಾಶ್ಮೀರ ಕಣಿವೆಯ ಜನರು ತಿಳಿದು ಕೊಂಡಿದ್ದಾರೆ. ಈ ಸಭೆಯು ದೆಹಲಿ ಮತ್ತು ಕಾಶ್ಮೀರಿ ಜನರ ನಡುವಿನ ಕಂದಕವನ್ನು ಇನ್ನಷ್ಟು ಹೆಚ್ಚಿಸಿದೆ. ಕಾಶ್ಮೀರಿ ಜನರು ನಿರಾಶೆಗೊಂಡಿದ್ದಾರೆ ಹಾಗೂ ಹತಾಶರಾಗಿದ್ದಾರೆ. ಅಂತಿಮವಾಗಿ, ಕೇಂದ್ರ ಸರ್ಕಾರ ಕಾಶ್ಮೀರದ ಮೇಲೆ ಬಲವಂತದಿಂದ ಹಾಗೂ ಜನರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಬಗ್ಗುಬಡಿದು ಅಧಿಕಾರ ನಡೆಸಬಹುದಷ್ಟೇ.

ಅನು: ವಿಶ್ವ



ಚೀನಾ ಕಮ್ಯುನಿಸ್ಟ್ ಪಕ್ಷದ ಇತಿಹಾಸ ಹಂತ-1

ಜನತೆಯ ನಾಯಕನಾಗುವ ದೀರ್ಘ ಪಯಣ

ಮೂಲ: ಆರ್. ಅರುಣ ಕುಮಾರ್,
ಅನುವಾದ : ವಸಂತರಾಜ ಎನ್.ಕೆ

ಇದೇ ಜುಲೈ 1 ರಂದು ಚೀನಾದ ಕಮ್ಯುನಿಸ್ಟ್ ಪಕ್ಷ ಸ್ಥಾಪನೆಯಾಗಿ ನೂರು ವರ್ಷಗಳು ಸಂದಿವೆ. ಚೀನಾದಾದ್ಯಂತ ಇದನ್ನು ಸಂಭ್ರಮದಿಂದ ಆಚರಿಸಲಾಗುತ್ತಿದೆ. ಅತ್ಯಂತ ಅವಮಾನಕರ ದುರ್ಭರ ಸ್ಥಿತಿಯಲ್ಲಿ ಜೀವಿಸುತ್ತಿದ್ದ ಚೀನಾದ ಜನತೆಯ ನಾಯಕನಾಗಿ ಈ ನೂರು ವರ್ಷಗಳಲ್ಲಿ, ಕಡು ಬಡತನ ನಿರ್ಮೂಲನ ಮಾಡಿ ಎಲ್ಲರಿಗೂ ಸಾಕಷ್ಟು ನೆಮ್ಮದಿಯ ಜೀವನ ಮಟ್ಟ ಒದಗಿಸಿದ, ಸಮೃದ್ಧವಾದ ಮತ್ತು ಎರಡನೆಯ ಅತಿ ದೊಡ್ಡ ಆರ್ಥಿಕತೆ ಉಳ್ಳ ದೇಶವಾಗಿಸಿದ ಈ ಸಂದರ್ಭದಲ್ಲಿ ಈ ಪಕ್ಷದ ಇತಿಹಾಸ ಅರಿತುಕೊಳ್ಳುವುದು ಅಗತ್ಯ. ಚೀನಾ ಕಮ್ಯುನಿಸ್ಟ್ ಪಕ್ಷದ ಇತಿಹಾಸವನ್ನು ಸಾಮಾನ್ಯವಾಗಿ ನಾಲ್ಕು ಹಂತಗಳಾಗಿ ವಿಂಗಡಿಸಲಾಗುತ್ತದೆ. 1921-1934ರ ಮೊದಲ ಹಂತ ಪಕ್ಷ ಚೀನಾದ ಜನತೆಯ ನಾಯಕನಾಗಲು ಆಶಾದೀಪವಾಗಲು ನಡೆಸಿದ ಹಲವು ಪ್ರಯೋಗಗಳ ಏಳು-ಬೀಳುಗಳ ದೀರ್ಘ ಪಯಣದ ಹಂತ. ಎರಡನೆಯ ಹಂತ ಚೀನಾದ ಜನತೆಯ ಮನಗಳನ್ನು ಗೆದ್ದ ಪಕ್ಷ ಗಂಭೀರವಾಗಿ ಜನತಾ ಪ್ರಜಾಪ್ರಭುತ್ವ ಕ್ರಾಂತಿಯತ್ತ ಸಾಗಿದ 1935-1949ರ ಅವಧಿ. ಕ್ರಾಂತಿಯ ನಂತರ ಸಮಾಜವಾದಿ ಸಮಾಜ ಕಟ್ಟುವತ್ತ ಹಲವು ಪ್ರಯೋಗಗಳಲ್ಲಿ ಕೆಲವು ಬಾರಿ ದಾರಿ ತಪ್ಪಿ ಅದನ್ನು ಸರಿಪಡಿಸಿಕೊಂಡು ಮುನ್ನಡೆದ 1950-1978ರ ಮೂರನೆಯ ಹಂತ. ಹಿಂದಿನ ಪ್ರಮಾದಗಳನ್ನು ಸರಿಪಡಿಸಿಕೊಂಡು ಆಧುನಿಕ ಸಮೃದ್ಧ ಸಮಾಜ ಕಟ್ಟುವುದರಲ್ಲಿ ಗಮನಾರ್ಹ ಯಶಸ್ಸು ಗಳಿಸಿದ 1979-2021ರ ನಾಲ್ಕನೆಯ ಹಂತ. ಈ ನಾಲ್ಕು ಹಂತಗಳಲ್ಲಿ ಪಕ್ಷದ ಇತಿಹಾಸವನ್ನು ಸ್ಥೂಲವಾಗಿ ಈ ಲೇಖನ ಸರಣಿಯಲ್ಲಿ ಕೊಡಲಾಗುವುದು. ಈ ಕಂತಿನಲ್ಲಿ ಮೊದಲ ಹಂತದ ಇತಿಹಾಸದ ಸ್ಥೂಲ ನಿರೂಪಣೆ. (ಮುಂದಿನ ವಾರ : ಎರಡನೆಯ ಹಂತ - ಜನತಾ ಪ್ರಜಾಪ್ರಭುತ್ವದತ್ತ)

ಕ್ರಾಂತಿ-ಪೂರ್ವ ರಶ್ಯಾ, ವಸಾಹತುಶಾಹಿಯ ಮತ್ತು ಸ್ಥಳೀಯ ಪಾಳೆಯಗಾರಿ ಧಣಿಗಳ ದಮನದಿಂದಾಗಿ ಬಡ ಜನತೆ ಭಾರಿ ಬೇಗುದಿ ಮತ್ತು ಸಂಕಷ್ಟಗಳಿಂದ ಬಳಲುತ್ತಿದ್ದ ಸಮಾಜವಾಗಿತ್ತು. ವಿವಿಧ ವಸಾಹತುಶಾಹಿಗಳು ಚೀನಾವನ್ನು ತಮ್ಮ ಪ್ರಭಾವದ ಹಲವು ವಲಯಗಳಾಗಿ ವಿಭಜಿಸಿದ್ದರು. ಪಾಳೆಯಗಾರಿ ಧಣಿಗಳ ದೊಡ್ಡ ವಿಭಾಗ ವಸಾಹತುಶಾಹಿಗಳೊಂದಿಗೆ ಜನತೆಯನ್ನು ಶೋಷಿಸುವುದರಲ್ಲಿ ಶಾಮೀಲಾಗಿದ್ದರು. ಹಾಗಾಗಿ, ಚೀನಾ ಅರೆ-ಪಾಳೆಯಗಾರಿ, ಅರೆ-ವಸಾಹತು ದೇಶವಾಗಿತ್ತು. ಪಾಳೆಯಗಾರಿ ಮತ್ತು ವಸಾಹತು ಶೋಷಣೆಯ ವಿರುದ್ಧ ಸ್ವಯಂ-ಸ್ಫೂರ್ತ ದಂಗೆಗಳು ಮತ್ತು ಹೋರಾಟಗಳು ನಡೆದಿದ್ದರೂ, ಅವು 1911ರ ವರೆಗೆ ಸಂಘಟಿತ ರೂಪ ಪಡೆದಿರಲಿಲ್ಲ.

1911ರ ಕ್ರಾಂತಿಯ ಸಾರಸತ್ವ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟವಾಗಿತ್ತು. ವಸಾಹತುಶಾಹಿಗಳ ಕೈಗೊಂಬೆಯಾಗಿದ್ದ ಕಿಂಗ್ ಸಾಮ್ರಾಜ್ಯವನ್ನು ಉರುಳಿಸುವುದರಲ್ಲಿ ಆ ಕ್ರಾಂತಿ ಯಶಸ್ವಿಯಾಯಿತು. ಅದು ಪ್ರಜಾಸತ್ತಾತ್ಮಕ ಪ್ರಜ್ಞೆಯನ್ನು ಜಾಗೃತಗೊಳಿಸಿ, ಜನತೆಯಲ್ಲಿ ಕ್ರಾಂತಿಕಾರಿ ಯೋಚನೆಗಳನ್ನು ಬಿತ್ತುವುದಕ್ಕೆ ಹಾದಿ ಮಾಡಿಕೊಟ್ಟಿತು. ಆದರೆ ಪಾಳೆಯಗಾರಿ ಶಕ್ತಿಗಳೊಂದಿಗೆ ತನ್ನ ರಾಜಿಯಿಂದಾಗಿ, ಜನತೆಯ ಪ್ರಜಾಸತ್ತಾತ್ಮಕ ಆಕಾಂಕ್ಷೆಗಳನ್ನು ಈಡೇರಿಸುವುದರಲ್ಲಿ ಮತ್ತು ಶೋಷಣೆ ಕೊನೆಗೊಳಿಸುವುದರಲ್ಲಿ ವಿಫಲವಾಯಿತು. ಚೀನಿ ಸಮಾಜದ ಮೇಲೆ ಸಾಮ್ರಾಜ್ಯಶಾಹಿ ಶಕ್ತಿಗಳು ತಮ್ಮ ನಿಯಂತ್ರಣವನ್ನು ಮೊದಲಿನಂತೆ ಮುಂದುವರೆಸಿದ್ದರು. ಈ ವಿಫಲತೆ, ಚೀನಾದ ಪ್ರಗತಿಪರ ಶಕ್ತಿಗಳು ಶೋಷಣೆ ಮತ್ತು ದಮನದ ವಿರುದ್ಧ ತಮ್ಮ ಹೋರಾಟಕ್ಕೆ ಸರಿಯಾದ ಹಾದಿಯೊಂದನ್ನು ಹುಡುಕಲಾರಂಭಿಸಿದ್ದರು.

ಪಕ್ಷದ ಸ್ಥಾಪನೆ

ರಶ್ಯಾದಲ್ಲಿ 1917ರಲ್ಲಿ ನಡೆದ ಅಕ್ಟೋಬರ್ ಕ್ರಾಂತಿಯು ಪ್ರಗತಿಪರ ಶಕ್ತಿಗಳನ್ನು ಹುರಿದುಂಬಿಸಿತು ಮತ್ತು ಭಾರೀ ಆಸಕ್ತಿಯನ್ನು ಉಂಟು ಮಾಡಿತು. ತಮ್ಮ ದೇಶದಂತೆ ಇರುವ ಪರಿಸ್ಥಿತಿ ಇರುವ ದೇಶದಲ್ಲೇ ಇಂತಹ ಕ್ರಾಂತಿಯಾಗಿದೆ ಎಂದು ಅವರು ಪರಿಗಣಿಸಿದರು. ಮೊದಲ ಬಾರಿಗೆ, ವೈಜ್ಞಾನಿಕ ಸಮಾಜವಾದ ಮತ್ತು ಮಾರ್ಕ್ಸ್‌ವಾದದ ಯೋಚನೆಗಳು ಹೊಸ ನಿರೀಕ್ಷೆಗಳನ್ನು ಮೂಡಿಸಿದವು ಮತ್ತು ಕ್ರಾಂತಿಕಾರಿ ಹಾದಿಯನ್ನು ತೋರಿಸಿದವು. ಮಾರ್ಕ್ಸ್‌ವಾದದ ಅಧ್ಯಯನದಲ್ಲಿ ಅಪಾರ ಆಸಕ್ತಿ ಮೂಡಿದವು. ಈ ಹಿನ್ನೆಲೆಯಲ್ಲಿ, ಮೊದಲ ಮಹಾಯುದ್ಧದ ನಂತರ ಚೀನಾ ಸಾಮ್ರಾಜ್ಯಶಾಹಿಗಳ ಒತ್ತಡಗಳಿಗೆ ಮಣಿದು ಸೋಲೊಪ್ಪಿಕೊಂಡದ್ದು ಜನತೆಯಲ್ಲಿ ತೀವ್ರ ಆಕ್ರೋಶವನ್ನು ಉಂಟು ಮಾಡಿತು. ಇದರ ವಿರುದ್ಧ ಮೇ4, 1919ರಂದು ಭಾರೀ ಸಾಮ್ರಾಜ್ಯಶಾಹಿ-ವಿರೋಧಿ ಚಳುವಳಿಯನ್ನು ಬೆಜಿಂಗ್ ನಲ್ಲಿ ವಿದ್ಯಾರ್ಥಿಗಳು ಆರಂಭಿಸಿದರು. ಉದಯಗೊಳ್ಳುತ್ತಿದ್ದ ಕಾರ್ಮಿಕ ವರ್ಗ ವಿದ್ಯಾರ್ಥಿಗಳನ್ನು ಬೆಂಬಲಿಸಿದ್ದರು. ಚೀನಾದ ಸಮಾಜದ ಆಧುನಿಕ 'ವರ್ಗ'ಗಳಲ್ಲಿ ಮೂಡಿ ಬರುತ್ತಿದ್ದ ಜಾಗೃತಿ ಕಮ್ಯುನಿಸ್ಟ್ ಪಕ್ಷದ ಹುಟ್ಟಿಗೆ ಅಡಿಪಾಯ ಹಾಕಿತು ಎಂದು ಮೊದಲ ಬಾರಿಗೆ ಕಾಣಹತ್ತಿತು.

ಚೀನಾದ ಕೈಗಾರಿಕಾ ಮತ್ತು ಕಾರ್ಮಿಕರ ಚಳುವಳಿಯ ಕೇಂದ್ರವಾಗಿದ್ದ ಶಾಂಘಾಯ್ ನಲ್ಲಿ 1920ರಲ್ಲಿ ಸ್ಥಾಪಿತವಾಗಿದ್ದ ಮೊದಲ ಕಮ್ಯುನಿಸ್ಟ್ ಗುಂಪು ಪಕ್ಷದ ಪ್ರಣಾಳಿಕೆಯ ಕರಡನ್ನು ಸಿದ್ಧಪಡಿಸಿತ್ತು. ಶಾಂಘಾಯ್ ನಲ್ಲಿ 1921ರಲ್ಲಿ ನಡೆಸಲಾದ ಪಕ್ಷದ ಮೊದಲ ಮಹಾಧಿವೇಶನದಲ್ಲಿ ಮಾವೋ-ತ್ಸೆ-ತುಂಗ್ ಸೇರಿದಂತೆ 12 ಪ್ರತಿನಿಧಿಗಳು ಭಾಗವಹಿಸಿದ್ದರು. ಇವರು ಚೀನಾದ ವಿವಿಧ ಭಾಗಗಳ ಹಲವು ಗುಂಪುಗಳಲ್ಲಿ ಕೆಲಸ ಮಾಡುತಿದ್ದ 50 ಸದಸ್ಯರನ್ನು ಪ್ರತಿನಿಧಿಸಿದ್ದರು. ಗೂಢಚಾರರು ಬೆನ್ನುಹತ್ತಿದ್ದನ್ನು ಗಮನಿಸಿ, ಅವರು ಮಹಾಧಿವೇಶನವನ್ನು ಝೇಜಿಯಾಂಗ್ ಪ್ರಾಂತದ ಜಿಯಾಕ್ಸಿಂಗ್ ನಲ್ಲಿರುವ ನನ್ಹು ಸರೋವರದಲ್ಲಿ ಒಂದು ದೋಣಿಯಲ್ಲಿ ಸ್ಥಳಾಂತರಿಸಿ ಮುಂದುವರೆಸಿದರು. ಈ ಮಹಾಧಿವೇಶನದಲ್ಲಿ ಮಾರ್ಕ್ಸ್‌ವಾದ-ಲೆನಿನ್ ವಾದವನ್ನು ಎತ್ತಿ ಹಿಡಿದು ಪಕ್ಷದ ಮೊದಲ ಕಾರ್ಯಕ್ರಮವನ್ನು ಅಂಗೀಕರಿಸಿ, ಚೀನಾ ಕಮ್ಯುನಿಸ್ಟ್ ಪಕ್ಷದ ರಚನೆಯನ್ನು ಘೋಷಿಸಲಾಯಿತು.

ಚೀನಾದ ಸಮಾಜವಾದಿ ಯುವ ಲೀಗ್ ನ ಸ್ಥಾಪನೆ ಮತ್ತು ಮೊದಲ ಕಾರ್ಮಿಕ ಸಮ್ಮೇಳನವನ್ನು 1922ರಲ್ಲಿ ಸಂಘಟಿಸುವುದರಲ್ಲಿ ಪಕ್ಷ ಪ್ರಮುಖ ಪಾತ್ರ ವಹಿಸಿತು. ಪಕ್ಷದ ಸದಸ್ಯರು ಕಾರ್ಮಿಕರನ್ನು ಸಕ್ರಿಯವಾಗಿ ಸಂಘಟಿಸಿ ಅವರ ಹೋರಾಟಗಳ ನಾಯಕತ್ವವನ್ನು ವಹಿಸಿಕೊಂಡರು. ಎರಡನೆಯ ಮಹಾಧಿವೇಶನದಲ್ಲಿ ಪಕ್ಷವು ಸಾಮಾಜ್ಯಶಾಹಿ ಮತ್ತು ಪಾಳೆಯಗಾರಿ ವ್ಯವಸ್ಥೆಯನ್ನು ವಿರೋಧಿಸಿ, ಪ್ರಜಾಸತ್ತಾತ್ಮಕ ಕ್ರಾಂತಿಗೆ ಪ್ರಜಾಸತ್ತಾತ್ಮಕ ಐಕ್ಯರಂಗದ ರಚನೆಗೆ ಕರೆಕೊಟ್ಟಿತು. ಪಕ್ಷ ಒಂದು ಸಂವಿಧಾನವನ್ನು ಅಂಗೀಕರಿಸಿ, ತಾನು ಒಂದು ಶ್ರಮಜೀವಿಗಳ ಪಕ್ಷ ಎಂದು ಹೇಳಿತು.

ಕೊಮಿಂಟಾಂಗ್ ಜತೆ ಸಂಘರ್ಷ-ರಾಜಿಯ ಹೊಯ್ದಾಟ

ಕಾರ್ಮಿಕ ವರ್ಗದ ಹೋರಾಟಗಳಲ್ಲಿ ಭಾಗವಹಿಸಿ ನಾಯಕತ್ವ ವಹಿಸಿದ ಹಲವು ಪಕ್ಷದ ಸದಸ್ಯರ ಮೇಲೆ ವಸಾಹತುಶಾಹಿ ಆಡಳಿತಗಾರರು ಮತ್ತು ಅವರ ಏಜೆಂಟರಾದ ಪಾಳೆಯಗಾರಿ ಗೂಂಡಾಗಳು ಕ್ರೂರ ದಾಳಿಗಳನ್ನು ನಡೆಸಿದರು. ನೂರಾರು ಸದಸ್ಯರು ಇಂತಹ ದಾಳಿಗಳಿಗೆ ಬಲಿಯಾದರು ತ್ತು ಸಾವಿರಾರು ಸದಸ್ಯರು ತೀವ್ರವಾಗಿ ಗಾಯಗೊಂಡರು. ಈ ಅನುಭವಗಳು ಅವರಲ್ಲಿ ಉಕ್ಕಿನ ದೃಢನಿಶ್ಚಯ ಮತ್ತು ತಿಳಿವಳಿಕೆಯ ಪ್ರಬುದ್ಧತೆಯನ್ನು ಉಂಟು ಮಾಡಿದ್ದವು. 1923ರಲ್ಲಿ ನಡೆದ ರಾಷ್ಟ್ರೀಯ ಮಹಾಧಿವೇಶನದಲ್ಲಿ ಪಕ್ಷ (ಚೀನಾದ ಪ್ರಮುಖ ಬೂರ್ಜ್ವಾ-ಪಾಳೆಯಗಾರಿ ಪಕ್ಷವಾಗಿದ್ದ) ಕೊಮಿಂಟಾಂಗ್ ಜತೆ ಸಂಬಂಧಧ ಕುರಿತು ಒಂದು ಪ್ರಸ್ತಾವವನ್ನು ಅಂಗೀಕರಿಸಿತು. ಇದರಲ್ಲಿ ಕಮ್ಯುನಿಸ್ಟ್ ಪಕ್ಷದ ಸದಸ್ಯರು ಕೊಮಿಂಟಾಂಗ್ ಸೇರಿ ಕೆಲಸ ಮಾಡಬೇಕು ಮತು ಅಲ್ಲಿಯೂ ಕಮ್ಯುನಿಸ್ಟರ ಸಂಖ್ಯೆ ಹೆಚ್ಚುವಂತೆ ನೋಡಿಕೊಳ್ಳಬೇಕು ಎಂದು ಪ್ರಸ್ತಾವದ ಮೂಲಕ ನಿರ್ದೇಶಿಸಿತು. ಕಮ್ಯುನಿಸ್ಟ್ ಪಕ್ಷದ ಪ್ರಭಾವ ಮತ್ತು ಅದರ ಜತೆ ಜಂಟಿ ಕಾರ್ಯಾಚರಣೆಗಳು ಕೊಮಿಂಟಾಂಗ್ ನ್ನು ಪ್ರಭಾವಿಸಿದವು. ಸನ್ ಯಾಟ್ ಸೆನ್ ಅವರ ನಾಯಕತ್ವದಲ್ಲಿ 1923ರಲ್ಲಿ ರಾಷ್ಟ್ರೀಯ ಸರಕಾರ ರಚಿಸಿದ ಕೊಮಿಂಟಾಂಗ್ ನ ಸಾಮ್ರಾಜ್ಯಶಾಹಿ-ವಿರೋಧಿ ಪಾಳೆಯಗಾರಿ-ವಿರೋಧಿ ಘೋಷಣೆಯಲ್ಲಿ ಇದು ಬಿಂಬಿತವಾಗಿತ್ತು.

ನಾಲ್ಕನೆಯ ಮಹಾಧಿವೇಶನದಲ್ಲಿ (1925) ಕೊಮಿಂಟಾಂಗ್ ಜತೆ ಜಂಟಿ ಕಾರ್ಯಾಚರಣೆಯ ವಿಮರ್ಶೆ ಮಾಡಿ, ಪಕ್ಷ ತನ್ನ ಅಸ್ಮಿತೆಯನ್ನು ಕಾಪಾಡಿಕೊಳ್ಳಬೇಕು ಮತ್ತು ಕೊಮಿಂಟಾಂಗ್ ಜತೆ ರಾಜಿ ಮನೋಭಾವವನ್ನು ಬಿಡಬೇಕು ಎಂದು ಹೇಳಿತು. ಎಡ ಶಕ್ತಿಗಳನ್ನು ಬಲಗೊಳಿಸಲು ಕೊಮಿಂಟಾಂಗ್ ನಲ್ಲಿದ್ದ ಎಡ ಮತ್ತು ಬಲ ವಿಭಾಗಗಳ ಆಂತರಿಕ ಸಂಘರ್ಷದಲ್ಲಿ ಪ್ರಭಾವ ಬೀರಬೇಕೆಂದೂ ಹೇಳಿತು. ಆದರೆ ಆ ವರ್ಷ ಸನ್ ಯಾಟ್ ಸೆನ್ ಅವರ ಸಾವು ಕಮ್ಯುನಿಸ್ಟ್-ಕೊಮಿಂಟಾಂಗ್ ಸಂಬಂಧಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದವು.



'ಉಳುವವನಿಗೆ ಭೂಮಿ' ಘೋಷಣೆ

ಸಾಮ್ರಾಜ್ಯಶಾಹಿ ದಮನದ ವಿರುದ್ಧ ಹಲವು ನಗರಗಳಲ್ಲಿ 1925ರಲ್ಲಿ ಕಾರ್ಮಿಕ ವರ್ಗದ ಹೋರಾಟಗಳು ಮತ್ತು ಮುಷ್ಕರಗಳು 1925ರಲ್ಲಿ ನಡೆದವು. ಚೀನಾ ಸಮಾಜದ ವಿವಿಧ ವರ್ಗಗಳ ಗುಣಸ್ವಭಾವಗಳ ಮತ್ತು ವರ್ಗ ಸಂಬಂಧಗಳ ಅಧ್ಯಯನವನ್ನು ಮಾವೊ-ತ್ಸೆ-ತುಂಗ್ ನಡೆಸಿದರು. ಸಾಮ್ರಾಜ್ಯಶಾಹಿ, ಜಮೀನುದಾರರು, ಯುದ್ಧಕೋರ ಪಾಳೆಯಗಾರರು, ಅವರ ಅಡಿಯಾಳು ವರ್ಗಗಳ ಮತ್ತು ಮಧ್ಯಮ ವರ್ಗದ ಬಲಪಂಥೀಯರ ಆಳ್ವಿಕೆ ಮತ್ತು ಯಜಮಾನಿಕೆಯನ್ನು ಕಿತ್ತೊಗೆಯಬೇಕಾದರೆ, ಕಾರ್ಮಿಕ ವರ್ಗ ದೇಶದ ಬಹುಸಂಖ್ಯಾತರಾಗಿರುವ ಬಡ ರೈತರು, ಮಧ್ಯಮ ರೈತರ ಜತೆ ಐಕ್ಯತೆ ಸಾಧಿಸಬೇಕು ಮತ್ತು ಮಧ್ಯಮ ವರ್ಗದ (ಪ್ರಮುಖವಾಗಿ ರಾಷ್ಟ್ರೀಯ ಬೂರ್ಜ್ವಾ ವರ್ಗ) ಎಡಪಂಥೀಯರನ್ನು ತಮ್ಮ ಕಡೆಗೆ ಸ್ನೇಹಹಸ್ತ ಚಾಚಿ ಸೆಳೆದುಕೊಳ್ಳಬೇಕು, ಈ ಕ್ರಾಂತಿಕಾರಿ ವರ್ಗಗಳ ಜಂಟಿ ಆಳ್ವಿಕೆಯನ್ನು ಸ್ಥಾಪಿಸಬೇಕು ಎಂಬ ಕಾರ್ಯಯೋಜನೆಯನ್ನು ಈ ಅಧ್ಯಯನದ ಫಲವಾಗಿ ಮಂಡಿಸಿದರು. ಈ ತಿಳುವಳಿಕೆಯೊಂದಿಗೆ, ಕಮ್ಯುನಿಸ್ಟ್ ಪಕ್ಷ ಮೊದಲ ಬಾರಿಗೆ 'ಉಳುವವನಿಗೆ ಭೂಮಿ' ಎಂಬ ನಿರ್ಣಯ ಮಾಡಿ ಅದಕ್ಕಾಗಿ ಕರೆ ಕೊಟ್ಟಿತು. ಇದಕ್ಕೆ ತದ್ವಿರುದ್ಧವಾಗಿ, ಕೊಮಿಂಟಾಂಗ್ ರಾಷ್ಟ್ರೀಯ ಬೂರ್ಜ್ವಾ ವರ್ಗದ ಆಳ್ವಿಕೆಯ ಪರವಾಗಿದ್ದರು.

ಕೊಮಿಂಟಾಂಗ್ ಒಳಗೆ ಕಮ್ಯುನಿಸ್ಟರ ಕೆಲಸದಿಂದಾಗಿ ಅವರ ಪ್ರಭಾವವನ್ನು ಹೆಚ್ಚಿಸಿತು ಮತ್ತು ಯುದ್ಧಕೋರ ಪಾಳೆಯಗಾರರ ವಿರುದ್ಧ ಮಿಲಿಟರಿ ವಿಜಯಗಳಲ್ಲಿ ಪರಿಣಮಿಸಿತು. ಕೊಮಿಂಟಾಂಗ್ ನ ನಾಯಕತ್ವ ವಹಿಸಿಕೊಂಡಿದ್ದ ಚಿಯಾಂಗ್ ಕೈ ಶೇಕ್, ಕಮ್ಯುನಿಸ್ಟ್ ಪ್ರಭಾವ ಹೆಚ್ಚಾಗುತ್ತಿರುವುದರಿಂದ ಗಾಬರಿಗೊಂಡು ಅವರ ವಿರುದ್ಧ ಹೋಗಲು ಆರಂಭಿಸಿದ. ಹೀಗಾಗಿ, ಕಮ್ಯುನಿಸ್ಟರು ಮತ್ತು ಕೊಮಿಂಟಾಂಗ್ ನಡುವೆ ಸಂಬಂಧ ಕೆಟ್ಟಿತು.

ಕಮ್ಯುನಿಸ್ಟ್ ನಾಯಕತ್ವದ ಹೊಂದಾಣಿಕೆ ಧೋರಣೆಯಿಂದಲೂ ಸಂಬಂಧ ಸುಧಾರಿಸಲಿಲ್ಲ. ಬದಲಿಗೆ, ಇದು ಕಮ್ಯುನಿಸ್ಟ್ ಪಕ್ಷದಲ್ಲಿ ಬಲ ಮಾರ್ಗಚ್ಯುತಿಗೆ ಕಾರಣವಾಯಿತು. ಕೊಮಿಂಟಾಂಗ್ ನಾಯಕರನ್ನು ಒಲಿಸಿಕೊಳ್ಳಲು ರೈತರಲ್ಲಿ ದೊಡ್ಡ ಪ್ರಮಾಣದಲ್ಲಿ ಜನಪ್ರಿಯವಾಗುತ್ತಿದ್ದ 'ಉಳುವವನಿಗೆ ಭೂಮಿ' ಘೋಷಣೆಯನ್ನು ಕೈ ಬಿಡಲಾಯಿತು. ಇದರಿಂದ ಉತ್ತೇಜಿತನಾದ ಚಿಯಾಂಗ್ ಕೈ ಶೇಕ್ ಕಮ್ಯುನಿಸ್ಟರನ್ನು ಕೊಮಿಂಟಾಂಗ್ ನ ಪ್ರಮುಖ ಸ್ಥಾನಗಳಿಂದ ಕಿತ್ತು ಹಾಕಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡ. ಐದನೇ ಮಹಾಧಿವೇಶನದಲ್ಲಿ ಕೇಂದ್ರ ಸಮಿತಿ ಈ ಬಲ ಮಾರ್ಗಚ್ಯುತಿಗೆ ಮತ್ತು ಬೂರ್ಜ್ವಾ ವಿರುದ್ಧ ಹೋರಾಟ ಕೈಬಿಟ್ಟದ್ದಕ್ಕೆ ತೀವ್ರ ಟೀಕೆಗೆ ಒಳಗಾಯಿತು. ಇದರ ಫಲವಾಗಿ ಕೊಮಿಂಟಾಂಗ್ ನ ಕಮ್ಯುನಿಸ್ಟ್-ವಿರೋಧಿ ಧೋರಣೆಯ ವಿರುದ್ಧ ಪ್ರತಿಭಟಿಸಿ, ಕಮ್ಯುನಿಸ್ಟ್ ಪಕ್ಷ ಜಂಟಿ ರಾಷ್ಟ್ರೀಯ ಸರಕಾರದಿಂದ ಹಿಂತೆಗೆಯಿತು.

ಗ್ರಾಮೀಣ ಕ್ರಾಂತಿಕಾರಿ ನೆಲೆಗಳ ಸ್ಥಾಪನೆ

ಕ್ರಾಂತಿಕಾರಿ ಸಶಸ್ತ್ರ ಹೋರಾಟಗಳ ಮೇಲೆ ತನ್ನ

ಪುಟ 15 ಕ್ಕೆ

ಕೋವಿಡ್ ಲಸಿಕೆ: ಬಿಗಿಯಾಗುತ್ತಿರುವ ಪೇಟೆಂಟ್ ಎಂಬ ನೇಣಿನ ಕುಣಿಕೆ

ಲಸಿಕೆಗಳ ಮೇಲಿನ ಪೇಟೆಂಟ್ ನಿಯಂತ್ರಣ ತೆಗೆದರೆ, ಕಡಿಮೆ ಮತ್ತು ಮಧ್ಯಮ ಆದಾಯದ ದೇಶಗಳಲ್ಲಿ ಇರುವ ಜನರಿಗೆ ಲಸಿಕೆ ನೀಡಲು ಕೇವಲ 6.5 ಬಿಲಿಯನ್ (ಶತಕೋಟಿ) ಡಾಲರ್ ಹಣ ಖರ್ಚು ಮಾಡಿದರೆ ಸಾಕು. ಒಂದು ವೇಳೆ ಈಗಿರುವ ಪೇಟೆಂಟ್ ನಿಯಮಗಳನ್ನು ಹಾಗೇ ಉಳಿಸಿಕೊಂಡರೆ ಇಷ್ಟೇ ಪ್ರಮಾಣದ ಲಸಿಕೆ ನೀಡಲು 80 ಬಿಲಿಯನ್ ಡಾಲರ್ ಹಣ ಖರ್ಚಾಗುತ್ತದೆ. ಅಂದರೆ ಪೇಟೆಂಟ್ ಕಾರಣದಿಂದ ಕಾರ್ಪೊರೇಟ್ ಔಷಧ ಕಂಪನಿಗಳಿಗೆ ಹೆಚ್ಚುವರಿಯಾಗಿ 73.5 ಬಿಲಿಯನ್ ಡಾಲರ್ ಲಾಭವಾಗುತ್ತದೆ. ಅಂದರೆ ಒಟ್ಟಾರೆ ಲಸಿಕೆ ವೆಚ್ಚದ ಶೇಕಡಾ 90 ರಷ್ಟು ಹಣ ಬಲಾಢ್ಯ ಔಷಧ ಕಂಪನಿಗಳ ಖಜಾನೆ ಸೇರುತ್ತದೆ. ಪೇಟೆಂಟ್ ಹಕ್ಕುಗಳನ್ನು ತಾತ್ಕಾಲಿಕವಾಗಿಯಾದರೂ ರದ್ದುಗೊಳಿಸಬೇಕಾಗಿರುವುದು ಕೇವಲ ಕೇವಲ ಬೆಲೆ ನಿಯಂತ್ರಣ ಸಾಧಿಸಲು ಮಾತ್ರವಲ್ಲದೆ ಉತ್ಪಾದನೆಗೆ ಇರುವ ಅಡೆತಡೆಗಳನ್ನು ನಿವಾರಿಸಿ ಗರಿಷ್ಠ ಪ್ರಮಾಣದಲ್ಲಿ ಲಸಿಕೆ ಉತ್ಪಾದನೆ ಮಾಡಲು ಕೂಡಾ ಪೇಟೆಂಟ್ ನಿಯಂತ್ರಣಗಳನ್ನು ರದ್ದುಗೊಳಿಸಬೇಕಾಗಿದೆ.



ಟಿ.ಎಲ್. ಕೃಷ್ಣೇಗೌಡ

ಕೋವಿಡ್ ಮೂರನೇ ಅಲೆ ಭಾರತಕ್ಕೆ ಅಪ್ಪಳಿಸಲು ಸಜ್ಜಾಗಿ ನಿಂತಿದೆ. 'ಡೆಲ್ಟಾ+' ಹೆಸರಿನಲ್ಲಿ ರೂಪಾಂತರಗೊಂಡ ಕರೋನಾ ವೈರಸ್ ಹರಡಿಕೊಳ್ಳಲು ಹಾತೊರೆಯುತ್ತಿದೆ. ಕರೋನಾ ವೈರಸ್ ಹರಡದಂತೆ ಮತ್ತು ಮತ್ತಷ್ಟು ಅವತಾರಗಳನ್ನು ತಾಳಿ ಮಾರಕವಾಗದಂತೆ ತಡೆಯಲು ಲಭ್ಯವಿರುವ ಸಾಧನಗಳೆಂದರೆ ವಿವಿಧ ಕಂಪನಿಗಳ ತರಾವರಿ ಲಸಿಕೆಗಳು.

ವಿಶ್ವ ಆರೋಗ್ಯ ಸಂಸ್ಥೆಯ ಮುಖ್ಯ ವಿಜ್ಞಾನಿ ಡಾ. ಸೌಮ್ಯ ಸ್ವಾಮಿನಾಥನ್ ಹೇಳುತ್ತಾರೆ 'ಡೆಲ್ಟಾ+ ವೈರಸ್ ತುಂಬಾ ವೇಗವಾಗಿ ಹರಡುತ್ತದೆ. ಆದರೆ ಆತಂಕ ಪಡುವ ಅಗತ್ಯವಿಲ್ಲ. ಈಗಿರುವ ಲಸಿಕೆಗಳು ರೋಗ ಬರದಂತೆ ತಡೆಯದಿದ್ದರೂ ಪ್ರಾಣಕ್ಕೆ ಅಪಾಯವಿಲ್ಲದಂತೆ ಮಾಡುತ್ತವೆ. ಹಾಗಾಗಿ ಲಸಿಕೆ ನೀಡುವುದನ್ನು ವ್ಯಾಪಕಗೊಳಿಸಬೇಕು' ಎಂದು. ಆದರೆ ಈ ಲಸಿಕೆಗಳು ಭಾರತದ, ಆಫ್ರಿಕಾದ, ಲ್ಯಾಟಿನ್ ಅಮೆರಿಕದ ಎಲ್ಲಾ ಜನರಿಗೂ ಲಭ್ಯವಾಗುವುದು ಯಾವಾಗ ಎನ್ನುವ ಪ್ರಶ್ನೆ ಮಾತ್ರ ಉತ್ತರವೇ ಹೊಳೆಯದ ಯಕ್ಷ ಪ್ರಶ್ನೆಯಾಗಿದೆ. ಲಸಿಕೆ ಕಾರ್ಯಕ್ರಮ ಆರಂಭವಾಗಿ ಆರು ತಿಂಗಳಾದರೂ ಭಾರತದಲ್ಲಿ ಇದುವರೆಗೆ ಶೇಕಡ 5 ರಷ್ಟು ಜನರಿಗೆ ಮಾತ್ರ ಎರಡೂ ಡೋಸ್ ಲಸಿಕೆ ನೀಡಲಾಗಿದೆ.

ವಿವಿಧ ದೇಶಗಳ ಸರ್ಕಾರಗಳು ನೀಡಿರುವ ಅಂಕಿಅಂಶಗಳ ಪ್ರಕಾರ ಮೂವತ್ತು ಲಕ್ಷ ಜನರು ಕೋವಿಡ್ –19 ಕ್ಕೆ ಬಲಿಯಾಗಿದ್ದರೆ, 'ದಿ ಎಕನಾಮಿಸ್ಟ್' ಪತ್ರಿಕೆಯ ಪ್ರಕಾರ ಕರೋನಾಗೆ ಬಲಿಯಾದವರ ಸಂಖ್ಯೆ ಒಂದು ಕೋಟಿಗೂ ಹೆಚ್ಚು, ಭಾರತದಲ್ಲೂ ನಲವತ್ತು ಲಕ್ಷಕ್ಕೂ ಹೆಚ್ಚಿನ ಜನರು ಕರೋನಾಗೆ ಬಲಿಯಾಗಿದ್ದಾರೆ. ಹೀಗಿರುವಾಗ ಯಾವುದೇ ಒಂದು ನಾಗರಿಕ ವ್ಯವಸ್ಥೆಯ ಜವಾಬ್ದಾರಿ ತನ್ನ ಜನತೆಯ ಪ್ರಾಣ ಕಾಪಾಡಿಕೊಳ್ಳಲು ಸಮರೋಪಾದಿಯಲ್ಲಿ ಕಾರ್ಯಾಚರಣೆಗೆ ಇಳಿಯುವುದು. ಆದರೆ ಬೃಹತ್ ಕಾರ್ಪೊರೇಟ್ ಔಷಧ ಕಂಪನಿಗಳು ಮತ್ತು ಅವುಗಳ ಬೆನ್ನ ಹಿಂದೆ ನಿಂತಿರುವ ಶ್ರೀಮಂತ ದೇಶಗಳು "ಲಾಭವೆಂಬ ಮೀನು ಹಿಡಿಯಲು ಬಡ ದೇಶಗಳ ಮತ್ತು ತಮ್ಮದೇ ದೇಶದ ಬಡವರ ಜೀವವನ್ನು ಗಾಳಕ್ಕೆ ಸಿಕ್ಕಿಸಿಕೊಳ್ಳುವ ಎರೆಹುಳುವಿನಂತೆ" ಬಳಸಿಕೊಳ್ಳುತ್ತಿದ್ದಾರೆ.

ಲಸಿಕೆ ಬಾಚಿಕೊಂಡ ಶ್ರೀಮಂತ ದೇಶಗಳು

'ಎಲ್ಲರಿಗೂ ಲಸಿಕೆ ನೀಡುವ ವರೆಗೆ ಯಾರೂ ಸುರಕ್ಷಿತ ಅಲ್ಲ' ಎಂಬುದು ಗೊತ್ತಿದ್ದರೂ ಇದುವರೆಗೆ ಪೂರೈಕೆ ಆಗಿರುವ ಲಸಿಕೆಯಲ್ಲಿ ಶೇಕಡ 75 ರಷ್ಟನ್ನು ಅಮೆರಿಕಾ ಹಾಗೂ ಯೂರೋಪಿನ ದೇಶಗಳು ಸೇರಿದಂತೆ ಹತ್ತು ಶ್ರೀಮಂತ ದೇಶಗಳು ಬಾಚಿಕೊಂಡಿವೆ. ಶೇಕಡ 0.3 ರಷ್ಟು ಮಾತ್ರ ಕಡಿಮೆ ಆದಾಯದ ದೇಶಗಳಿಗೆ ಸಿಕ್ಕಿದ್ದರೆ, ಇಡೀ ಆಫ್ರಿಕಾ ಖಂಡದ ಜನರಿಗೆ ದಕ್ಕಿರುವ ಲಸಿಕೆ ಶೇಕಡ 01 ಮಾತ್ರ. ಮುಂದುವರಿದ ಬಂಡವಾಳಶಾಹಿ ದೇಶಗಳು ಈಗಾಗಲೇ ಉತ್ಪಾದನೆ ಆಗಿರುವ ಲಸಿಕೆಯಲ್ಲಿ ಬಹುತೇಕ ಭಾಗವನ್ನು ಕೊಂಡು ತಮ್ಮ ಉಗ್ರಾಣಗಳಲ್ಲಿ ತುಂಬಿಕೊಂಡಿವೆ ಮತ್ತು ಮುಂದೆ ಉತ್ಪಾದನೆಯಾಗುವ ಲಸಿಕೆಯನ್ನು ಕೂಡ ಮುಂಗಡವಾಗಿ ಕಾದಿರಿಸಿಕೊಂಡಿವೆ. ಉದಾಹರಣೆಗೆ ಕೇವಲ 6.8 ಕೋಟಿ ಜನಸಂಖ್ಯೆ ಹೊಂದಿರುವ ಬ್ರಿಟನ್ 50 ಕೋಟಿ ಡೋಸ್ ಲಸಿಕೆಯನ್ನು ಸಂಗ್ರಹಿಸಿ ಇಟ್ಟುಕೊಂಡಿದೆ. ಆ ದೇಶದ ಎಲ್ಲಾ ಜನಗಳಿಗೆ ಎರಡೂ ಡೋಸ್ ಲಸಿಕೆ ನೀಡಿದರೂ ಇಂಗ್ಲೆಂಡಿಗೆ ಬೇಕಿರುವುದು ಕೇವಲ 13.6 ಕೋಟಿ ಡೋಸ್‌ಗಳು. ಅಂದರೆ ಇನ್ನೂ 36.4 ಕೋಟಿ ಡೋಸ್‌ಗಳನ್ನು ತನ್ನ ಗುಡಾಣದಲ್ಲಿಟ್ಟುಕೊಂಡಿರುವುದು ಯಾವ ಕಾರಣಕ್ಕೆ ಎಂಬುದು ಸ್ಪಷ್ಟವಾಗಿಲ್ಲ. ಅದೇ ರೀತಿ ಅಮೆರಿಕ ಕೂಡ ಹಲವು ಕೋಟಿ ಡೋಸ್ ಕೋವಿಡ್ ಲಸಿಕೆಯನ್ನು ಗುಡ್ಡೆ ಹಾಕಿಕೊಂಡು ಕುಳಿತಿದೆ. ಅಮೆರಿಕದ ಎಲ್ಲಾ ಜನರಿಗೆ ಲಸಿಕೆ ನೀಡುವ ವರೆಗೆ ಬೇರಾರಿಗೂ ಲಸಿಕೆ ಇಲ್ಲ ಎಂಬ ಅಮೆರಿಕದ ಧೋರಣೆ ಹಿಂದುಳಿದ ಆರ್ಥಿಕತೆಯ, ಬಡ ದೇಶಗಳಿಗೆ ಲಸಿಕೆ ರಫ್ತು ಮಾಡಲು ತಡೆಯುಂಟು ಮಾಡಿದೆ. ಇಂಗ್ಲೆಂಡಿನಲ್ಲಿ ಎರಡನೇ ಬಾರಿಗೆ ಲಸಿಕೆ ನೀಡುವ ಅಗತ್ಯಕ್ಕೆ ಬೇಕೇನೋ ಎಂದು ಭಾವಿಸಿದರೂ, ಮುಂದೆ ಉತ್ಪಾದನೆ ಆಗುವ ಲಸಿಕೆ ಅಥವಾ ರೂಪಾಂತರ ಹೊಂದಿದ ವೈರಾಣುವಿನ ಎದುರು ಈಗಿನ ಲಸಿಕೆಗಳು ಪರಿಣಾಮಕಾರಿಯೇ? ಎಂಬುದನ್ನು ಯೋಚಿಸಿದರೆ "ಬೀದಿಯಲ್ಲಿ ಜನರು ಹಸಿದು ಸಾಯುತ್ತಿರುವಾಗ ಬೆಳೆಯನ್ನೆಲ್ಲಾ ಕೊಯ್ಲು ಮಾಡಿ ಕಣಜ ತುಂಬಿಕೊಂಡ ಪಾಳೇಗಾರನಂತೆ" ಶ್ರೀಮಂತ ದೇಶಗಳು ವರ್ತಿಸುತ್ತಿವೆ. ಇದನ್ನು ನೋಡಿದ ವಿಶ್ವ ಆರೋಗ್ಯ ಸಂಸ್ಥೆಯ ಮಹಾ ನಿರ್ದೇಶಕ ಟೆಡ್ರೋಸ್ "ಇದೊಂದು ಹಗರಣಕೋರ ಅಸಮಾನತೆ" ಎಂದು ಆಕ್ರೋಶ ಹೊರ ಹಾಕಿದ್ದಾರೆ. ನವ ಉದಾರೀಕರಣದ ಕಾಳ ಸಂತೆಯಲ್ಲಿ 'ಬಡವನಿಗೆ ಸಾವ ಕೊಡಬ್ಯಾಡೋ ಸುಡಲಿಕ್ಕೆ ಸೌದಿಲ್ಲ" ಎನ್ನುವ ವಿಷಾದಕರ ಸನ್ನಿವೇಶ ಸೃಷ್ಟಿಯಾಗಿದೆ. ಯೂರೋಪಿನ, ಬಿಳಿಯರ, ಶ್ರೀಮಂತರ ಜೀವ ಅಮೂಲ್ಯವಾದರೆ ಏಷ್ಯಾದ, ಆಫ್ರಿಕಾದ, ಲ್ಯಾಟಿನ್ ಅಮೆರಿಕ ಕರಿಯರ, ದಲಿತರ, ಬಡವರ ಜೀವ ಕಾಲ ಕಸವಾಗಿದೆ. ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೋ ಗುಟೆರಸ್ "ಶ್ರೀಮಂತ ದೇಶಗಳು ಮತ್ತು ಪ್ರದೇಶಗಳು, ಬಡ ಮತ್ತು ಕಡಿಮೆ ಆದಾಯದ ದೇಶಗಳಿಗಿಂತ 30 ಪಟ್ಟು ಹೆಚ್ಚಿನ ವೇಗದಲ್ಲಿ ಲಸಿಕೆ ಪಡೆದುಕೊಳ್ಳುತ್ತಿವೆ. ಲಸಿಕೆ ನೀಡಿಕೆಯಲ್ಲಿನ ಈ ಕಂದರ ಅನ್ಯಾಯದ್ದು ಮಾತ್ರವಲ್ಲ ಯಾರಿಗೂ ಸುರಕ್ಷಿತ ಕೂಡ ಅಲ್ಲ" ಎಂದು ಹೇಳಿದ್ದಾರೆ.

ಲಸಿಕೆ ಕಾರ್ಯಕ್ರಮದಲ್ಲಿ 'ವರ್ಣಬೇಧ' ನೀತಿ ಅನುಸರಿಸಲಾಗುತ್ತಿದೆ. ಇಂತಹ ಅಮಾನವೀಯ ಕೆಲಸಕ್ಕೆ ಕಾರಣ ಲಾಭಕೋರ ಬಲಾಢ್ಯ, ಕಾರ್ಪೊರೇಟ್ ಔಷಧ ಕಂಪನಿಗಳು ಮತ್ತು ಆ ಕಂಪನಿಗಳಿಗೆ ಹಿಮ್ಮೇಳ ನುಡಿಸುತ್ತಿರುವ ಅಮೆರಿಕ ನೇತೃತ್ವದ ಜಿ–7 ದೇಶಗಳು. ಆಕ್ಸ್‌ಫಾಮ್ ವರದಿಯ ಪ್ರಕಾರ ಕೋವಿಡ್ ಲಸಿಕೆಗಳ ಮೇಲಿನ ಪೇಟೆಂಟ್ ನಿಯಂತ್ರಣ ತೆಗೆದರೆ, ಕಡಿಮೆ ಮತ್ತು ಮಧ್ಯಮ ಆದಾಯದ ದೇಶಗಳಲ್ಲಿ ಇರುವ ಜನರಿಗೆ ಲಸಿಕೆ ನೀಡಲು ಕೇವಲ 6.5 ಬಿಲಿಯನ್ (ಶತಕೋಟಿ) ಡಾಲರ್ ಹಣ ಖರ್ಚು ಮಾಡಿದರೆ ಸಾಕು. ಒಂದು ವೇಳೆ ಈಗಿರುವ ಪೇಟೆಂಟ್ ನಿಯಮಗಳನ್ನು ಹಾಗೇ ಉಳಿಸಿಕೊಂಡರೆ ಇಷ್ಟೇ ಪ್ರಮಾಣದ ಲಸಿಕೆ ನೀಡಲು 80 ಬಿಲಿಯನ್ ಡಾಲರ್ ಹಣ ಖರ್ಚಾಗುತ್ತದೆ. ಅಂದರೆ ಪೇಟೆಂಟ್ ಕಾರಣದಿಂದ ಕಾರ್ಪೊರೇಟ್ ಔಷಧ ಕಂಪನಿಗಳಿಗೆ ಹೆಚ್ಚುವರಿಯಾಗಿ 73.5 ಬಿಲಿಯನ್ ಡಾಲರ್ ಲಾಭವಾಗುತ್ತದೆ. ಅಂದರೆ ಒಟ್ಟಾರೆ ಲಸಿಕೆ ವೆಚ್ಚದ ಶೇಕಡಾ 90 ರಷ್ಟು ಹಣ ಬಲಾಢ್ಯ ಔಷಧ ಕಂಪನಿಗಳ ಖಜಾನೆ ಸೇರುತ್ತದೆ. ಪೇಟೆಂಟ್ ಹಕ್ಕುಗಳನ್ನು ತಾತ್ಕಾಲಿಕವಾಗಿಯಾದರೂ ರದ್ದುಗೊಳಿಸಬೇಕಾಗಿರುವುದು ಕೇವಲ ಕೇವಲ ಬೆಲೆ ನಿಯಂತ್ರಣ ಸಾಧಿಸಲು ಮಾತ್ರವಲ್ಲದೆ ಉತ್ಪಾದನೆಗೆ ಇರುವ ಅಡೆತಡೆಗಳನ್ನು ನಿವಾರಿಸಿ ಗರಿಷ್ಠ ಪ್ರಮಾಣದಲ್ಲಿ ಲಸಿಕೆ ಉತ್ಪಾದನೆ ಮಾಡಲು ಕೂಡಾ ಪೇಟೆಂಟ್ ನಿಯಂತ್ರಣಗಳನ್ನು ರದ್ದುಗೊಳಿಸಬೇಕಾಗಿದೆ.

ಭಾರತ ಮತ್ತು ಆಫ್ರಿಕಾದ ಒತ್ತಾಯದ ಮೇರೆಗೆ ತಾತ್ಕಾಲಿಕವಾಗಿ ಕೋವಿಡ್ ಲಸಿಕೆಗಳ ಮೇಲಿನ ಪೇಟೆಂಟ್ ಹಕ್ಕುಗಳನ್ನು ತಾತ್ಕಾಲಿಕವಾಗಿ ರದ್ದುಗೊಳಿಸಲು ಅಮೆರಿಕ ಒಪ್ಪಿದೆ. ಆದರೆ ಅಮೆರಿಕದ ಯೂರೋಪಿಯನ್ ಮಿತ್ರರು ಮತ್ತು ಜಗತ್ತಿನ 'ಮಹಾ ದಾನಿ' ಬಿಲ್ ಗೇಟ್ಸ್ ಇಂತಹ ಪ್ರಸ್ತಾಪಗಳನ್ನು ಬಲವಾಗಿ ವಿರೋಧಿಸಿದ್ದಾರೆ. ಕೋವಿಡ್ ಲಸಿಕೆಗಳ ಮೇಲಿನ ಭೌದ್ಧಿಕ ಆಸ್ತಿ ಹಕ್ಕುಗಳನ್ನು ಅಭಿವೃದ್ಧಿಶೀಲ ದ' ೀ ಶ' ಗ' ಳ' ೂ ಡ' ನ' ಹ' ಂ ಚಿ ಕ' ೂ ಳ' ್ಳ ವ' ಪ್ರಸ್ತಾಪವನ್ನು ಬಿಲ್ ಗೇಟ್ಸ್ ತಳ್ಳಿ ಹಾಕಿದ್ದಾರೆ. ಮೈಕ್ರೋಸಾಫ್ಟ್ ಸಂಸ್ಥೆಯ ಸ್ಥಾಪಕ ಮತ್ತು ಮಾಲೀಕ 'ಮಹಾ ದಾನಿ' ಬಿಲ್ ಗೇಟ್ಸ್ 25 ಏಪ್ರಿಲ್2021 ರಂದು ಬ್ರಿಟಿಷ್ ಮಾಧ್ಯಮ ಸ್ಕೈನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ "ಈ ವಿಷಯದಲ್ಲಿ ನಮ್ಮನ್ನು ಹಿಂದಡಿ ಇಡುವಂತೆ ಮಾಡುತ್ತಿರುವುದು, ಭೌದ್ಧಿಕ ಆಸ್ತಿಹಕ್ಕಲ್ಲ...ಮಾಂತ್ರಿಕವಾದ ರೀತಿಯಲ್ಲಿ ಸುರಕ್ಷಿತವಾದ ಲಸಿಕೆ ತಯಾರು ಮಾಡಲು ಕೆಲವು ನಿಯಂತ್ರಣ ಕ್ರಮಗಳನ್ನು ಹೊಂದಿರಲೇಬೇಕು" ಎಂದಿದ್ದಾರೆ. ಇನ್ನೂ ಮುಂದುವರಿದು ಆತ 'ಜಗತ್ತಿನಲ್ಲಿ ಬೇಕಾದಷ್ಟು ಲಸಿಕೆ ಕಾರ್ಖಾನೆಗಳಿವೆ. ಆದರೆ ಲಸಿಕೆಗಳ ಸುರಕ್ಷತೆಯ ಬಗ್ಗೆ ಜನರು ತುಂಬಾ ಗಂಭೀರವಾಗಿ ಇದ್ದಾರೆ. ಜಾನ್ಸನ್ ಮತ್ತು ಜಾನ್ಸನ್ ಕಂಪನಿಯಿಂದ ಭಾರತದ ಯಾವುದೋ ಕಂಪನಿಗೆ ನಮ್ಮ ಲಸಿಕೆಯನ್ನು ಸುಕಾ ಸುಮ್ಮನೆ ವರ್ಗಾಯಿಸಲಾಗದು, ಏಕೆಂದರೆ ಲಸಿಕೆ ತುಂಬಾ ಅಮೂಲ್ಯವಾದುದು. ಇದು ಸಾಧ್ಯವಾಗಿರಿವುದು ನಮ್ಮ ಅನುದಾನ ಮತ್ತು ನೈಪುಣ್ಯತೆಯಿಂದ ಮಾತ್ರ' ಎಂದು ಬಿಲ್ ಗೇಟ್ಸ್ ಹಮ್ಮಿನ ನಗೆ ಬೀರಿದ್ದಾರೆ. ಬಿಳಿ ತೊಗಲ ಈ ವ್ಯಾಪಾರಿಗಳು ಯಾವಾಗಲೂ 'ಹೆಣ ಮಲಗಿಸಿಕೊಂಡು ಹಣ ಮಾಡಿಕೊಂಡಿದ್ದಾರೆ.'

ಲಸಿಕೆ ಪೇಟೆಂಟ್ – ಜಿ7 ನಾಟಕ

ಬಿಲ್ ಗೇಟ್ಸ್ ಇಂತಹ ಮಾತುಗಳನ್ನು ಆಡುವ ಮೂಲಕ, ಅಮೆರಿಕಾ ಮತ್ತು ಯೂರೋಪಿನ ಉತ್ಪನ್ನಗಳೇ ಶ್ರೇಷ್ಠವೆಂದು ವ್ಯಸನ ವ್ಯಕ್ತಪಡಿಸಿದ್ದಾರೆ. ಭಾರತವೂ ಸೇರಿದಂತೆ ಮೂರನೇ ಜಗತ್ತಿನ ದೇಶಗಳ ಸಂಶೋಧನೆ ಹಾಗೂ ಉತ್ಪಾದನೆಯನ್ನು ಕಳಪೆ ಎಂದು ಹೀಗಳೆದಿದ್ದಾರೆ.

ಇತ್ತೀಚೆಗೆ ವಿಶ್ವದ ಶ್ರೀಮಂತ ದೇಶಗಳಾದ ಅಮೆರಿಕ, ಇಟಲಿ, ಇಂಗ್ಲೆಂಡ್, ಜಪಾನ್, ಫ್ರಾನ್ಸ್, ಜರ್ಮನಿ ಮತ್ತು ಕೆನಡಾ ದೇಶಗಳ ಗುಂಪು ಜಿ–7 ಲಂಡನ್ನಿನಲ್ಲಿ ಸಭೆ ಸೇರಿತ್ತು. ಆ ಸಭೆಯಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ 100 ಕೋಟಿ ಡೋಸ್ ಕೋವಿಡ್ ಲಸಿಕೆಯನ್ನು ದಾನ ನೀಡುವುದಾಗಿ ಈ ದೇಶಗಳು ಘೋಷಣೆ ಮಾಡಿದವು. ಆ ಪೈಕಿ ಅಮೆರಿಕಾ 50 ಕೋಟಿ ಡೋಸ್, ಬ್ರಿಟನ್ 10 ಕೋಟಿ ಡೋಸ್ ಮತ್ತು ಬೇರೆ ದೇಶಗಳು ಉಳಿದ ಲಸಿಕೆ ದಾನ ಮಾಡುವುದಾಗಿ ಹೇಳಿದವು.

100 ಕೋಟಿ ಡೋಸ್‌ಗಳು ಎಂಬುದು ದೊಡ್ಡ

ಪುಟ 15 ಕ್ಕೆ





ಕೃಪೆ: ಪಿ. ಮಹಮ್ಮದ್, ವಾ.ಭಾ.

ತೈಲ ಉತ್ಪನ್ನಗಳ ಹಿಂದೆಂದು ಕಂಡರಿಯದ ಪ್ರಮಾಣದ ಬೆಲೆ ಹೆಚ್ಚಳವನ್ನು ಸಮರ್ಥಿಸಿಕೊಳ್ಳಲು, ಕೇಸರಿ ಪಡೆಗಳಿಂದ ಹಲವು ವಾದಗಳನ್ನು ಮಂಡಿಸಲಾಗುತ್ತಿದೆ. ತೈಲ ಉತ್ಪನ್ನಗಳ ದರವು ಜಾಗತಿಕ ಮಾರುಕಟ್ಟೆ ಶಕ್ತಿಗಳ ಮೇಲೆ ನಿರ್ಧರಿತವಾಗುತ್ತದೆ ಮತ್ತು ಸರ್ಕಾರಗಳ ಪಾತ್ರ ಇದರಲ್ಲಿ ಏನೂ ಇರುವುದಿಲ್ಲ, ಎಂಬುದು ಒಂದು ವಾದ. NDA ಸರ್ಕಾರವು ರೂ. 2 ಲಕ್ಷ ಮೌಲ್ಯದ ತೈಲ ಬಾಂಡುಗಳನ್ನು ಅತಿ ಹೆಚ್ಚು ಪ್ರಮಾಣದ ಬಡ್ಡಿ ದರದೊಂದಿಗೆ ಮರುಪಾವತಿ ಮಾಡಿದೆ ಮತ್ತು ಹೀಗಾಗಿ ತೈಲ ಉತ್ಪನ್ನಗಳ ಮೇಲೆ ವಿಧಿಸಿರುವ ಹೆಚ್ಚಾದ ತೆರಿಗೆಯು UPA ಸರ್ಕಾರದ ಕೊಡುಗೆ, ಇನ್ನೊಂದು ವಾದ. ಜೈವಿಕ ಇಂಧನಗಳಾದ ಪೆಟ್ರೋಲ್ ಮತ್ತು ಡೀಸೆಲ್ ಬಳಕೆಯಿಂದ ಕಾರ್ಬನ್ ಪ್ರಮಾಣ ಹೆಚ್ಚಿ ಜಾಗತಿಕ ತಾಪಮಾನ ಹೆಚ್ಚುತ್ತದೆ. ಹೀಗಾಗಿ ಹವಾಮಾನ ಬದಲಾವಣೆಯನ್ನು ತಡೆಯುವ ಹೋರಾಟವನ್ನು ಬಲಪಡಿಸಲು ಇಂಧನ ದರವನ್ನು ಹೆಚ್ಚಿಸುವ ಮೂಲಕ ಇದರ ಬಳಕೆಯನ್ನು ಕಡಿಮೆ ಮಾಡಿದಂತಾಗುತ್ತದೆ, ಎಂಬುದು ಮತ್ತೊಂದು ವಾದ. ಈ ಮೂರು ವಾದಗಳಲ್ಲಿರುವ ತರ್ಕದ ಹುಳುಕನ್ನು, ಪೊಳ್ಳನ್ನು ಅಂಕಿಅಂಶಗಳ ಸಮೇತ ಈ ಲೇಖನದಲ್ಲಿ ಬಯಲುಪಡಿಸಲಾಗಿದೆ.

ತೈಲ ಉತ್ಪನ್ನಗಳ ಬೆಲೆ ಹೆಚ್ಚಳದ ರಾಜಕೀಯ ಅರ್ಥಶಾಸ್ತ್ರ

ಕೆ. ನಾಗೇಶ್ವರ್ (ಅನುವಾದ: ಶೃ.ಶಂ.ನಾ.)

ತೈಲ ಉತ್ಪನ್ನಗಳ ಹಿಂದೆಂದು ಕಂಡರಿಯದ ಪ್ರಮಾಣದ ಬೆಲೆ ಹೆಚ್ಚಳವು ಸರ್ಕಾರಗಳು ಜನಾನುರಾಗವನ್ನು ಕಳೆದುಕೊಳ್ಳುವಂತೆ ಮಾಡಬಹುದು. ಹಾಗಾಗಿ ಸಮರ್ಥನೆ ಮಾಡಿಕೊಳ್ಳಲಾಗದ್ದನ್ನು ಸಮರ್ಥಿಸಿಕೊಳ್ಳಲು ಹಲವು ವಾದಗಳನ್ನು ಮಂಡಿಸಲಾಗುತ್ತಿದೆ. ತೈಲ ಉತ್ಪನ್ನಗಳ ದರವು ಜಾಗತಿಕ ಮಾರುಕಟ್ಟೆ ಶಕ್ತಿಗಳ ಮೇಲೆ ನಿರ್ಧರಿತವಾಗುತ್ತದೆ ಮತ್ತು ಸರ್ಕಾರಗಳ ಪಾತ್ರ ಇದರಲ್ಲಿ ಏನೂ ಇರುವುದಿಲ್ಲ ಎಂಬ ವಾದವನ್ನು ಹೆಚ್ಚಾಗಿ ತೈಲ ಬೆಲೆ ಏರಿಕೆ ಸಮರ್ಥನೆಗೆ ಬಳಸಲಾಗುತ್ತಿದೆ.

NDA ಸರ್ಕಾರದ ಮೊದಲ ಅವಧಿಯಲ್ಲಿ 2002 ರಲ್ಲಿ ಆಡಳಿತಾತ್ಮಕ ಬೆಲೆ ನಿಗದಿ ವ್ಯವಸ್ಥೆ (APM) ಯನ್ನು ಕಳಚಿಹಾಕಲಾಗಿತ್ತು. ಪೆಟ್ರೋಲ್ ಮತ್ತು ಡೀಸೆಲ್ ದರಗಳನ್ನು ಅನುಕ್ರಮವಾಗಿ 2010 ಮತ್ತು 2014 ರಲ್ಲಿ ನಿಬಂಧನೆ–ಮುಕ್ತ ಮಾಡಲಾಗಿತ್ತು. ಆದರೆ ಐದು ರಾಜ್ಯಗಳ ಚುನಾವಣೆ ಪ್ರಚಾರಾವಧಿಯಲ್ಲಿ ಸ್ಥಿರವಾಗಿದ್ದ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳು ಮೇ 2, 2021 ರಂದು ಚುನಾವಣಾ ಫಲಿತಾಂಶಗಳು ಘೋಷಿಸಲ್ಪಟ್ಟ ತಕ್ಷಣದಿಂದಲೇ ಹೆಚ್ಚಾಗಲು ಶುರುವಾಯಿತು. ಈಗಾಗಲೇ ಏರುತ್ತಿರುವ ಒಟ್ಟಾರೆ ಹಣದುಬ್ಬರದ ಮೇಲೆ ತೀವ್ರ ಪರಿಣಾಮ ಬೀರಬಹುದಾದ ತೈಲ ಬೆಲೆಗಳನ್ನು ನಿಯಂತ್ರಿಸುವಲ್ಲಿ, ಸರ್ಕಾರವು ಪಾತ್ರ ನಿರ್ವಹಿಸುವ ಸಾಧ್ಯತೆಯನ್ನು ಇದು ತೋರಿಸುತ್ತಿದೆ.

ಜಾಗತಿಕ ಮಾರುಕಟ್ಟೆಯ ಕಚ್ಚಾ ತೈಲದ ಬೆಲೆಗಳು ಮತ್ತು ನಮ್ಮ ದೇಶದ ಆಂತರಿಕ ಮಾರುಕಟ್ಟೆಯ ಪೆಟ್ರೋಲ್ ಮತ್ತು ಡೀಸೆಲ್ ನ ಸಗಟು ಬೆಲೆಗಳನ್ನು ಹೋಲಿಕೆ ಮಾಡಿದರೆ, ಈ ವಾದ ಎಂತಹ ತರ್ಕದೋಷವುಳ್ಳದ್ದು ಎಂದು ತಿಳಿಯುತ್ತದೆ. ಈ ವರ್ಷದ ಆದಿಯಿಂದ ಜಾಗತಿಕ ಕಚ್ಚಾ ತೈಲಗಳ ಬೆಲೆ ಹೆಚ್ಚುತ್ತಿದೆ ಎನ್ನುವುದು ಸತ್ಯ. ವರ್ಷದ ಆರಂಭದಲ್ಲಿ ಪ್ರತಿ ಬ್ಯಾರೆಲ್‌ಗೆ 52 ಡಾಲರ್ ಇದ್ದ ಕಚ್ಚಾ ತೈಲದ ಬೆಲೆ ಇತ್ತೀಚಿನ ದಿನಗಳಲ್ಲಿ ಸರಾಸರಿ ಪ್ರಮಾಣದಲ್ಲಿ 71 ಡಾಲರ್ ತಲುಪಿದೆ. ಆದರೆ ಜೂನ್ 2013 ರಲ್ಲಿ ಜಾಗತಿಕ ಕಚ್ಚಾ ತೈಲದ ಬೆಲೆ ಪ್ರತಿ ಬ್ಯಾರೆಲ್‌ಗೆ 101 ಡಾಲರ್ ಇದ್ದಾಗ, ಡಾಲರ್ ಮತ್ತು ರೂಪಾಯಿ ವಿನಿಮಯ ಮೌಲ್ಯದಲ್ಲಿ ಆಗುವ ಏರಿಳಿತಗಳನ್ನೂ ತೆಗೆದುಕೊಂಡರೂ, ಆಗ ಆಂತರಿಕ ಮಾರುಕಟ್ಟೆಯ ಪೆಟ್ರೋಲ್ ದರ ಪ್ರತಿ ಲೀಟರ್ ಗೆ ರೂ. 63 ಮತ್ತು ರೂ. 77 ಇತ್ತು. ಆಂತರಿಕ ಸಗಟು ಮಾರುಕಟ್ಟೆಯಲ್ಲಿ ಇಂದು ಪೆಟ್ರೋಲ್ ದರ 2013 ರ ದರಕ್ಕಿಂತ ಶೇ. 30 ಪ್ರಮಾಣದ ಹೆಚ್ಚಳ ಕಂಡಿದೆ. ಆದರೆ ಈಗ ಜಾಗತಿಕ ಕಚ್ಚಾ ತೈಲ ಬೆಲೆ 2013ರ ಬೆಲೆಗಿಂತ ಶೇ. 30 ರಷ್ಟು ಕಡಿಮೆಯಾಗಿದೆ.

ಅಕ್ಟೋಬರ್ 2018 ರಲ್ಲಿ ಜಾಗತಿಕ ಕಚ್ಚಾ ತೈಲದ ಬೆಲೆ ಪ್ರತಿ ಬ್ಯಾರೆಲ್ ಗೆ ಸುಮಾರು 80 ಡಾಲರ್ ಇದ್ದಾಗ, ಆಂತರಿಕ ಮಾರುಕಟ್ಟೆಯಲ್ಲಿ ಪ್ರತಿ ಲೀಟರ್ ಗೆ ಡೀಸೆಲ್ ದರ ಸುಮಾರು ರೂ. 76 ಇತ್ತು. ಈಗ ಜಾಗತಿಕ ಮಾರುಕಟ್ಟೆಯ ಕಚ್ಚಾ ತೈಲ ಬೆಲೆ 2018 ರಲ್ಲಿ ಇದ್ದುದಕ್ಕಿಂತ ಕಡಿಮೆಯಾಗಿದ್ದರೂ, ಡೀಸೆಲ್ ದರ ವಿಪರೀತ ಏರಿದೆ.

ತೈಲ ಬಾಂಡ್ ನ ತರ್ಕದೋಷ

NDA ಸರ್ಕಾರವು ರೂ. 2 ಲಕ್ಷ ಮೌಲ್ಯದ ತೈಲ ಬಾಂಡುಗಳನ್ನು ಅತಿ ಹೆಚ್ಚು ಪ್ರಮಾಣದ ಬಡ್ಡಿ ದರದೊಂದಿಗೆ ಮರುಪಾವತಿ ಮಾಡಿದೆ ಮತ್ತು ಹೀಗಾಗಿ ತೈಲ ಉತ್ಪನ್ನಗಳ ಮೇಲೆ ವಿಧಿಸಿರುವ ಹೆಚ್ಚಾದ ತೆರಿಗೆಯು UPA ಸರ್ಕಾರದ ಕೊಡುಗೆ ಎಂದು ಬಿಜೆಪಿ ನಾಯಕತ್ವ ಹೇಳುತ್ತಿರುತ್ತದೆ.

ಆದರೆ ಇದಕ್ಕೆ ಪೂರಕವಾದ ಸಾಕ್ಷ್ಯಾಧಾರ ದಾಖಲೆಗಳನ್ನು ಆಳುವ ಪ್ರಭುತ್ವ ಉಲ್ಲೇಖಿಸುತ್ತಿಲ್ಲ. ಆದರೆ ಬಜೆಟ್ ದಾಖಲೆಗಳನ್ನು ಪರಿಶೀಲಿಸಿದಾಗ, ಅದು ನೀಡುವ ಚಿತ್ರಣವೇ ಬೇರೆ ಇದೆ. ರಾಜ್ಯಸಭೆಯಲ್ಲಿ ಈ ಕುರಿತು ಕೇಳಲಾದ ಪ್ರಶ್ನೆಗೆ ಕೇಂದ್ರ ಸರ್ಕಾರವು ನೀಡಿದ ಉತ್ತರ ಸರ್ಕಾರದ ಹೇಳಿಕೆಯ ಪೊಳ್ಳುತನವನ್ನು ಬಯಲಿಗೆಳೆದಿದೆ. ಡಿಸೆಂಬರ್ 12, 2018 ರಂದು ಅಹಮದ್ ಪಟೇಲ್ ರವರ (unstarred) ಪ್ರಶ್ನೆ ಸಂಖ್ಯೆ 296 ಕ್ಕೆ ಕೇಂದ್ರ ತೈಲ ಮತ್ತು ನೈಸರ್ಗಿಕ ಅನಿಲ ಮಂತ್ರಿಗಳು ಈ ಕೆಳಕಂಡಂತೆ ಉತ್ತರಿಸಿದ್ದಾರೆ.

“ಮಾರ್ಚ್ 2015 ರಲ್ಲಿ, ಅಂದರೆ ದಾವೆ ದಿನಾಂಕದಂದು, ರೂ. 3500 ಕೋಟಿ ನಾಮಿನಲ್ ಮೌಲ್ಯದ ವಿಶೇಷ ಸೆಕ್ಯುರಿಟೀಸ್‌ಗಳನ್ನು ಪಾವತಿಸಲಾಗಿದೆ. 2015–16ರಿಂದ 2017–18ವರೆಗಿನ ಅವಧಿಯಲ್ಲಿ ಒಟ್ಟುಗೂಡಿಸಿದ ವಾರ್ಷಿಕ ಮೊತ್ತವಾದ ರೂ. 9989.96 ಕೋಟಿಗಳನ್ನು ಪ್ರತಿ ವರ್ಷ ಪಾವತಿಸಲಾಗಿದೆ. ಮತ್ತು ಪ್ರಸಕ್ತ ಹಣಕಾಸು ವರ್ಷದಲ್ಲಿಯೂ ಈ ಪ್ರಮಾಣದ ಮೊತ್ತವನ್ನು ಪಾವತಿಸಬೇಕಾಗಿದೆ.”

ಸುದ್ದಿಗಳ ವಾಸ್ತವಿಕತೆಯನ್ನು ತನಿಖೆ ಮಾಡುವ “factly” ಜಾಲತಾಣವು ನೀಡಿರುವ ಕೆಳಕಾಣಿಸಿದ ಅಂಶಗಳು ಇನ್ನಷ್ಟು ವಿವರ ಹೊರ ಹಾಕಿದೆ.

“2014–15ರ ಬಜೆಟ್‌ನ ಸ್ವೀಕೃತಿಗಳ ಭಾಗದ “ನಗದು ಸಬ್ಸಿಡಿ ಬದಲಾಗಿ ತೈಲ ಮಾರುಕಟ್ಟೆ ಕಂಪನಿಗಳಿಗೆ ನೀಡಿರುವ ವಿಶೇಷ ಸೆಕ್ಯುರಿಟೀಸ್‌ಗಳು” ಎಂಬ ತಲೆಬರಹದ ಅನುಬಂಧ 6E ಪ್ರಕಾರ, 2013–14 ರ ಅಂತ್ಯಕ್ಕೆ ಬಾಕಿ ಇರುವ ತೈಲ ಬಾಂಡ್‌ಗಳ ಒಟ್ಟು ಮೌಲ್ಯ ರೂ. 1,34,423 ಕೋಟಿ. ಇದು NDA ಸರ್ಕಾರವು ಅಧಿಕಾರಕ್ಕೆ ಬಂದ ಅವಧಿ... 2014–19 ರ ಅವಧಿಯಲ್ಲಿ (ಮೋದಿ ಸರ್ಕಾರದ ಅವಧಿ) ಪಾವತಿಸಬೇಕಿದ್ದ ಬಾಂಡ್‌ಗಳು, 2015 ರಲ್ಲಿ ಮೆಚ್ಯುರಿಟಿಗೊಂಡ ಬಾಂಡ್‌ಗಳು ಮಾತ್ರ ಮತ್ತು ಇದರ ಒಟ್ಟು ಮೌಲ್ಯ ರೂ. 3500 ಕೋಟಿ. 2019–20 ರ ಬಜೆಟ್‌ನ ಸ್ವೀಕೃತಿಗಳ ಭಾಗದ 2E ಪ್ರಕಾರ, 2018–19ರ ಅಂತ್ಯಕ್ಕೆ ತೀರಿಸಲು ಬಾಕಿ ಇರುವ ಒಟ್ಟು ಮೌಲ್ಯ ರೂ. 1,30,923 ಕೋಟಿಯಷ್ಟಿದೆ.”

ಕೇಂದ್ರ ವಿತ್ತ ಸಚಿವಾಲಯದ ವೆಚ್ಚ ಬಜೆಟ್‌ನ ‘ಅನುದಾನಕ್ಕೆ ಬೇಡಿಕೆ’ (ಡಿಮ್ಯಾಂಡ್ ಫಾರ್ ಗ್ರಾಂಟ್ಸ್)ನ ‘ಬಡ್ಡಿ ಪಾವತಿ’ ತಲೆಬರಹದ ದಸ್ತಾವೇಜಿನ ಪ್ರಕಾರ, 2009–10ರಿಂದ 2013–14 ವರೆಗಿನ ಐದು ವರ್ಷಗಳಲ್ಲಿ UPA-2 ಸರ್ಕಾರವು ತೈಲ ಬಾಂಡ್‌ಗಳ ಮೇಲಿನ ಬಡ್ಡಿಯಾಗಿ ರೂ. 53,163 ಕೋಟಿ ಪಾವತಿಸಿತ್ತು. ಇನ್ನೊಂದೆಡೆ, ಈಗಿನ NDA ಸರ್ಕಾರವು 2014–15ರಿಂದ 2018–19ವರೆಗಿನ ಐದು ವರ್ಷಗಳಲ್ಲಿ ಪಾವತಿಸಿರುವ ಬಡ್ಡಿಯು ರೂ. 50,216 ಕೋಟಿ. ಹೀಗಾಗಿ, ತೈಲ ಬಾಂಡ್‌ಗಳ ಮರುಪಾವತಿಯಲ್ಲಾಗಲಿ ಅಥವಾ ಇದರ ಮೇಲಿನ ಬಡ್ಡಿಯಲ್ಲಾಗಲೀ ಈಗಿನ NDA ಸರ್ಕಾರವು ಅಸಹಜವಾದ ಮೊತ್ತವನ್ನೇನೂ ಪಾವತಿಸಿಲ್ಲ. ಬಿಜೆಪಿ ನಾಯಕತ್ವ ಹೇಳುವ ರೂ. 2 ಲಕ್ಷ ಕೋಟಿ ಮೊತ್ತ ಎಲ್ಲಿಂದ ಬಂತು?

‘ಬಿಸಿನೆಸ್ ಲೈನ್’ ನಲ್ಲಿ ಬಂದ ವರದಿಯೂ ಮೋದಿ ಸರ್ಕಾರವು ತನ್ನ ಎರಡನೇ ಅಧಿಕಾರದ ಅವಧಿಯಲ್ಲಿಯೂ ಸಹ UPA ಸರ್ಕಾರದ ತೈಲ ಬಾಂಡ್‌ಗಳ redemption ಗಾಗಿ ನೀಡುವ ಮೊತ್ತ ಕೇವಲ ರೂ. 41,150 ಕೋಟಿ ಎಂದು ಹೇಳಿದೆ. ಹೀಗಾಗಿ ಜನವಿರೋಧಿ ತೈಲ ದರ ಏರಿಕೆಯನ್ನು ಸಮರ್ಥಿಸಿಕೊಳ್ಳಲು ಹತಾಶವಾಗಿರುವ ಕೇಸರಿ ಪಡೆಯು ರೂ. 2 ಲಕ್ಷ ಕೋಟಿಯ ಮಾತನ್ನಾಡುತ್ತಿದೆ.

ಅಗಾಧ ತೆರಿಗೆ ಹೊರೆ

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಗಾಧ ತೆರಿಗೆಯನ್ನು ವಿಧಿಸುತ್ತಿರುವುದರಿಂದ ತೈಲ ಉತ್ಪನ್ನಗಳ ದರ ವಿಪರೀತವಾಗಿ ಹೆಚ್ಚುತ್ತಿದೆ. ಗ್ರಾಹಕರು ಸಗಟು ಮಾರುಕಟ್ಟೆಯಲ್ಲಿ ನೀಡುವ ದರದಲ್ಲಿ ಶೇ. 60 ಕ್ಕೂ ಹೆಚ್ಚು ಭಾಗ ತೆರಿಗೆಯೇ ಆಗಿದೆ. ಕೇಂದ್ರ ಸರ್ಕಾರವು ರಾಜ್ಯಗಳೊಂದಿಗೆ ಹಂಚಿಕೊಳ್ಳಬೇಕಾಗಿಲ್ಲದ ಹಲವು ವಿಧವಾದ ಸುಂಕ(ಸೆಸ್)ಗಳನ್ನು ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ವಿಧಿಸುತ್ತಲೇ ಇದೆ. ತೈಲ ಉತ್ಪನ್ನಗಳ ಮೇಲೆ ಸಂಗ್ರಹಿಸುವ ತೆರಿಗೆ ಮತ್ತು ಸುಂಕ ಸಂಗ್ರಹದಲ್ಲಿ ಕೇಂದ್ರವು ಸಿಂಹಪಾಲು ಪಡೆಯುತ್ತಿದೆ. ಹೀಗಾಗಿ ಸರ್ಕಾರಗಳಿಗೆ ಪೆಟ್ರೋಲ್ ಮತ್ತು ಡೀಸೆಲ್ ಒಂದು ಪ್ರಮುಖ ಆದಾಯ ಮೂಲವಾಗಿವೆ. ಈ ಉತ್ಪನ್ನಗಳ ಬಳಕೆಯು ಇದರ ಬೆಲೆಗೆ ಸಂಬಂಧವಿಲ್ಲದ ರೀತಿಯಲ್ಲಿ ಇರುವುದರಿಂದ ಈ ಪ್ರಕ್ರಿಯೆ ಹೀಗೆಯೇ ಮುಂದುವರೆಯುತ್ತದೆ.



ಕೃಪೆ: ಸತೀಶ್ ಆಚಾರ್ಯ

ಸ್ವೀಕೃತಿ ಬಜೆಟ್ 2021 ರ ಪ್ರಕಾರ 2020–21 ನೇ ಸಾಲಿಗೆ ಕೇಂದ್ರ ಅಬಕಾರಿ ಸಂಗ್ರಹವು ಬಜೆಟ್ ಅಂದಾಜು ಮೊತ್ತವಾದ ರೂ. 2.67 ಲಕ್ಷ ಕೋಟಿಯಿಂದ, ಪರಿಷ್ಕೃತ ಅದಾಜಿನಲ್ಲಿ ರೂ. 3.61 ಲಕ್ಷ ಕೋಟಿಗೆ ಹೆಚ್ಚಿದೆ. ಅಂದರೆ ಬಜೆಟ್ ಅಂದಾಜಿಗಿಂತಲೂ 94 ಸಾವಿರ ಕೋಟಿ ರೂ. ಹೆಚ್ಚು ಆದಾಯ ಪಡೆದಿದೆ. 2021–22 ನೇ ಸಾಲಿಗೆ ಬಜೆಟ್ ಮಾಡಿರುವಂಥ ಇಂಧನ ತೆರಿಗೆಯು ರೂ. 3.2 ಲಕ್ಷ ಕೋಟಿಯಷ್ಟಿದೆ. ಹೀಗೆ ಸರ್ಕಾರವು ಇಳಿಕೆಯಾಗಿರುವ ಜಾಗತಿಕ ಕಚ್ಚಾ ತೈಲ ಬೆಲೆಯನ್ನು ಬಳಸಿಕೊಂಡು ಅಪಾರ ಆದಾಯ ಸಂಗ್ರಹಿಸಿದೆ. ಹೀಗಾಗಿ, ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆಗಳು ಗಣನೀಯವಾಗಿ ಕುಸಿದರೂ ಗ್ರಾಹಕರಿಗೆ ಇದರಿಂದ ಅನುಕೂಲವಾಗುತ್ತಿಲ್ಲ. ಆದರೆ ಹೆಚ್ಚಳವಾದ ಜಾಗತಿಕ ಕಚ್ಚಾ ತೈಲ ಬೆಲೆಯ ಹೊರೆಯನ್ನು ಗ್ರಾಹಕರ ಮೇಲೆ ಹಾಕಲಾಗುತ್ತಿದೆ.

ಹವಾಮಾನ ಬದಲಾವಣೆಯ ವಾದ

ಹವಾಮಾನ ಬದಲಾವಣೆಯನ್ನು ತಡೆಗಟ್ಟುವ ಅಗತ್ಯತೆಯನ್ನು ಇಂಧನ ಬೆಲೆಗಳ ಚರ್ಚೆಯಲ್ಲಿ ಜೋಡಿಸಲಾಗುತ್ತಿದೆ. ಜೈವಿಕ ಇಂಧನಗಳಾದ ಪೆಟ್ರೋಲ್ ಮತ್ತು ಡೀಸೆಲ್ ಬಳಕೆಯಿಂದ ಕಾರ್ಬನ್ ಪ್ರಮಾಣ ಹೆಚ್ಚಿ ಜಾಗತಿಕ ತಾಪಮಾನ ಹೆಚ್ಚುತ್ತದೆ. ಹೀಗಾಗಿ ಹವಾಮಾನ ಬದಲಾವಣೆಯನ್ನು ತಡೆಯುವ ಹೋರಾಟವನ್ನು ಬಲಪಡಿಸಲು ಇಂಧನ ದರವನ್ನು ಹೆಚ್ಚಿಸುವ ಮೂಲಕ ಇದರ ಬಳಕೆಯನ್ನು ಕಡಿಮೆ ಮಾಡಿದಂತಾಗುತ್ತದೆ ಎಂದು ಹೇಳುವ ಮೂಲಕ ಸಮರ್ಥಿಸಿಕೊಳ್ಳಲಾಗುತ್ತಿದೆ. ಆದರೆ ವಸ್ತುಸ್ಥಿತಿಯ ಅಂಕಿಅಂಶಗಳು ಬೇರೆ ಕತೆ ಹೇಳುತ್ತವೆ.

ಭಾರತ 2019–20 ರ ಮಾರ್ಚ್ 31 ಕ್ಕೆ ಕೊನೆಯಾಗುವ ನಾಲ್ಕನೇ ತ್ರೈಮಾಸಿಕದಲ್ಲಿ 71.2 ಲಕ್ಷ (ಮೆಟ್ರಿಕ್) ಟನ್ ಇಂಧನ ಬಳಕೆ ಮಾಡಿತ್ತು ಮತ್ತು ಮಾರ್ಚ್ 2021 ರ ಕೊನೆ ತ್ರೈಮಾಸಿಕದಲ್ಲಿ 78 ಲಕ್ಷ ಟನ್ ಇಂಧನದ (ಅಂದರೆ ಶೇ. 9.7 ರಷ್ಟು ಹೆಚ್ಚು) ಬಳಕೆ ಮಾಡಿತ್ತು ಎಂದು ICICI ಸೆಕ್ಯುರಿಟೀಸ್ ಸಂಶೋಧನೆ ತಿಳಿಸುತ್ತಿದೆ. ಡೀಸೆಲ್ ಬಳಕೆಯೂ ಸಹ ಶೇ. 4.1 ರಷ್ಟು ಹೆಚ್ಚಿದ್ದು, ಜನವರಿ–ಮಾರ್ಚ್ 2021 ರ ಅವಧಿಯಲ್ಲಿ 206 ಲಕ್ಷ ಟನ್ ಬಳಕೆ ಆಗಿದೆ. ದರವು ದಾಖಲೆ ಹೆಚ್ಚಳ ಕಂಡರೂ ಇಂಧನ ಬಳಕೆ ಹೆಚ್ಚಾಗಿರುವುದು ತಿಳಿಯುತ್ತಿದೆ. 2021–22 ರಲ್ಲಿ ಎಲ್ಲ ತೈಲ ಉತ್ಪನ್ನಗಳ ಒಟ್ಟಾರೆ ಬಳಕೆಯು ವರ್ಷದಿಂದ ವರ್ಷಕ್ಕೆ ಶೇ. 9.8 ರಷ್ಟು ಹೆಚ್ಚಿ ಸುಮಾರು 21.5 ಕೋಟಿ ಮೆಟ್ರಿಕ್ ಟನ್ ನಷ್ಟು ಬಳಕೆಯಾಗಬಹುದು ಎಂದು ತೈಲ ಯೋಜನೆ ಮತ್ತು ವಿಶ್ಲೇಷಣೆ ವಿಭಾಗದ ಮುನ್ಸೂಚನೆಗಳು ತಿಳಿಸುತ್ತಿವೆ.

ಆದ್ದರಿಂದ, ಸಾಂಪ್ರದಾಯಿಕವಲ್ಲದ ಇಂಧನ ಮೂಲಕ್ಕೆ ಉತ್ತೇಜನ ನೀಡುವುದು, ಪರಿಣಾಮಕಾರಿ ಸಾರ್ವಜನಿಕ ಸಾರಿಗೆ, ಸುಧಾರಿತ ರಸ್ತೆ ಸೌಕರ್ಯಗಳು, ವಿದ್ಯುತ್ ವಾಹನಗಳಿಗೆ ಉತ್ತೇಜನ ಇತ್ಯಾದಿ ಕ್ರಮಗಳು ಜೈವಿಕ ಇಂಧನದ ಬಳಕೆಯನ್ನು ಕಡಿಮೆ ಮಾಡಬಲ್ಲವು. ಇಂಧನ ದರದ ಹೆಚ್ಚಳವು ಈಗಾಗಲೇ ಅತಿ ಹೆಚ್ಚು ಹಣದುಬ್ಬರದಿಂದ ನಲುಗುತ್ತಿರುವ ಗ್ರಾಹಕರ ಮೇಲೆ ಇನ್ನಷ್ಟು ಹೆಚ್ಚುವರಿ ಹೊರೆ ಹಾಕಿದಂತಾಗುತ್ತದೆ, ಅಷ್ಟೇ.

ಸರ್ಕಾರಕ್ಕೆ ಸಂಪನ್ಮೂಲದ ಅಗತ್ಯವಿದೆ

ಕಲ್ಯಾಣ ರಾಜ್ಯದ ಸರ್ಕಾರಗಳು ತಮ್ಮ ವೆಚ್ಚಕ್ಕಾಗಿ ಸಂಪನ್ಮೂಲಗಳನ್ನು ಅಣಿನೆರೆಸಿಕೊಳ್ಳಬೇಕು ಎಂಬ ವಾದವನ್ನು ಅಧಿಕಾರದಲ್ಲಿರುವ ಕೆಲವು ವ್ಯಕ್ತಿಗಳು ಆಗಿಂದಾಗ್ಗೆ ವಾದ ಮಾಡುತ್ತಿರುತ್ತಾರೆ. ಸಾಂಕ್ರಾಮಿಕದಿಂದಾಗಿ ಆದಾಯವು ಕುಸಿಯುತ್ತಿರುವಾಗ ಮತ್ತು ವೆಚ್ಚ ಬಾಧ್ಯತೆಗಳು ಪುಟ 15 ಕ್ಕೆ

ಸಾಮ್ರಾಜ್ಯಶಾಹಿ-ಜಾಗತೀಕರಣದ ದಾಳಿಯಲ್ಲಿ ತೀವ್ರತೆ ಮತ್ತು ಕಾರ್ಮಿಕರ ಐಕ್ಯ ಪ್ರತಿರೋಧ 2001-2005



ವಿಶ್ವ ಬಂಡವಾಳಶಾಹಿ ಮತ್ತು ಅಂತರರಾಷ್ಟ್ರೀಯ ಹಣಕಾಸು ಬಂಡವಾಳವನ್ನು ರಕ್ಷಿಸಲು ವಿನ್ಯಾಸ ಗೊಳಸಲಾದ ಜಾಗತೀಕರಣವು ಏಷ್ಯನ್, ಆಫ್ರಿಕನ್ ಮತ್ತು ಲ್ಯಾಟಿನ್ ಅಮೆರಿಕನ್ ದೇಶಗಳಲ್ಲಿನ ಬಿಕ್ಕಟ್ಟನ್ನು ಅಧಿಕಗೊಳಸುವಲ್ಲಿ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳ ಆರ್ಥಿಕತೆಗೆ ಬೆದರಿಕೆ ಹಾಕುವಲ್ಲಿ ಇದು ಯಶಸ್ವಿಯಾಗಿದ್ದಾಗ, ದೇಶದೊಳಗೆ ಈ ಅವಧಿಯಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ನೇತೃತ್ವದ ಸರ್ಕಾರ, ಈ ಸಾಮ್ರಾಜ್ಯಶಾಹಿ ಅಧಿಪತಿಗಳ ಆಜ್ಞೆಗಳಗೆ ವಿಧೇಯರಾಗಿ ಅವರು ಹೇರುವ, ದುಡಿಯುವ ಜನಗಳನ್ನು ವಿಭಜಿಸುವ ಧೋರಣೆಗಳನ್ನೇ ಅಂಗೀಕರಿಸಿತು. ಆದ್ದರಿಂದ ಈ ಅವಧಿಯು ಸರ್ಕಾರಗಳ ನೀತಿಗಳ ವಿರುದ್ಧ ಸತತ ಭಾರಿ ಸಾರ್ವತ್ರಿಕ ಮುಷ್ಕರಗಳಗೆ ಸಾಕ್ಷಿಯಾಯಿತು.

ಮೂಲ ಲೇಖಕರು: **ಸುಕೋಮಲ್ ಸೇನ್** ಸಂಗ್ರಹ-ಅನುವಾದ:ಸಿ.ಆರ್.ಶಾನಭಾಗ

ವಾಸ್ತವವಾಗಿ, ನವ-ಉದಾರವಾದಿ ಜಾಗತೀಕರಣದ ನೀತಿಗಳು ವಿಶ್ವ ಬಂಡವಾಳಶಾಹಿಯ ಆಳವಾದ ಬಿಕ್ಕಟ್ಟಿನ ಫಲಿತಾಂಶವಾಗಿದೆ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ವೆಚ್ಚದಲ್ಲಿ ಮತ್ತು ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ರಾಷ್ಟ್ರಗಳ ಜನಸಾಮಾನ್ಯರ ವೆಚ್ಚದಲ್ಲಿ ವಿಶ್ವ ಬಂಡವಾಳಶಾಹಿ ಮತ್ತು ಅಂತರರಾಷ್ಟ್ರೀಯ ಹಣಕಾಸು ಬಂಡವಾಳವನ್ನು ರಕ್ಷಿಸಲು ವಿನ್ಯಾಸ ಗೊಳಿಸಲಾಗಿವೆ. ಜಾಗತೀಕರಣವು ಬಡತನವನ್ನು ಕಡಿಮೆ ಮಾಡುವಲ್ಲಿ ಯಶಸ್ವಿಯಾಗಲಿಲ್ಲ, ಇದಕ್ಕೆ ವಿರುದ್ಧವಾಗಿ, ಏಷ್ಯನ್, ಆಫ್ರಿಕನ್ ಮತ್ತು ಲ್ಯಾಟಿನ್ ಅಮೆರಿಕನ್ ದೇಶಗಳಲ್ಲಿನ ಬಿಕ್ಕಟ್ಟನ್ನು ಅಧಿಕಗೊಳಿಸುವಲ್ಲಿ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳ ಆರ್ಥಿಕತೆಗೆ ಬೆದರಿಕೆ ಹಾಕುವಲ್ಲಿ ಇದು ಯಶಸ್ವಿಯಾಗಿದೆ.

2003ರಲ್ಲಿ, ಅಭಿವೃದ್ಧಿ ಹೊಂದಿದ ರಾಷ್ಟ್ರಗಳು 68,400 ಮಿಲಿಯನ್ ಡಾಲರ್‌ಗಳನ್ನು ಅಭಿವೃದ್ಧಿಯಾಗದ ದೇಶಗಳಿಗೆ ತಮ್ಮ ಅಭಿವೃದ್ಧಿಯ ಅಧಿಕೃತ ನೆರವಿನಂತೆ ವರ್ಗಾಯಿಸಿದರೆ, ಮೂರನೇ ವಿಶ್ವದ ರಾಷ್ಟ್ರಗಳು ತಮ್ಮ ಸಾಲಗಳು ಮತ್ತು ಬಡ್ಡಿಗಳನ್ನು ಪಾವತಿಸುವ ಮೂಲಕ ಶ್ರೀಮಂತ ರಾಷ್ಟ್ರಗಳಿಗೆ 4,36,000 ಮಿಲಿಯನ್ ಡಾಲರ್‌ಗಳನ್ನು ನೀಡಿದವು,

ಜಗತ್ತಿನಲ್ಲಿ, ಶಾಲೆಗೆ ಹೋಗುವ ವಯಸ್ಸಿನ ಪ್ರತಿ ಐದು ಮಕ್ಕಳಲ್ಲಿ ಒಬ್ಬರು, ಅಂದರೆ ಸುಮಾರು 120 ದಶಲಕ್ಷ, ಶಾಲೆಗೆ ಹೋಗಿಲ್ಲ. ಇದು ಬಡ ರಾಷ್ಟ್ರಗಳು ಎದುರಿಸುತ್ತಿರುವ ಸಮಸ್ಯೆ ಮಾತ್ರವಲ್ಲ, 2004 ರ ಅವಧಿಯಲ್ಲಿ, 46 ದಶಲಕ್ಷ ಯು.ಎಸ್. ನಾಗರಿಕರು ಆರೋಗ್ಯ-ಆರೈಕೆಯ ಅವಕಾಶವನ್ನು ಹೊಂದುವ ಮೂಲಭೂತ ಹಕ್ಕಿನಿಂದ ವಂಚಿತರಾಗಿದ್ದರು.

ರಾಷ್ಟ್ರೀಯ ಪರಿಸ್ಥಿತಿ

ಈ ಅವಧಿಯಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ, ಈ ಸಾಮ್ರಾಜ್ಯಶಾಹಿ ಅಧಿಪತಿಗಳ ಆಜ್ಞೆಗಳಿಗೆ ವಿಧೇಯರಾಗಿ, ಸಾರ್ವಜನಿಕ ವಲಯದ ಕೈಗಾರಿಕೆಗಳು, ಸರ್ಕಾರಿ ಇಲಾಖೆಗಳ ಮತ್ತು ಲಾಭ ಗಳಿಸುವ ಸಾರ್ವಜನಿಕ ಸಂಸ್ಥೆಗಳು ಮತ್ತು ಕೇಂದ್ರ ಸರ್ಕಾರವು ಸ್ವತಃ 'ನವರತ್ನಗಳು' ಎಂದು ವೈಭವೀಕರಿಸಿದ ಅತ್ಯುತ್ತಮ ಸಾರ್ವಜನಿಕ ರಂಗದ ಘಟಕಗಳು, ಮತ್ತು ಆಯಕಟ್ಟಿನ ರಕ್ಷಣಾ ಕೈಗಾರಿಕೆಗಳ ಹತಾಶ ಖಾಸಗೀಕರಣವನ್ನು ಪ್ರಾರಂಭಿಸಿತು.

ದೇಶದ ಆದಾಯದಲ್ಲಿ ರಾಜ್ಯಗಳ ಸರಿಯಾದ ಪಾಲನ್ನು ತೀವ್ರವಾಗಿ ಕಡಿತಗೊಳಿಸಿ ರಾಜ್ಯಗಳನ್ನು ವಂಚಿತಗೊಳಿಸುವುದು, ಯೋಜನಾ ಬಜೆಟ್ ಅನ್ನು ತೀವ್ರವಾಗಿ ಕಡಿತಗೊಳಿಸುವುದು ಮತ್ತು ಯೋಜನೇತರ ಖರ್ಚು ಹೆಚ್ಚಳವಾಡಿದ್ದು, ದೇಶದ ರಾಜ್ಯ ಸರ್ಕಾರಗಳಿಗೆ ಆಡಳಿತವನ್ನು ನಡೆಸುವಲ್ಲಿ ಮಾತ್ರವಲ್ಲದೆ ಮತ್ತು ಜನರ ಕಲ್ಯಾಣ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವಲ್ಲಿ ಅಪಾರ ತೊಂದರೆಗಳನ್ನು ತಂದಿತು. ಕೇಂದ್ರ ಮತ್ತು ರಾಜ್ಯಗಳ ಸರ್ಕಾರಿ ನೌಕರರ ತುಟ್ಟಿ-ಭತ್ಯೆಯನ್ನು ಒಟ್ಟಾರೆಯಾಗಿ ಸ್ಥಗಿತಗೊಳಿಸಲು ಎನ್‌ಡಿಎ ಸರ್ಕಾರವು ಪ್ರಸ್ತಾಪ ಮಂಡಿಸಿತು. ಎನ್.ಡಿ.ಎ. ಸರ್ಕಾರ ನೇಮಿಸಿದ 2 ನೇ ರಾಷ್ಟ್ರೀಯ ಕಾರ್ಮಿಕ ಆಯೋಗದ ಕಾರ್ಮಿಕ-ವಿರೋಧಿ ಶಿಫಾರಸುಗಳು 20 ಜೂನ್ 2002 ರಂದು ಹೊರಬಂದವು.

ನಿರೀಕ್ಷೆಯಂತೆ,. ಎರಡನೆಯ ಕಾರ್ಮಿಕ ಆಯೋಗದ ವರದಿ ಕಾರ್ಮಿಕರ ಕಷ್ಟಪಟ್ಟು ಸಂಪಾದಿಸಿದ ಕಾರ್ಮಿಕ ಸಂಘಗಳ ಹಕ್ಕುಗಳನ್ನು ಕಸಿದುಕೊಳ್ಳಲು ಸರ್ಕಾರ ಮತ್ತು ಬಂಡವಾಳಶಾಹಿ ಮಾಲೀಕರಿಗೆ ಕಡಿವಾಣವಿಲ್ಲದ ಅಧಿಕಾರಗಳನ್ನು ಶಿಫಾರಸು ಮಾಡಿತು.

'ಹೊಸ ಕಾರ್ಯ-ಸಂಸ್ಕೃತಿ' (ನ್ಯೂ ವರ್ಕ್-ಕಲ್ಚರ್) ಹೆಸರಿನಲ್ಲಿ, ವರದಿಯು ಬಂಡವಾಳಶಾಹಿಗಳಿಗೆ 'ಮನಸ್ಸಿಗೆ ಬಂದಂತೆ ಕೂಲಿಗೆ ನೇಮಿಸಿಕೊಳ್ಳಲು ಮತ್ತು ವಜಾಮಾಡಲು ಅಸೀಮಿತ ಅಧಿಕಾರವನ್ನು ನೀಡಲು ಪ್ರಯತ್ನಿಸಿತು. ವರದಿಯು ನವ-ಉದಾರವಾದಿ ಜಾಗತೀಕರಣದ ಎಲ್ಲಾ ಹೊರೆಗಳನ್ನು ಕಾರ್ಮಿಕರ ಮೇಲೆ ಹೇರಿತು ಮತ್ತು ಕಾರ್ಮಿಕರ ಮತ್ತು ಸಮಾಜದ ಕುರಿತ ಎಲ್ಲಾ ಜವಾಬ್ದಾರಿಗಳಿಂದ ಪಾರಾಗಲು ಮಾಲೀಕರಿಗೆ ಅವಕಾಶ ಮಾಡಿಕೊಟ್ಟಿತು.

ಈ ಕಾರ್ಮಿಕ-ವಿರೋಧಿ ಪಿತೂರಿಗಳನ್ನು ಸೋಲಿಸಲು ಒಗ್ಗಟ್ಟಿನ ಹೋರಾಟವನ್ನು ಕಟ್ಟುವುದು ಅನಿವಾರ್ಯವೆಂದು ಭಾವಿಸಲಾಯಿತು. ಸೆಪ್ಟೆಂಬರ್ 28-29 ರಂದು ನಡೆದ ರಾಷ್ಟ್ರೀಯ ಕಾರ್ಮಿಕ ಸಮ್ಮೇಳನದಲ್ಲಿ ಈ ವಿಷಯವನ್ನು ಎತ್ತಲಾಯಿತು.

27 ಮೇ 2001 ರಂದು ಕೇಂದ್ರ ಮತ್ತು ರಾಜ್ಯ ನೌಕರರ ಜಂಟಿ ಸಮಾವೇಶ ಮತ್ತು 25 ಜುಲೈ 2001 ರಂದು ದೇಶವ್ಯಾಪಿ ಮುಷ್ಕರ ನಡೆದವು. .

ಅಂತೆಯೇ, ಪೂರ್ಣ ಸಿದ್ಧತೆಯ ನಂತರ ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರ ಐಕ್ಯ ಮುಷ್ಕರ 25 ಜುಲೈ 2001 ರಂದು ನಡೆಯಿತು. ಇದು ಒಂದು ಅನನ್ಯ ಯಶಸ್ಸು ಪಡೆಯಿತು. ಸುಮಾರು ಒಂಬತ್ತು ದಶಲಕ್ಷ ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರು ಮತ್ತು ಶಿಕ್ಷಕರು ಮುಷ್ಕರಕ್ಕೆ ಸೇರಿದರು. ಟೆಲಿಕಾಂ ವಿಭಾಗದ ಹೆಚ್ಚಿನ ಸಂಖ್ಯೆಯ ನೌಕರರು ಕಾರ್ಪೊರೇಟೀಕರಣ ಆಗಿದ್ದರೂ ಮುಷ್ಕರದಲ್ಲಿ ಪಾಲ್ಗೊಂಡರು.. ಮುಷ್ಕರದ ಮಹತ್ವ ಏನೆಂದರೆ, ಮುಷ್ಕರದಲ್ಲಿ ದಿನನಿತ್ಯದ ಆರ್ಥಿಕ ಬೇಡಿಕೆಗಳಿರಲಿಲ್ಲ ಮತ್ತು ಅದೇ ಸಮಯದಲ್ಲಿ ಸ್ವಾತಂತ್ರ್ಯೋತ್ತರ ಯುಗದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರು ಮತ್ತು ಶಿಕ್ಷಕರು ಜಂಟಿಯಾಗಿ ಭಾಗವಹಿಸಿದ್ದು. ಈ ಮುಷ್ಕರ ಖಂಡಿತವಾಗಿಯೂ ದೇಶದ ಟ್ರೇಡ್ ಯೂನಿಯನ್ ಆಂದೋಲನವನ್ನು ಒಗ್ಗಟ್ಟಿನಿಂದ ಮುನ್ನಡೆಯಲು ಪ್ರೇರೇಪಿಸಿತು.

ಕಾರ್ಮಿಕ-ವಿರೋಧಿ ಶಿಫಾರಸುಗಳಿಗೆ ಕಾರ್ಮಿಕ ಸಂಘಗಳ ಖಂಡನೆ

ನಂತರ 17 ಅಕ್ಟೋಬರ್ 2001 ರಂದು ದೆಹಲಿಯ ಹಿಂದಿ ಭವನ ಸಭಾಂಗಣದಲ್ಲಿ ನಡೆದ ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿಯ ಆಶ್ರಯದಲ್ಲಿ ನಡೆದ ರಾಷ್ಟ್ರೀಯ ಸಮಾವೇಶವು ಸರ್ಕಾರಕ್ಕೆ ಸಲ್ಲಿಸಿದ ಈ ಕೆಳಗಿನ ಕಾರ್ಮಿಕ ವಿರೋಧಿ ವರದಿಗಳನ್ನು ತೀವ್ರವಾಗಿ ಟೀಕಿಸಿತು:

- ಗೀತಾ ಕೃಷ್ಣನ್ ಸಮಿತಿಯು ಸರ್ಕಾರಿ ಇಲಾಖೆಗಳ ಸಂಖ್ಯೆ ಮತ್ತು ಗಾತ್ರದಲ್ಲಿ ತೀವ್ರ ಕಡಿತ ಮಾಡಲು ಮತ್ತು ಸರ್ಕಾರಿ ನೌಕರರನ್ನು ರಿಟ್ರೆಂಚಮಾಡಲು ಶಿಫಾರಸು ಮಾಡಿತ್ತು;
- ರಾಕೇಶ್ ಮೋಹನ್ ಸಮಿತಿಯು ರೈಲ್ವೆಯನ್ನು ಅದರ ಉತ್ಪಾದನಾ ಘಟಕಗಳು ಮತ್ತು ರೈಲ್ವೆಯ ಖಾಸಗೀಕರಣವನ್ನು ಒಳಗೊಂಡಂತೆ ದೊಡ್ಡ ಪ್ರಮಾಣದಲ್ಲಿ ಗಾತ್ರ-ಕಡಿತಗೊಳಿಸಲು ಶಿಫಾರಸು ಮಾಡಿತ್ತು.
- ಎಂ.ಎಸ್.ಅಹ್ಲುವಾಲಿಯಾ ಸಮಿತಿಯು ಭಾರತದ ಟ್ರೇಡ್ ಯೂನಿಯನ್ ಕಾಯ್ದೆ ಮತ್ತು ಕೈಗಾರಿಕಾ ವಿವಾದ ಕಾಯ್ದೆಯ ಪ್ರತಿಗಾಮಿ ತಿದ್ದುಪಡಿಗಳನ್ನು ಮತ್ತು ಹುದ್ದೆಗಳ ಸಂಪೂರ್ಣ ಹಂಗಾಮೀಕರಣ ಮತ್ತು ಖಾಸಗೀಕರಣದ ದುಡುಕಿನ ಶಿಫಾರಸು ಮಾಡಿತ್ತು.

ಆತಂಕಕಾರಿಯಾಗಿ, ಈ ಮೂರು ವರದಿಗಳು ಸರ್ಕಾರದ ಸಕ್ರಿಯ ಪರಿಗಣನೆಯಲ್ಲಿದ್ದವು ಮತ್ತು ಸರ್ಕಾರವು ಅದಾಗಲೇ ಕೆಲವು ಇಲಾಖೆಗಳನ್ನು ಕಡಿಮೆ ಮಾಡುವ ಮೂಲಕ ಮತ್ತು ಭಾರತದ ಟ್ರೇಡ್ ಯೂನಿಯನ್ ಕಾಯ್ದೆಗೆ ತಿದ್ದುಪಡಿ ಮಾಡುವ ಮೂಲಕ ಕೆಲವು ನಿರ್ಧಾರಗಳನ್ನು ತೆಗೆದುಕೊಂಡಿತ್ತು.

2002 ಏಪ್ರಿಲ್ 16 ರ ಅಖಿಲ ಭಾರತ ಸಾರ್ವತ್ರಿಕ ಮುಷ್ಕರವು ಯಶಸ್ವಿಯಾಗಿ ನಡೆಯಿತು.

ಕೋಮು ದಾಳಿಯ ವಿರುದ್ಧ ಅಭಿಯಾನಕ್ಕೆ ಎನ್.ಪಿ.ಎಂ.ಒ ಕರೆ

ಗುಜರಾತ್‌ನ ಕೊಳಕು ಕೋಮು ಹತ್ಯಾಕಾಂಡದ ಹಿನ್ನೆಲೆಯಲ್ಲಿ 2002 ರ ಮೇ 20 ರಂದು ದೆಹಲಿಯಲ್ಲಿ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ (56 ಕಾರ್ಮಿಕ ಸಂಘಗಳು ಮತ್ತು ಸಾಮೂಹಿಕ ಸಂಘಟನೆಗಳನ್ನು ಪ್ರತಿನಿಧಿಸುವ) ಸಭೆ ನಡೆಸಿತು ಮತ್ತು ಕೋಮುವಾದ ಕಾರ್ಮಿಕ ವರ್ಗದ ಹೋರಾಟ, ಏಕತೆ ಮತ್ತು ಜಾತ್ಯತೀತತೆ ಮತ್ತು ಪ್ರಜಾಪ್ರಭುತ್ವದ ತೀವ್ರ ಶತ್ರು ಎಂದು ಪರಿಗಣಿಸಿ, ಜೂನ್ 19 ರಿಂದ 4 ಜುಲೈ 2002 ವರೆಗೆ ದೇಶದ ಎಲ್ಲಾ ಹಂತಗಳಲ್ಲಿ, ಕೋಮು ದಾಳಿಯ ವಿರುದ್ಧ 'ಪ್ರಚಾರ-ಪಾಕ್ಷಿಕ' ಆಯೋಜಿಸುವಂತೆ ಘಟಕಗಳನ್ನು ಒತ್ತಾಯಿಸಿತು..

ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಹೋರಾಟ ಕೈಗೊಳ್ಳಲು ಕಾರ್ಮಿಕರ ಅಸೆಂಬ್ಲಿ ಕರೆ

ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧದ ರಾಷ್ಟ್ರೀಯ ಕಾರ್ಮಿಕರ ಸಭೆ ಜುಲೈ 15, 2002 ರಂದು ದೆಹಲಿಯ ತಾಲಕೊತ್ರಾ ಕ್ರೀಡಾಂಗಣದಲ್ಲಿ ಯಶಸ್ವಿಯಾಗಿ ನಡೆಯಿತು. ರಾಷ್ಟ್ರೀಯ ಕಾರ್ಮಿಕರ ಅಸೆಂಬ್ಲಿಯು ಸರ್ವಾನುಮತದಿಂದ ಅಂಗೀಕರಿಸಿದ ಘೋಷಣೆಯು 2003 ರ ಬಜೆಟ್ ಅಧಿವೇಶನದಲ್ಲಿ ಸಂಸತ್ತಿಗೆ ಬೃಹತ್ ಮೆರವಣಿಗೆಯಲ್ಲಿ ಸಂಪನ್ನಗೊಳ್ಳುವ ಒಂದು ಹಂತ-ಹಂತಗಳ ಕ್ರಿಯಾಶೀಲ ಕಾರ್ಯಕ್ರಮವನ್ನುಅಂಗೀಕರಿಸಿತು:

ಗುಜರಾತ್‌ನಲ್ಲಿ ನಡೆದ ನರಮೇಧದ ಸಂತ್ರಸ್ತರಿಗೆ, ವಿವಿಧ ಕಾರ್ಮಿಕ ಸಂಘಗಳಿಂದ ಪರಿಹಾರ ವಿತರಣೆ

ಗುಜರಾತ್‌ನಲ್ಲಿ ಕೋಮು ಹತ್ಯಾಕಾಂಡದ ಆರಂಭದಿಂದಲೂ, ಸಂತ್ರಸ್ತರಿಗಾಗಿ ಗುಜರಾತ್ ಪರಿಹಾರ ನಿಧಿಗೆ ಕೊಡುಗೆ ನೀಡುವಂತೆ ವಿವಿಧ ಕಾರ್ಮಿಕ ಸಂಘಗಳು ನೌಕರರಿಗೆ ಮನವಿ ಮಾಡಿದವು. ಕೋಮು ಹತ್ಯೆಯ ಸಂತ್ರಸ್ತರಿಗೆ ಕಾರ್ಮಿಕ ಸಂಘಗಳು ವಿವಿಧ ರೂಪಗಳಲ್ಲಿ ಪರಿಹಾರವನ್ನು ವಿತರಿಸಿದವು.

ಡಬ್ಲ್ಯೂ.ಎಫ್.ಟಿ.ಯು. 14 ನೇ ವಿಶ್ವಅಧಿವೇಶನ

ವರ್ಲ್ಡ್ ಫೆಡರೇಶನ್ ಆಫ್ ಟ್ರೇಡ್ ಯೂನಿಯನ್ಸ್‌ನ 14 ನೇ ವಿಶ್ವ ಅಧಿವೇಶನವನ್ನು ಮಾರ್ಚ್ 25 – 28 ರಂದು ನವದೆಹಲಿಯ ವಿಜ್ಞಾನ ಭವನದಲ್ಲಿ ನಡೆಸಲಾಯಿತು. ಇದಕ್ಕೆ ಮುಂಚಿತವಾಗಿ ಯುಎಸ್ ಸಾಮ್ರಾಜ್ಯಶಾಹಿಯು ನಿರಂಕುಶವಾಗಿ ತನ್ನ ಆಜ್ಞೆಗಳನ್ನು ಧಿಕ್ಕರಿಸುತ್ತಿರುವ ವಿವಿಧ ದೇಶಗಳ ಮೇಲೆ ಹೇರುತ್ತಿದ್ದ ದಿಗ್ಬಂಧನ ಮತ್ತು ನಿರ್ಬಂಧಗಳ ವಿರುದ್ಧದ ಸೌಹಾರ್ದ-ಸಮಾವೇಶವು ನಡೆಯಿತು..

ವಿಶ್ವ ಅಧಿವೇಶನ ಮಾನವತೆಗೆ ಉತ್ತಮ ಜೀವನ ಮತ್ತು ಉತ್ತಮ ಭವಿಷ್ಯವನ್ನು ನಿರ್ಮಿಸುವ ಘೋಷಣೆಯನ್ನು ಅಂಗೀಕರಿಸಿತು. ಈ ಘೋಷಣೆಯನ್ನು "ನವದೆಹಲಿ ಸಹಸ್ರಮಾನ ಘೋಷಣೆ" ಎಂದು ಹೆಸರಿಸಲಾಯಿತು. ಭಾರತದಲ್ಲಿ ಇದೇ ಮೊದಲ ಬಾರಿಗೆ ಡಬ್ಲ್ಯು.ಎಫ್.ಟಿ.ಯು. ವಿಶ್ವ ಅಧಿವೇಶನ ನಡೆಯಿತು. ಅಧಿವೇಶನದಲ್ಲಿ ವಿಶ್ವದ 51 ದೇಶಗಳಿಂದ ಅಪಾರ ಸಂಖ್ಯೆಯ ಕಾರ್ಮಿಕ ಸಂಘಗಳು ಭಾಗವಹಿಸಿದ್ದವು, ಒಟ್ಟು ಪ್ರತಿನಿಧಿಗಳ ಸಂಖ್ಯೆ 420. ಭಾರತದ ಹೊರಗಿನ ಪ್ರತಿನಿಧಿಗಳು ಮತ್ತು ವೀಕ್ಷಕರು ಸುಮಾರು 200 ಇದ್ದರು. 11 ಮೇ 2000 ರಂದು ರಾಷ್ಟ್ರವ್ಯಾಪಿ ಮುಷ್ಕರಕ್ಕೆ ಎನ್.ಪಿ.ಎಂ.ಒ. ನಿರ್ಧಾರದ ಬಗ್ಗೆ ಭಾರತೀಯ ಪ್ರತಿನಿಧಿಗಳು ಅಧಿವೇಶನಕ್ಕೆ ಮಾಹಿತಿ ನೀಡಿದರು. ಖಾಸಗೀಕರಣ ಮತ್ತು ಜಾಗತೀಕರಣದ ವಿರುದ್ಧ ದಕ್ಷಿಣ ಏಷ್ಯಾದ ದೇಶಗಳ ಅಂದರೆ ಬಾಂಗ್ಲಾದೇಶ, ಪಾಕಿಸ್ತಾನ, ನೇಪಾಳ ಮತ್ತು ಶ್ರೀಲಂಕಾಗಳ ಕಾರ್ಮಿಕ ಸಂಘಗಳು ತಮ್ಮದೇಶಗಳಲ್ಲಿಅಂದುಸೌಹಾರ್ದ ಪ್ರದರ್ಶನಗಳನ್ನು ಆಯೋಜಿಸುತ್ತವೆ ಎಂದು ಅಧಿವೇಶನ ನಿರ್ಧರಿಸಿತು.

"ಆರೋಗ್ಯ ಮೂಲಭೂತ ಹಕ್ಕು" ಎಂದು ಒತ್ತಾಯಿಸಿದ ಮೊದಲ ವಿಶ್ವ ಜನತೆಯ ಆರೋಗ್ಯ ಸಭೆ 2000 ರ ಡಿಸೆಂಬರ್ 4 ರಿಂದ 8 ರವರೆಗೆ ಬಾಂಗ್ಲಾದೇಶದ ಡಾಕಾದಲ್ಲಿ ನಡೆಯಿತು.

21 ಮೇ 2003 ರಂದು ಸಾರ್ವತ್ರಿಕ ಮುಷ್ಕರ

ಈ ಅವಧಿಯು ಸರ್ಕಾರಗಳ ನೀತಿಗಳ ವಿರುದ್ಧ ಸತತ ಭಾರಿ ಸಾರ್ವತ್ರಿಕ ಮುಷ್ಕರಗಳಿಗೆ ಸಾಕ್ಷಿಯಾಯಿತು. 21 ಮೇ 2003 ರಂದು ದೇಶವ್ಯಾಪಿ ಸಾರ್ವತ್ರಿಕ ಮುಷ್ಕರ, ದೇಶಾದ್ಯಂತ ಭಾರಿ ಯಶಸ್ಸನ್ನು ಕಂಡಿತು.

ತಮಿಳುನಾಡು ಸರ್ಕಾರಿ ನೌಕರರು ಮತ್ತು ಶಿಕ್ಷಕರ ಮೇಲೆ ದಾಳಿ

ಎನ್‌ಡಿಎ ಮಿತ್ರ ತಮಿಳುನಾಡು ಸರ್ಕಾರದ ಕಾರ್ಮಿಕ ವಿರೋಧಿ ವರ್ತನೆ ಮತ್ತು ಜಾಗತೀಕರಣದ ಕಾರ್ಮಿಕ-ವಿರೋಧಿ ಸಿದ್ಧಾಂತಕ್ಕೆ ಅನುಗುಣವಾಗಿ ಮತ್ತು ಅತ್ಯುನ್ನತ ನ್ಯಾಯಾಂಗದ ತೀರ್ಪಿನ ಪರಿಣಾಮವಾಗಿ ಕೆಟ್ಟ ಬಲಿಪಶುಗಳಾಗಿದ್ದರು. ಇದರಿಂದ, ಹಲವಾರು ಲಕ್ಷ ರಾಜ್ಯ ನೌಕರರು ಮತ್ತು ಶಿಕ್ಷಕರು ಜುಲೈ 2, 2003 ರಿಂದ ತಮಿಳುನಾಡನ್ನು ಮುಷ್ಕರ ಹಾದಿಗೆ ತಳ್ಳಲಾಯಿತು. ಜಯಲಲಿತಾ ಸರ್ಕಾರವು ಮುಷ್ಕರನಿರತ ನೌಕರರು ಮತ್ತು ಶಿಕ್ಷಕರ ಮೇಲೆ ಉಗ್ರವಾಗಿ ದಾಳಿ ಮಾಡಿತು ಮತ್ತು ಸುಮಾರು 200,000 ಮುಷ್ಕರಕಾರರನ್ನು ಒಟ್ಟಾಗಿ ವಜಾಗೊಳಿಸುವ ಮೂಲಕ ನಿರಂಕುಶಾಧಿಕಾರದ ಇತಿಹಾಸವನ್ನು ಸೃಷ್ಟಿಸಿತು. ಇದರ ನಂತರ ಸುಪ್ರೀಂ ಕೋರ್ಟ್‌ನ ಕಟ್ಟಾ-ಪ್ರತಿಗಾಮಿ ತೀರ್ಪು ಆಗಸ್ಟ್, 2003 ರ ಆರಂಭದಲ್ಲಿ ಸರ್ಕಾರಿ ನೌಕರರ ಮುಷ್ಕರವನ್ನು ಕಾನೂನುಬಾಹಿರವೆಂದು ಘೋಷಿಸಿತು.

ಮುಷ್ಕರ –ಹಕ್ಕು ಒಳಗೊಂಡಂತೆ ಸಂಪೂರ್ಣ ಟ್ರೇಡ್ ಯೂನಿಯನ್ ಹಕ್ಕುಗಳನ್ನು ನೀಡುವಂತೆ ಆದೇಶಿಸುವ ಅಧಿನಿರ್ಣಯ ನಂ. 151 ನ್ನು ಅಂಗೀಕರಿಸುವಂತೆ ಒತ್ತಾಯಿಸಿ ಮಷ್ಕರದ ಹಕ್ಕಿಗಾಗಿ ಸಹಿ ಸಂಗ್ರಹಿಸುವ ಬೃಹತ್ ಅಭಿಯಾನದ ನಂತರ, ಸರ್ಕಾರಿ ನೌಕರರು, ವಿಮಾ ನೌಕರರು ಮತ್ತು ಸಾಮಾನ್ಯ ನಾಗರಿಕರಿಂದ ಸುಮಾರು 3 ಕೋಟಿ (ಮೂವತ್ತು ಮಿಲಿಯನ್) ಸಹಿಯನ್ನು ಸಾಮೂಹಿಕ ಸಹಿ ಅರ್ಜಿಯಲ್ಲಿ ಸಂಗ್ರಹಿಸಲಾಯಿತು. ಡಿಸೆಂಬರ್ 10 ರಂದು ದೆಹಲಿಯಲ್ಲಿ ಬೃಹತ್ ರ್‍ಯಾಲಿಯೊಂದಿಗೆ ಎಲ್ಲಾ ರಾಜ್ಯ ಮತ್ತು ಕೇಂದ್ರ ಸರ್ಕಾರಿ ಕಚೇರಿಗಳು, ಶಿಕ್ಷಕರು, ಪಾರ್ಲಿಮೆಂಟ್ ಗೆ ಮೆರವಣಿಗೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು ಮತ್ತು ಅರ್ಜಿಯನ್ನು ಸಂಸತ್ತಿಗೆ ಸಲ್ಲಿಸಲಾಯಿತು.

24 ಫೆಬ್ರವರಿ 2004: ಮುಷ್ಕರದ ಹಕ್ಕಿಗೆ ಒತ್ತಾಯಿಸಿ ಐತಿಹಾಸಿಕ ಸಾರ್ವತ್ರಿಕ ಮುಷ್ಕರ

ಫೆಬ್ರವರಿ 24, 2004 ರಂದು ನಡೆದ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರವು ಟ್ರೇಡ್ ಯೂನಿಯನ್ ಚಳುವಳಿಯ ಇತಿಹಾಸದಲ್ಲಿ ಅಭೂತಪೂರ್ವವಾದ ಐತಿಹಾಸಿಕ ಯಶಸ್ಸನ್ನು ಗಳಿಸಿತು. ರಾಜ್ಯ ಸರ್ಕಾರಿ

ಪುಟ 14 ನೋಡಿ

ಕೇಂದ್ರ ಸರಕಾರಕ್ಕೆ ಸುಪ್ರಿಂ ಕೋರ್ಟಿನಿಂದ ಮತ್ತೆರಡು ತಾಕೀತುಗಳು


ನ್ಯೂಇಂಡಿಯಾನ್ಯೂಸ್

ಲಸಿಕೆ ನೀತಿಯ ಬಗ್ಗೆ "ನಿರಂಕುಶ ಮತ್ತು ತರ್ಕಹೀನ" ಎಂಬ ಟಿಪ್ಪಣಿಯ ನಂತರ ಸುಪ್ರಿಂ ಕೋರ್ಟ್ ಇನ್ನೆರಡು ಪ್ರಕರಣಗಳಲ್ಲಿ ಮೋದಿ ನೇತೃತ್ವದ ಸರಕಾರದ ಕಾರ್ಯಶೈಲಿಯ ಬಗ್ಗೆ ಮತ್ತೆರಡು ಕಟು ಟಿಪ್ಪಣಿಗಳನ್ನು ಮಾಡಿದೆ.

ಜೂನ್ 29 ರಂದು ಸುಪ್ರಿಂ ಕೋರ್ಟಿನ ಒಂದು ನ್ಯಾಯಪೀಠ ಕೇಂದ್ರ ಸರಕಾರದ ಕಾರ್ಮಿಕ ಇಲಾಖೆಯ **"ಅಕ್ಷಮ್ಯ ಅಸಡ್ಡೆ"**ಯನ್ನು ಜರೆಯಿತು. **"ಕಾರ್ಮಿಕ ಮಂತ್ರಾಲಯ ವಲಸೆ ಕಾರ್ಮಿಕರ ಆತಂಕಗಳ ಬಗ್ಗೆ ಸ್ಪಂದಿಸಿಲ್ಲ. ಮಂತ್ರಾಲಯದ ಕ್ರಿಯಾಹೀನತೆಯ ಬಗ್ಗೆ ಬಲವಾದ ಅಸಮ್ಮತಿ ವ್ಯಕ್ತಪಡಿಸಬೇಕಾಗಿದೆ"** ಎಂದು ಹೇಳಿತು.

ಜೂನ್ 30ರಂದು ಇನ್ನೊಂದು ಸುಪ್ರಿಂ ಕೋರ್ಟ್ ಪೀಠ **"ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಎನ್‌ಡಿಎಂಎ) ತನ್ನ ಶಾಸನಬದ್ಧ ಕರ್ತವ್ಯವನ್ನು ನಿಭಾಯಿಸುವಲ್ಲಿ ವಿಫಲವಾಗಿದೆ"** ಎಂದು ಕಟುವಾಗಿ ಟೀಕಿಸಿತು. ಇದು ಪ್ರಧಾನ ಮಂತ್ರಿಗಳ ಅಧ್ಯಕ್ಷತೆಯಲ್ಲಿರುವ ಪ್ರಾಧಿಕಾರ ಎನ್ನುವುದನ್ನು ಗಮನಿಸಬೇಕು.

ದೇಶದ ಜನಸಂಖ್ಯೆಯ ಕಾಲುಭಾಗದಷ್ಟಿರುವ ವಲಸೆ ಕಾರ್ಮಿಕರು ಮಹಾಸೋಂಕಿನ ಸಮಯದಲ್ಲಿ ಹಸಿದುಕೊಂಡಿರದಂತೆ ನೋಡಿಕೊಳ್ಳುವುದು ಕೇಂದ್ರ ಮತ್ತು ರಾಜ್ಯ ಸರಕಾರಗಳ ಪರಮ ಕರ್ತವ್ಯ. ಈ ಕಾರ್ಮಿಕರು ದೇಶದ ಬೆಳವಣಿಗೆ ಮತ್ತು ಆರ್ಥಿಕ ಅಭಿವೃದ್ಧಿಗೆ ಗಮನಾರ್ಹ ಕೊಡುಗೆ ನೀಡಿದ್ದಾರೆ ಎಂದ ನ್ಯಾಯ ಮೂರ್ತಿಗಳಾದ ಅಶೋಕ ಭೂಷಣ ಮತ್ತು ಎಂ.ಆರ್ ಶಹಾರವರ ನ್ಯಾಯಪೀಠ ಜುಲೈ 31ರೊಳಗೆ ವಲಸೆ ಕಾರ್ಮಿಕರಿಗೆ ರೇಶನ್ ವಿತರಣೆ ಮಾಡುವ ಸ್ಕೀಮುಗಳನ್ನು ರೂಪಿಸಬೇಕು, ಎಲ್ಲ ವಲಸೆ ಕಾರ್ಮಿಕರನ್ನು ತಲುಪಲು ವಿಶೇಷ ಪ್ರಯತ್ನಗಳನ್ನು ಮಾಡಬೇಕು, ಈ ಮೂಲಕ ಯಾವ ವಲಸೆ ಕಾರ್ಮಿಕರೂ ಎರಡು ಹೊತ್ತು ಊಟದಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು ಎಂದು ಆದೇಶ ನೀಡಿದೆ.



ಬದುಕಿನ ಒಂದು ಮೂಲಭೂತ ಅಗತ್ಯವಾದ ಆಹಾರದ ಹಕ್ಕು, ಅದು ಘನತೆಯಿಂದ ಬದುಕುವ ಹಕ್ಕಿನ ಅವಿಭಾಜ್ಯ ಅಂಶ ಎಂದು ಸರಕಾರಕ್ಕೆ ಹೇಳಿದ ನ್ಯಾಯಪೀಠ ವಲಸೆ ಕಾರ್ಮಿಕರಿಗೆ ಊಟ ಹಾಕುವ ತನ್ನ ಕರ್ತವ್ಯವನ್ನು, ಅದೂ ಮಹಾಸೋಂಕಿನ ಕಾಲದಲ್ಲಿ, ಅವರ ಬಳಿ ರೇಷನ್ ಕಾರ್ಡ್ ಇಲ್ಲ ಎಂಬ ಒಂದೇ ಕಾರಣಕ್ಕೆ ತ್ಯಜಿಸಲು ಸಾಧ್ಯವಿಲ್ಲ ಎಂದು ನ್ಯಾಯಪೀಠ ತನ್ನ 80 ಪುಟಗಳ ತೀರ್ಪಿನಲ್ಲಿ ಹೇಳಿದೆ.

"ಅಕ್ಷಮ್ಯ ಅಸಡ್ಡೆ"

2018ರಲ್ಲೇ ಸುಪ್ರಿಂ ಕೋರ್ಟ್ 'ಅಸಂಘಟಿತ ಕಾರ್ಮಿಕರ ರಾಷ್ಟ್ರೀಯ ಮಾಹಿತಿ ಆಧಾರ'(ಎನ್‌ಡಿಯುಡಬ್ಲ್ಯು) ನಿರ್ಮಿಸಿ ವಲಸೆ ಕಾರ್ಮಿಕರು ಮತ್ತು ಅಸಂಘಟಿತ ಕಾರ್ಮಿಕರನ್ನು ಗುರುತಿಸಿ ನೋಂದಾಯಿಸುವ ಮೂಲಕ ಅವರ ಹಕ್ಕುಗಳು, ಕಲ್ಯಾಣ ಮತ್ತು ಆಹಾರ ಭದ್ರತೆಯನ್ನು ಖಾತ್ರಿಪಡಿಸಬೇಕು ಎಂದು ಹೇಳಿತ್ತು. ಆದರೆ ಇದುವರೆಗೂ ಅದನ್ನು ಮಾಡುವಲ್ಲಿ ಈ ಸರಕಾರ ವಿಫಲವಾಗಿದೆ. ಇದರ ಬಗ್ಗೆಯೇ ಅದು **"ಅಕ್ಷಮ್ಯ ಅಸಡ್ಡೆ"** ಎಂದು ಕಟು ಟಿಪ್ಪಣಿ ಮಾಡಿರುವುದು.

ಸರಕಾರ 'ತಂತ್ರಾಂಶ ಸಮಸ್ಯೆ'ಯ ಸಬೂಬು ಕೊಡಲು ಹೋದಾಗ, ಏನೇ ಆಗಲಿ ಜುಲೈ 31ರೊಳಗೆ ಈ ಕೆಲಸವನ್ನು ಪೂರ್ಣಗೊಳಿಸಬೇಕು, **"ಒಂದು ದೇಶ, ಒಂದು ರೇಷನ್"** ಎಂಬುದನ್ನು ಜಾರಿಗೆ ತರಬೇಕು, ವಲಸೆ ಕಾರ್ಮಿಕರಿಗೆ ಆಹಾರ ಒದಗಿಸಲು ಸಮುದಾಯ ಕಿಚನ್‌ಗಳನ್ನು ನಡೆಸಬೇಕು ಎಂದು ತಾಕೀತು ಮಾಡಿದೆ.

ಅಲ್ಲದೆ ಒಂದು ತಿಂಗಳೊಳಗೆ ಕೇಂದ್ರ ಸರಕಾರದ ಕಾರ್ಮಿಕ ಕಾರ್ಯದರ್ಶಿ ಎನ್‌ಡಿಯುಡಬ್ಲ್ಯು ಬಗ್ಗೆ ವರದಿ ಸಲ್ಲಿಸಬೇಕು, ಡಿಸೆಂಬರ್31ರೊಳಗೆ ಕಾರ್ಮಿಕರ ನೋಂದಾವಣೆಯನ್ನು ಪೂರ್ಣಗೊಳಿಸಬೇಕು, **ಇಲ್ಲವಾದರೆ, ಸರಕಾರದ "ಕಲ್ಯಾಣ ಯೋಜನೆಗಳು" ಎಲ್ಲವೂ ಕಾಗದದ ಮೇಲಿನ ಟೊಳ್ಳು ದಾವೆಗಳು ಎಂದು ಪರಿಗಣಿಸಲಾಗುವುದು** ಎಂದು ನ್ಯಾಯಪೀಠ ಕಟುವಾಗಿ ಹೇಳಿದೆ.

"ಕರ್ತವ್ಯಭ್ರಷ್ಟ"

ಜೂನ್30ರಂದು ಈ ಇಬ್ಬರು ನ್ಯಾಯಾಧೀಶರೊಂದಿಗೆ ನ್ಯಾಯಮೂರ್ತಿ ವಿನೀತ್ ಶರಣ್ ಇರುವ ಇನ್ನೊಂದು ನ್ಯಾಯಪೀಠ ಕೊವಿಡ್‌ನಿಂದ ಸಾವಪ್ಪಿದವರ ಕುಟುಂಬಗಳಿಗೆ ಅನುಕಂಪದ ಪರಿಹಾರ ಕುರಿತಂತೆ ಸರಕಾರವನ್ನು ತರಾಟೆಗೆ ತಗೊಂಡಿತು.

ಕೊವಿಡ್ ಮಹಾಸೋಂಕನ್ನು ನಿಭಾಯಿಸಲು ಕೇಂದ್ರ ಸರಕಾರ ವಿಪತ್ತು ನಿರ್ವಹಣಾ ಕಾಯ್ದೆಯನ್ನು ಬಳಸಲು ಮುಂದಾಯಿತು. ಆದರೆ ಈ ಕಾಯ್ದೆಯ ಪ್ರಕಾರ ವಿಪತ್ತಿಗೆ ಬಲಿಯಾದವರಿಗೆ ಪರಿಹಾರ ಕೊಡುವ ಪ್ರಶ್ನೆ ಬಂದಾಗ ಹಿಂದೇಟು ಹಾಕಿತು. ಮೊದಲು ಕೊಡುವುದಾಗಿ ಹೇಳಿದ ಸರಕಾರ ನಂತರ ಈ ವಿಪತ್ತಿನ ಇತರ ಎಲ್ಲ ಅಂಶಗಳನ್ನು ಕೂಡ ಒಟ್ಟಾಗಿ ನಿರ್ವಹಿಸಬೇಕಾಗಿರುವುದರಿಂದ ಸೀಮಿತ ಸಂಪನ್ಮೂಲಗಳ ಪ್ರಶ್ನೆ ಬರುತ್ತದೆ ಎನ್ನುತ್ತ ಪರಿಹಾರ ನೀಡುವ ಬಗ್ಗೆ ಹಿಂದೇಟು ಹಾಕಿತು.



ರಾಷ್ಟ್ರೀಯ ವಿಪತ್ತು .... ನಿರ್ವಹಣೆ.....?

ವ್ಯಂಗ್ಯಚಿತ್ರ: ಸಾತ್ವಿಕ್ ಗಡೆ, ದಿ ಹಿಂದು

ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಪೀಠ, ಈ ವಿಪತ್ತಿನಲ್ಲಿ ತಮ್ಮ ಪ್ರಿಯಜನರನ್ನು ಕಳಕೊಂಡಿರುವ ಕುಟುಂಬಗಳಿಗೆ ಅನುಕಂಪದ ಪರಿಹಾರವನ್ನು ಶಿಫಾರಸು ಮಾಡುವಲ್ಲಿ ವಿಫಲವಾಗಿರುವುದಕ್ಕೆ ಎನ್‌ಡಿಎಂಎ ಯನ್ನು ತರಾಟೆಗೆ ತಗೊಂಡಿದೆ.

"ರಾಷ್ಟ್ರೀಯ ಪ್ರಾಧಿಕಾರ ತನ್ನ ಶಾಸನಾತ್ಮಕ ಕರ್ತವ್ಯವನ್ನು ನಿಭಾಯಿಸಲು ವಿಫಲವಾಗಿದೆ...ಪ್ರಾಣಹಾನಿಗಾಗಿ ಅನುಕಂಪದ ನೆರವು ನೀಡುವುದು ಪರಿಹಾರದ ಕನಿಷ್ಠ ಮಾನದಂಡದ ಭಾಗವಾಗಿದೆ... ಅದನ್ನು ಬಾಧಿತ ವ್ಯಕ್ತಿಗಳಿಗೆ ಒದಗಿಸಲೇಬೇಕು " ಎಂದು ಹೇಳಿರುವ ನ್ಯಾಯಪೀಠ ಆರು ವಾರಗಳ ಒಳಗೆ ಎನ್‌ಡಿಎಂಎ ಈ ಕುಟುಂಬಗಳಿಗೆ ಕೊಡಬೇಕಾದ ಅನುಕಂಪ ಪರಿಹಾರ(ಎಕ್ಸ್ ಗ್ರಾಷಿಯ) ವನ್ನು ನಿಗದಿಪಡಿಸಲು ಮಾರ್ಗಸೂಚಿಗಳನ್ನು ರೂಪಿಸಬೇಕು ಎಂದು ಹೇಳಿದೆ.

"ಪ್ರಭುತ್ವಕ್ಕೆ ತನ್ನ ಹಣಕಾಸು ಮಿತಿಗಳು ಮತ್ತು ಖರ್ಚುವೆಚ್ಚಗಳ ಆದ್ಯತೆಗಳಿರಬಹುದು, ಆದರೆ ಯಾವುದೇ ಸರಕಾರ ತನ್ನ ನಾಗರಿಕರ ಸಂವಿಧಾನಿಕ ಹಕ್ಕುಗಳನ್ನು ದಾರಿದ್ರ್ಯದ ಕಾರಣ ಕೊಟ್ಟು ವಂಚಿಸಲು ಕಾನೂನು ಅನುಮತಿ ಕೊಡುವುದಿಲ್ಲ" ಎಂದ ನ್ಯಾಯಪೀಠ ಈ ವಿದ್ಯಮಾನವನ್ನು 'ವಿಪತ್ತು' ಎಂದು ಘೋಷಿಸಿದ ಮೇಲೆ ಎಕ್ಸ್ ಗ್ರಾಷಿಯಾವನ್ನು ನಿರಾಕರಿಸಲು ಸಾಧ್ಯವಿಲ್ಲ ಎಂದು ಹೇಳಿದೆ.

ಇದೀಗ, ಸೀತಾರಾಂ ಯೆಚುರಿಯವರು ವರ್ಣಿಸಿರುವಂತೆ "ಪ್ರಸಕ್ತ ಸ್ಥಿತಿಗತಿಯ ಸಾರಾಂಶ" ! ಈಗಲಾದರೂ ಮೋದಿ ಸರಕಾರ ಜನಗಳ ಹಿತದೃಷ್ಟಿಯಿಂದ ಕೆಲಸ ಮಾಡಲು ಕಲಿಯಬೇಕು ಎಂದು ಅವರು ಹೇಳಿದ್ದಾರೆ.


ಮತ್ತೊಂದು ಕೊವಿಡ್ ಪ್ಯಾಕೇಜ್–ಮತ್ತೊಂದು "ಸಾಲ ಪ್ಯಾಕೇಜ್" ಮತ್ತು ಸತತ ಪೆಟ್ರೋಲ್, ಎಲ್‌ಪಿಜಿ ಬೆಲೆಯೇರಿಕೆಗಳ ಪ್ಯಾಕೇಜ್!

ಸರಕಾರ ಹೇಳುವ ಪ್ರಕಾರವೇ ಎರಡನೇ ಅಲೆ ಇಳಿಮುಖ ಗೊಳ್ಳುತ್ತಿರುವಾಗ 2021ರ 6.29ಲಕ್ಷ ಕೋಟಿ ರೂ.ಗಳ 'ಉತ್ತೇಜನಾ ಪ್ಯಾಕೇಜನ್ನು ಹಣಕಾಸು ಮಂತ್ರಿಗಳು ಪ್ರಕಟಿಸದ್ದಾರೆ. ಕಳೆದ ವರ್ಷ ಮೊದಲನೇ ಅಲೆ ಅಪ್ಪಳಿಸಿದಾಗ, ಜನಗಳ ಜೇಬುಗಳಲ್ಲಿ ಸ್ವಲ್ಪವಾದರೂ ಉಳಿತಾಯದ ಹಣವಿತ್ತು, ಆದರೆ ಈಗ ಎರಡನೇ ಅಲೆ ಅಪ್ಪಳಿಸಿದ ಮೇಲೆ ಅದೂ ಖಾಲಿಯಾಗಿದೆ. ಇಂತಹ ಸಂದರ್ಭದಲ್ಲಿ ಸರಕಾರ ಇನ್ನೊಂದು ಪ್ಯಾಕೇಜನ್ನು ಏನಾದ್ದರೂ ಕೊಡಲು ಮನಸ್ಸು ಮಾಡಿದರೆ ಅದರಲ್ಲಾದರೂ ಜನಗಳ ಕೈಗಳಲ್ಲಿ ನಗದು ಹಣ ಇಡುವ ಕ್ರಮಗಳಿರಬಹುದು ಎಂದು ನಿರೀಕ್ಷಿಸಲಾಗಿತ್ತು. ಏಕೆಂದರೆ ಇತ್ತೀಚೆಗೆ ಬಂಡವಾಳಶಾಹಿಗಳೂ ನಗದು ವರ್ಗಾವಣೆಯ ಬಗ್ಗೆ ಮಾತಾಡಲು ಆರಂಭಿಸಿದ್ದಾರೆ. ಆದರೆ ಆ ನಿರೀಕ್ಷೆ ಈಡೇರಿಲ್ಲ ಎಂದು ಅರ್ಥಶಾಸ್ತ್ರಜ್ಞರೂ ಖೇದ ವ್ಯಕ್ತಪಡಿಸಿದ್ದಾರೆ.

ಈ ಪ್ಯಾಕೇಜಿನಲ್ಲೂ ಸರಕಾರ ನೇರವಾಗಿ ಮಾಡುವ ಖರ್ಚುಗಳು ನಗಣ್ಯ. ಸಾಲಗಳಿಗೆ ನೆರವು ನೀಡುವ ಕ್ರಮಗಳ ಮೇಲೆಯೇ ಗಮನ ಕೇಂದ್ರೀಕರಿಸಲಾಗಿದೆ ಎನ್ನುತ್ತಾರೆ ಕೇರಳದ ಮಾಜಿ ಹಣಕಾಸು ಮಂತ್ರಿ ಡಾ. ಥಾಮಸ್ ಐಸಾಕ್.


ವಾಸ್ತವವಾಗಿ ಇದರಲ್ಲಿ ಪೆಟ್ರೋಲಿಯಣ ಉತ್ಪನ್ನಗಳ ಮೇಲಿನ ತೆರಿಗೆಗಳನ್ನು ಇಳಿಸುವ ಕ್ರಮಗಳು ಇರಬೇಕಾಗಿತ್ತು . ಆದರೆ ಸರಕಾರ ಈ ತೆರಿಗೆಗಳ ಮೂಲಕ ಲೂಟಿಯನ್ನು ಮುಂದುವರೆಸುತ್ತಲೇ ಬ್ಯಾಂಕುಗಳ ಮೂಲಕ ಸಾಲ ಕೊಡಿಸುವ ಯೋಚನೆಯಲ್ಲೇ ಇದೆ, ಅದಕ್ಕೆ ಬಡ್ಡಿಯ ವೆಚ್ಚವೂ ಸರಕಾರ ದಖಜಾನೆಯಿಂದ ಬರುವುದಿಲ್ಲ, ಇಂತಹ ಕ್ರಮಗಳು ಯಾವ ರೀತಿಯಲ್ಲೂ ಉತ್ತೇಜನಾ ಕ್ರಮಗಳಾಗುವುದಿಲ್ಲ ಎಂದು ಅವರು ಹೇಳುತ್ತಾರೆ.

ಈಗ ದೇಶದ 730 ಜಿಲ್ಲೆಗಳಲ್ಲಿ 332ರಲ್ಲಿ ಪೆಟ್ರೋಲ್ ದರ ಲೀಟರಿಗೆ 100ರೂ. ದಾಟಿ ಹೋಗಿದೆ. ಕಳೆದ ಏಳು ತಿಂಗಳಲ್ಲೇ ಅಡುಗೆ ಅನಿಲದ ಬೆಲೆಗಳಲ್ಲಿ 250ರೂ. ಹೆಚ್ಚಳವಾಗಿದೆ.



"ಕಳೆದ ವರ್ಷ ನೀವು ಪ್ಯಾಕೇಜ್ ಪ್ರಕಟಿಸಿದ ನಂತರ ಏನು ಬದಲಾಗಿದೆ?"
"ನನ್ನ ತಲೆಗೂದಲ ಬಣ್ಣ!"


ವ್ಯಂಗ್ಯಚಿತ್ರ: ಅಲೋಕ್ ನಿರಂತರ್



ಭಯಪಡಬೇಡ!
ಈ ಬಾರಿ
ಪರಿಣಾಮ
ಕಡಿಮೆಯೇ
ಇರುತ್ತದೆ

ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ

ಕೇಳಿದ್ದು
ತುರ್ತು ನೆರವು
ಸಿಕ್ಕಿದ್ದು
ಟೊಳ್ಳು ಮಾತುಗಳು



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಸಂಪ್ರದಾಯಶರಣ ಆರ್ಥಿಕ ನೀತಿಯ ಅಸಂಬದ್ಧತೆ

ಬಂಡವಾಳಶಾಹಿಗಳಿಗೂ ಈಗ ಗೋಚರಿಸುತ್ತಿದೆ



ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ. ನಾಗರಾಜ್

ದೊಡ್ಡ ಉದ್ಯಮಿಗಳ ಒಕ್ಕೂಟವಾದ ಸಿ.ಐ.ಐ.ನ ಅಧ್ಯಕ್ಷರೂ ನಗದು ವರ್ಗಾವಣೆಯ ಬಗ್ಗೆ ಮಾತಾಡಿದ್ದಾರೆ. ಸರ್ಕಾರವು ತನ್ನ ವಿತ್ತೀಯ ಕೊರತೆಯನ್ನು ತುಂಬಿಕೊಳ್ಳಲು ನೋಟು ಮುದ್ರಿಸುವುದರಲ್ಲಿ ಯಾವುದೇ ತಪ್ಪು ಬ್ಯಾಂಕಿಂಗ್ ಉದ್ದಿಮೆದಾರ ಉದಯ್ ಕೋಟಕ್ ಅಂಥವರಿಗೂ ಸಹ ಕಾಣುತ್ತಿಲ್ಲ. ಸಂಪ್ರದಾಯಶರಣ ಆರ್ಥಿಕ ನೀತಿಯ ಅಸಂಬದ್ಧತೆಯು, ಬಂಡವಾಳಶಾಹಿಗಳಿಗಂತೂ ಈಗ ಸ್ಪಷ್ಟವಾಗುತ್ತಿದೆ. ಜನರ ಕೊಳ್ಳುವ ಶಕ್ತಿಯ ಅಭಾವದಿಂದ ಉಂಟಾದ ಅರ್ಥವ್ಯವಸ್ಥೆಯ ಸಮಸ್ಯೆಗೆ ನಗದು ವರ್ಗಾವಣೆ ಒಂದು ಪರಿಹಾರವಾಗಿ ಗೋಚರಿಸುತ್ತಿದೆ. ಆದರೂ ಮೋದಿ ಸರಕಾರಕ್ಕೆ ಕಾಣುತ್ತಿಲ್ಲ. ಅದು ಒಂದು ಬಿಡಿಗಾಸಿನ ನಗದು ವರ್ಗಾವಣೆಯನ್ನೂ ಮಾಡಿಲ್ಲ, ಈಗಲೂ ಅದಕ್ಕೆ ಸಿದ್ಧವಿಲ್ಲ.

ವಿಶ್ವದಲ್ಲೇ ಅತ್ಯಂತ ಗೊಡ್ಡು ಸಂಪ್ರದಾಯಶರಣ ಆರ್ಥಿಕ ನೀತಿಗಳನ್ನು ಮೋದಿ ಸರ್ಕಾರ ಅನುಸರಿಸುತ್ತಿದೆ ಎಂದು ಹೇಳಲಡ್ಡಿಯಿಲ್ಲ. ಕೊರೊನಾ ಸಾಂಕ್ರಾಮಿಕದ ಅವಧಿಯಲ್ಲಿ ಲಕ್ಷಾಂತರ ಜನರು ತಮ್ಮ ಆದಾಯಗಳನ್ನು ಮತ್ತು ಉದ್ಯೋಗ/ವ್ಯವಹಾರಗಳನ್ನು ಕಳೆದುಕೊಂಡಾಗ, ವಿಶ್ವದ ಬಹುತೇಕ ಸರ್ಕಾರಗಳು ತಮ್ಮ ತಮ್ಮ ದೇಶಗಳ ಜನರಿಗೆ ನಗದು ವರ್ಗಾವಣೆಗಳನ್ನು ಸಾರ್ವತ್ರಿಕವಾಗಿ ಒದಗಿಸಿದವು. ಆದರೆ, ಭಾರತದಲ್ಲಿ ಒಂದು ಬಿಡಿಗಾಸಿನ ನಗದು ವರ್ಗಾವಣೆಯನ್ನೂ ಮೋದಿ ಸರ್ಕಾರವು ಮಾಡಲಿಲ್ಲ.

ಮೂರನೆಯ ಜಗತ್ತಿನ ಅನೇಕ ದೇಶಗಳೂ ಸಹ ಸಾರ್ವತ್ರಿಕ ನಗದು ವರ್ಗಾವಣೆಗಳನ್ನು ಒದಗಿಸಲಿಲ್ಲ, ನಿಜ. ಆದರೆ, ಅದನ್ನು ಮಾಡದಂತೆ ಅವರ ಕೈಗಳನ್ನು ಕಟ್ಟಿಹಾಕಲಾಗಿತ್ತು. ವಿಪರೀತವಾಗಿ ಬಾಹ್ಯ ಸಾಲ ಮಾಡಿಕೊಂಡಿದ್ದ ಈ ದೇಶಗಳ ಹಳೆಯ ಸಾಲಗಳನ್ನು ನವೀಕರಿಸಿಕೊಳ್ಳುವ ಸಂದರ್ಭದಲ್ಲಿ, ಐಎಂಎಫ್ ನಂತಹ ಏಜೆನ್ಸಿಗಳು ಹೇರಿದ್ದ ಮಿತವ್ಯಯ ನೀತಿಗಳನ್ನು ಪಾಲಿಸುವ ಷರತ್ತುಗಳನ್ನು ಒಪ್ಪಿಕೊಂಡಿದ್ದ ಕಾರಣದಿಂದಾಗಿ, ಈ ಸರ್ಕಾರಗಳು ಜನರಿಗೆ ನಗದು ವರ್ಗಾವಣೆ ಮಾಡಲಾಗಲಿಲ್ಲ. ಆದರೆ, ಭಾರತವು ಇಂತಹ ಯಾವುದೇ ಬಾಹ್ಯ ಒತ್ತಡಕ್ಕೂ ಒಳಗಾಗಿರಲಿಲ್ಲ. ಆದರೂ ಸಹ, ಆದಾಯ/ಉದ್ಯೋಗ/ವ್ಯವಹಾರ ಕಳೆದುಕೊಂಡವರಿಗೆ ಒಂದು ರೂಪಾಯನ್ನೂ ಮೋದಿ ಸರ್ಕಾರವು ನಗದಾಗಿ ವರ್ಗಾವಣೆ ಮಾಡಲಿಲ್ಲ.

ಜನರ ಸಂಕಷ್ಟಗಳ ಬಗ್ಗೆ ತೋರಿದ ಈ ಪರಿಯ ಅಸಡ್ಡೆಯು ಇಡಿಯಾಗಿ ಮೋದಿ ಸರ್ಕಾರದ ನಿರ್ಧಾರವೇ ಆಗಿದೆ. ಇದಕ್ಕೆ ಕಾರಣ ಸಂಪ್ರದಾಯಶರಣ ಧೋರಣೆಯಲ್ಲಿ ಮೋದಿ ಸರ್ಕಾರವು ಇಟ್ಟಿರುವ ಕುರುಡು ನಂಬಿಕೆ. ಈ ರೀತಿಯ ಸಂಪ್ರದಾಯಶರಣತೆಯ ದಿವಾಳಿಕೋರತನ ಈಗ ಎಲ್ಲರಿಗೂ ಕಾಣಿಸುತ್ತಿದೆ.

ವಿತ್ತೀಯ ಕೊರತೆಯನ್ನು ನಿಯಂತ್ರಿಸಲು ಮತ್ತು ಹಣದುಬ್ಬರವನ್ನು ತಗ್ಗಿಸಲು ಸರ್ಕಾರದ ಖರ್ಚು-ವೆಚ್ಚಗಳನ್ನು ಹದ್ದುಬಸ್ತಿನಲ್ಲಿಟ್ಟುಕೊಳ್ಳಲಾಗುತ್ತದೆ. ಆದರೆ ಸರ್ಕಾರದ ವೆಚ್ಚಗಳನ್ನು ಹಿಡಿತಗೊಳಿಸಿದರೂ ಸಹ, ಮೇ ತಿಂಗಳಲ್ಲಿ ಸಗಟು ಹಣದುಬ್ಬರವು 12.94% ಮತ್ತು ಚಿಲ್ಲರೆ ಹಣದುಬ್ಬರವು 6.30% ಮಟ್ಟದಲ್ಲಿದ್ದವು. ಜಿಡಿಪಿ ಹೋಲಿಕೆಯ ಲೆಕ್ಕದಲ್ಲಿ ನೋಡಿದರೂ ಸಹ ವಿತ್ತೀಯ ಕೊರತೆಯು ಗಗನ ಮುಖಿಯಾಗಿದೆ. ಕಾರ್ಪೊರೇಟ್ ವಲಯಕ್ಕೆ ನೀಡಲಾದ ಬೃಹತ್ ತೆರಿಗೆ ರಿಯಾಯಿತಿಗಳ ಹಿನ್ನೆಲೆಯಲ್ಲಿ, ಲಾಕ್‌ಡೌನ್ ತೆರವುಗೊಳಿಸಿದ ಬಳಿಕ ಅರ್ಥವ್ಯವಸ್ಥೆಯು ಚೇತರಿಸಿಕೊಳ್ಳುತ್ತದೆ ಎಂದು ಭಾವಿಸಲಾಗಿತ್ತು. ಆದರೆ, ಕೈಗಾರಿಕಾ ಉತ್ಪಾದನೆಯ ಸೂಚ್ಯಂಕದ ಬೆಳವಣಿಗೆ ದರವು ಏಪ್ರಿಲ್‌ನಲ್ಲಿ 4.3% ರಿಂದ ಮೇ ತಿಂಗಳಲ್ಲಿ 3.1%ಗೆ ಇಳಿದಿದೆ. ಅದೇ ರೀತಿಯಲ್ಲಿ, ಸಂಪ್ರದಾಯಶರಣ ಆರ್ಥಿಕ ನೀತಿಗಳ ಅನುಸರಣೆಯ ಮೂಲಕ ಜಾಗತೀಕರಣಗೊಂಡ ಹಣಕಾಸು ಬಂಡವಾಳವನ್ನು ಸಂಪ್ರೀತಗೊಳಿಸುವ ಮೂಲಕ ಬಂಡವಾಳವು ಒಳಹರಿಯುವಂತೆ ಆಕರ್ಷಿಸುವ ಮೂಲಕ ವಿದೇಶಿ ವಿನಿಮಯ ದರವನ್ನು ಉಳಿಸಿಕೊಳ್ಳಬಹುದು ಎಂದು ಭಾವಿಸಲಾಗಿತ್ತು. ಆದರೆ, ರೂಪಾಯಿ (ವಿದೇಶಿ ವಿನಿಮಯ ದರವು) ಇತ್ತೀಚೆಗೆ ಸಾಕಷ್ಟು ಒತ್ತಡಕ್ಕೆ ಒಳಗಾಗಿದೆ. ಸಂಪ್ರದಾಯಶರಣ ಆರ್ಥಿಕ ನೀತಿಗಳು ಯಾವ ಫಲಿತಾಂಶವನ್ನು ಉಂಟುಮಾಡಬೇಕಾಗಿತ್ತೋ ಅದಕ್ಕೆ ತದ್ವಿರುದ್ಧವಾದ ಫಲಿತಾಂಶಗಳನ್ನು ಉಂಟುಮಾಡುತ್ತಿವೆ. ಈಗ, ಸ್ವತಃ ಬಂಡವಾಳಗಾರರೂ ಸಹ ಈ ಪರಿಸ್ಥಿತಿಯಿಂದಾಗಿ ಬೇಸತ್ತಿದ್ದಾರೆ. ಯಾವ ವರ್ಗದ ಹಿತಾಸಕ್ತಿಗಳನ್ನು ಕಾಪಾಡುವ ಉದ್ದೇಶದಿಂದ ಈ ಸಂಪ್ರದಾಯಶರಣ ಆರ್ಥಿಕ ನೀತಿಗಳನ್ನು ಅನುಸರಿಸಲಾಗುತ್ತಿತ್ತೋ, ಅದೇ ವರ್ಗವೇ ಈಗ ಈ ನೀತಿಗಳನ್ನು ಬಹಿರಂಗವಾಗಿ ವಿರೋಧಿಸುತ್ತಿದೆ.

ಭಾರತದ ಕೈಗಾರಿಕೆಗಳ ಒಕ್ಕೂಟದ (ಸಿಐಐ) ಪ್ರಸ್ತುತ ಅಧ್ಯಕ್ಷರಾಗಿರುವ ಟಾಟಾ ಸಮೂಹದಲ್ಲಿ ಒಂದು ಉನ್ನತ ಹುದ್ದೆಯಲ್ಲಿರುವ ಟಿ.ವಿ. ನರೇಂದ್ರನ್ ಅವರು ಸಿಐಐ ಪರವಾಗಿ ಒಂದು ಪ್ರಸ್ತಾಪವನ್ನು ಮಂಡಿಸಿದ್ದಾರೆ. ನೇರ ನಗದು ವರ್ಗಾವಣೆಯನ್ನೂ ಒಳಗೊಂಡಂತೆ ಒಟ್ಟು 3 ಲಕ್ಷ ಕೋಟಿ ರೂಪಾಯಿಗಳ ಆರ್ಥಿಕ ಉತ್ತೇಜನವನ್ನು ಒದಗಿಸುವಂತೆ ಸೂಚಿಸಿದ್ದಾರೆ. ಹಾಗಾಗಿ, ನಗದು ವರ್ಗಾವಣೆಯ ಪ್ರಸ್ತಾಪವನ್ನು ಈಗ ಕೇವಲ ಅರ್ಥಶಾಸ್ತ್ರಜ್ಞರು, ವಿರೋಧಿ ರಾಜಕೀಯ ಪಕ್ಷಗಳು ಮತ್ತು ನಾಗರಿಕ ಸಮಾಜ ಸಂಘಟನೆಗಳು ಮಾತ್ರ ಮಾಡುತ್ತಿಲ್ಲ, ಬಂಡವಾಳಗಾರರ ಸಂಘಟನೆಗಳೂ ಸೇರಿದಂತೆ ಎಲ್ಲರೂ ಮಾಡುತ್ತಿದ್ದಾರೆ. ಅವರೆಲ್ಲರೂ ಒಂದೇ ರೀತಿಯ ಸಲಹೆಯನ್ನು ಕೊಡುತ್ತಿದ್ದಾರೆ ಎಂಬುದು ಈ ಮಾತಿನ ಅರ್ಥವಲ್ಲ. ಆದರೆ, ಅವರೆಲ್ಲರೂ, ಮೋದಿ ಸರ್ಕಾರವನ್ನು ಹೊರತುಪಡಿಸಿ, ಎಲ್ಲರಿಗೂ ಸ್ಪಷ್ಟವಾಗಿ ಗೋಚರಿಸುವ ಒಂದು ಅಂಶವನ್ನು ಗುರುತಿಸುತ್ತಿದ್ದಾರೆ. ಅದು ಯಾವುದೆಂದರೆ, ಸಂಕಷ್ಟದಲ್ಲಿರುವ ಜನರಿಗೆ ನೇರ ನಗದು ವರ್ಗಾವಣೆ. ಅರ್ಥವ್ಯವಸ್ಥೆಯು ಇಂದು ಎದುರಿಸುತ್ತಿರುವ ನಿಜವಾದ ಸಮಸ್ಯೆ ಯಾವುದೆಂದರೆ, ಜನರ ಕೈಯಲ್ಲಿ ಕೊಳ್ಳುವ ಶಕ್ತಿಯ ಅಭಾವ. ಜನರ ಕೊಳ್ಳುವ ಶಕ್ತಿಯ ಅಭಾವದಿಂದ ಉಂಟಾದ ಅರ್ಥವ್ಯವಸ್ಥೆಯ ಸಮಸ್ಯೆಯನ್ನು ನಗದು ವರ್ಗಾವಣೆಗಳನ್ನು ಒದಗಿಸುವ ಮೂಲಕ ಸರಿಪಡಿಸಬಹುದು. ಅರ್ಥಶಾಸ್ತ್ರಜ್ಞರು, ವಿರೋಧಿ ರಾಜಕೀಯ ಪಕ್ಷಗಳು ಮತ್ತು ನಾಗರಿಕ ಸಮಾಜ ಸಂಘಟನೆಗಳು ಮತ್ತು ಬಂಡವಾಳಗಾರರ ಸಂಘಟನೆಗಳು, ಈ ಎಲ್ಲರಿಗೂ ನೇರ ನಗದು ವರ್ಗಾವಣೆಯು ಒಂದು ಪರಿಹಾರವಾಗಿ ಗೋಚರಿಸುತ್ತಿರುವ ವಿದ್ಯಮಾನಕ್ಕೆ ವ್ಯತಿರಿಕ್ತವಾಗಿ, ಜನರಿಗೆ ಕೊಳ್ಳುವ ಶಕ್ತಿಯನ್ನು ತುಂಬುವುದರಿಂದ ಪ್ರಯೋಜನವಾಗುವುದಿಲ್ಲ, ಏಕೆಂದರೆ, ಅದು ದೊಡ್ಡ ಬಳಕೆಯಾಗಿ ಪರಿಣಮಿಸುವುದಿಲ್ಲ ಎಂಬ ಅಸಂಬದ್ಧ ತರ್ಕವನ್ನು ಸರ್ಕಾರಿ ಅರ್ಥಶಾಸ್ತ್ರಜ್ಞರು ಮಂಡಿಸುತ್ತಾರೆ!

ಕೇವಲ ವಿತ್ತೀಯ ಕೊರತೆಯನ್ನು ವಿಸ್ತರಿಸುವುದಷ್ಟೇ ಸಾಲದು, ಅದನ್ನು ಸರಿದೂಗಿಸಲು ಬೇಕಾಗುವಷ್ಟು ಹಣವನ್ನು ಮುದ್ರಿಸುವಂತೆ ಕೋಟಕ್ ಮಹೀಂದ್ರಾ ಬ್ಯಾಂಕ್‌ನ ಒಡೆಯ ಉದಯ್ ಕೋಟಕ್ ಅವರು ಮಾಡಿರುವ ಸಲಹೆಯೂ ಸಹ ಅಷ್ಟೇ ಗಮನಾರ್ಹವಾಗಿದೆ. ಅವರ ಈ ಸಲಹೆಯು ಸಂಪ್ರದಾಯಶರಣ ಅರ್ಥಶಾಸ್ತ್ರಜ್ಞರಿಗೆ ಕರ್ಣಕಠೋರವಾಗಿದೆ. ವಿತ್ತೀಯ ಕೊರತೆಯ ವಿಸ್ತರಣೆಗೆ ವ್ಯತಿರಿಕ್ತವಾದ ನಿಲುವನ್ನು ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಅಫಿಡವಿಟ್‌ನಲ್ಲಿ ವ್ಯಕ್ತಪಡಿಸಿದೆ. ಕೋವಿಡ್-19ರಿಂದ ಸತ್ತವರಿಗೆ ಪರಿಹಾರ ಕೊಡಲು ತನ್ನ ಬಳಿ ಹಣವಿಲ್ಲ ಎಂದು ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಹೇಳುತ್ತದೆ. ಕೇಂದ್ರ ಸರ್ಕಾರವೇ ಒದಗಿಸಿರುವ ಅಂಕಿ-ಅಂಶಗಳನ್ನೇ ಪರಿಷ್ಕರಿಸಿ ಲೆಕ್ಕ ಹಾಕಿದರೆ, ಕೋವಿಡ್-19ರಿಂದ ಸತ್ತವರ ಒಟ್ಟು ಸಂಖ್ಯೆಯು 4 ಲಕ್ಷವನ್ನು ದಾಟುವುದಿಲ್ಲ. ಒಬ್ಬ ವ್ಯಕ್ತಿಗೆ 4 ಲಕ್ಷ ರೂ.ಗಳ ಲೆಕ್ಕದಲ್ಲಿ ಒದಗಿಸಬೇಕಾಗುವ ಒಟ್ಟು ಪರಿಹಾರವು 16,000 ಕೋಟಿ ರೂ.ಗಳಾಗುತ್ತದೆ. ಸೆಂಟ್ರಲ್ ವಿಸ್ಟಾ ಯೋಜನೆಯಂತಹ ಬೃಹತ್, ಅನಗತ್ಯ ಮತ್ತು ಸಂಪೂರ್ಣ ವಿಧ್ವಂಸಕ ಯೋಜನೆಗಳಿಗಾಗಿ 20,000 ಕೋಟಿ ರೂ.ಗಳನ್ನು ಖರ್ಚು ಮಾಡಲು ಹೊರಟಿರುವ ಸರ್ಕಾರವು, ಕೋವಿಡ್ ಸಂತ್ರಸ್ತರಿಗೆ ಸಹಾಯ ನೀಡಲು ತನ್ನಲ್ಲಿ ಹಣವಿಲ್ಲ ಎಂದು ಹೇಳುವ ಅಂಶವು ಅದರ ನೈತಿಕ ಆದ್ಯತೆಗಳಿಗೆ ಅತ್ಯುತ್ತಮ ನಿದರ್ಶನವಾಗಿದೆ. ಆದರೆ, ಇಲ್ಲಿ ಪ್ರಸ್ತುತವಾದ ಅಂಶವೆಂದರೆ, ಸರ್ಕಾರವು ಕೊರತೆಯ ಹಣವನ್ನು ಮುದ್ರಿಸುವುದರಲ್ಲಿ ಯಾವುದೇ ತಪ್ಪು ಬ್ಯಾಂಕಿಂಗ್ ಉದ್ದಿಮೆದಾರ ಉದಯ್ ಕೋಟಕ್ ಅಂಥವರಿಗೂ ಸಹ ಕಾಣುವುದಿಲ್ಲ. ಈ ಅಂಶವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಕೋವಿಡ್ ಸಂತ್ರಸ್ತರಿಗೆ ಪರಿಹಾರ ಕೊಡಲು ತನ್ನಲ್ಲಿ ಹಣವಿಲ್ಲ ಎಂಬ ಸರ್ಕಾರದ ಹೇಳಿಕೆಯನ್ನು ಬಂಡವಾಳಗಾರರೂ ನಂಬುವುದಿಲ್ಲ.

ಇದ್ದಕ್ಕಿದ್ದಂತೆ ಬಂಡವಾಳಗಾರರು ಜನರ ಬಗ್ಗೆ ಒಲವು ಬೆಳೆಸಿಕೊಂಡಿದ್ದಾರೆ ಎಂದಲ್ಲ. ಅರ್ಥವ್ಯವಸ್ಥೆಯ ಪುನರುಜ್ಜೀವನಕ್ಕಾಗಿ ಸಂಕಷ್ಟಕ್ಕೊಳಗಾದ ಜನರಿಗೆ ನಗದು ವರ್ಗಾವಣೆ ಮಾಡುವ ಅಗತ್ಯವಿದೆ ಎಂಬುದನ್ನು ಭಾವಾವೇಶವಿಲ್ಲದ ಮತ್ತು ವಾಸ್ತವಿಕ ಅರಿವಿನ ಬಂಡವಾಳಗಾರರು ಮನಗಂಡಿದ್ದಾರೆ, ಅಷ್ಟೇ.


ಮೋದಿ ಪ್ರತಿಪಾದಿಸುವ ಸಂಪ್ರದಾಯಶರಣ ಅರ್ಥಶಾಸ್ತ್ರದ ಹೀನ ಸ್ವಭಾವವನ್ನು ಅದು ಹೇಳುವ ಈ ಅಂಶದಲ್ಲಿ ಕಾಣಬಹುದು: ಅರ್ಥವ್ಯವಸ್ಥೆಯ ಪುನರುಜ್ಜೀವನಕ್ಕಾಗಿ ಜನರ ಕೈಯಲ್ಲಿ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಬೇಕಾಗಿಲ್ಲ; ಅದನ್ನು ಇಳಿಕೆ ಮಾಡುವ ಅಗತ್ಯವಿದೆ ಎಂದು ಅದು ನಂಬುತ್ತದೆ. ಅದರ ತರ್ಕ ಹೀಗಿದೆ: ಅರ್ಥವ್ಯವಸ್ಥೆಯ ಚೇತರಿಕೆಗಾಗಿ ಸರ್ಕಾರದ ಖರ್ಚು-ವೆಚ್ಚಗಳನ್ನಾಗಲಿ ಅಥವಾ ಮೂಲಸೌಕರ್ಯಗಳಿಗೆ ಮೀಸಲಾದ ವೆಚ್ಚಗಳನ್ನಾಗಲಿ ಹೆಚ್ಚಿಸುವ ಅಗತ್ಯವಿಲ್ಲ. ವಿತ್ತೀಯ ಕೊರತೆಯನ್ನು ನಿಯಂತ್ರಿಸಿದರೆ, ಅಷ್ಟೇ ಸಾಕು. ಅಷ್ಟಾಗಿಯೂ, ಸರ್ಕಾರದ ವೆಚ್ಚಗಳನ್ನು ಹೆಚ್ಚಿಸಲೇಬೇಕಾದ ಅಗತ್ಯ ಬಿದ್ದರೆ, ಅದರ ಭಾರವನ್ನು ಬಂಡವಾಳಗಾರರ ಮೇಲೆ ಹೇರಲಾಗದು, (ಬದಲಿಗೆ, ತೆರಿಗೆ ರಿಯಾಯ್ತಿಗಳ ಮೂಲಕ ಅವರಿಗೆ ಉತ್ತೇಜನ ಒದಗಿಸಬೇಕಾಗುತ್ತದೆ), ಅದರ ಭಾರವನ್ನು ಕಾರ್ಮಿಕರೇ ಹೊರಬೇಕಾಗುತ್ತದೆ. ಪರೋಕ್ಷ ತೆರಿಗೆಗಳನ್ನು ಹೆಚ್ಚಿಸುವ ಮೂಲಕ ಈ ಕಾರ್ಯವನ್ನು ಉತ್ತಮವಾಗಿ ಸಾಧಿಸಬಹುದು.

ಈ ಚಿಂತನೆಯಲ್ಲಿ ಸ್ಪಷ್ಟವಾಗಿ ಕಾಣುವ ಒಂದು ದೋಷವೆಂದರೆ, ಕಾರ್ಮಿಕರ ತೆರಿಗೆಯ ಹೊರೆಯನ್ನು ಹೆಚ್ಚಿಸುವ ಮೂಲಕ ಸರ್ಕಾರವು ತನ್ನ ಖರ್ಚು-ವೆಚ್ಚಗಳನ್ನು ಹೆಚ್ಚಿಸಿಕೊಂಡಾಗ, ಒಟ್ಟು ಬೇಡಿಕೆಯಲ್ಲಿ ನಿವ್ವಳ ಹೆಚ್ಚಳವಾಗುವುದು ತೀರ ಕಡಿಮೆ, ಏಕೆಂದರೆ, ಕಾರ್ಮಿಕರು ತಮ್ಮ ಸಂಪಾದನೆಯನ್ನು ಸುಮಾರು ಪೂರ್ಣವಾಗಿಯೇ ಬಳಕೆ ಮಾಡಿಕೊಳ್ಳಬೇಕಾಗುತ್ತದೆ. ಅಂದರೆ, ಸರ್ಕಾರದ ವೆಚ್ಚಗಳು ಬೇಡಿಕೆಯಲ್ಲಿ ಏನಾದರೂ ಹೆಚ್ಚಳ ಸೃಷ್ಟಿಯಾದರೂ, ಕಾರ್ಮಿಕರ ಬಳಕೆಯಲ್ಲಿ ಇಳಿಕೆಯಾಗಿರುವುದರಿಂದಾಗಿ, ಸರಿದೂಗಲ್ಪಡುತ್ತದೆ.. ಇಂತಹ ಪರಿಸ್ಥಿತಿಗಳಲ್ಲಿ ಅರ್ಥವ್ಯವಸ್ಥೆಯು ಪುನಶ್ಚೇತನಗೊಳ್ಳಲು ಸಾಧ್ಯವಿಲ್ಲ.

ಅಷ್ಟೇ ಅಲ್ಲದೆ, ಪರೋಕ್ಷ ತೆರಿಗೆಗಳ ಮೂಲಕ ಕಾರ್ಮಿಕರು ಹಿಂಡಲ್ಪಡುವುದರಿಂದ, ಬೆಲೆಗಳಲ್ಲಿ ಏರಿಕೆ ಇರುತ್ತದೆ. ತೆರಿಗೆ-ತಳ್ಳಿದ ಈ ಹಣದುಬ್ಬರದಿಂದಾಗಿ, ತನ್ನ ಹಳೆಯ ಮಟ್ಟದ ನೈಜ ವೆಚ್ಚವನ್ನು ಕಾಪಾಡಿಕೊಳ್ಳಲೂ ಸಹ, ಸರ್ಕಾರದ ವೆಚ್ಚಗಳ ಮೊತ್ತ ರೂಪಾಯಿಗಳಲ್ಲಿ ಹೆಚ್ಚಬೇಕಾಗುತ್ತದೆ. ಬಂಡವಾಳಶಾಹಿಗಳ ವೆಚ್ಚಗಳೂ ಈ ರೀತಿ ಹೆಚ್ಚಬೇಕಾಗುತ್ತದೆ (ಕಾರ್ಮಿಕರು ಮಾತ್ರ ತಮ್ಮ ಖರ್ಚುಗಳನ್ನು ಈ ರೀತಿ ಹೆಚ್ಚಿಸಿಕೊಳ್ಳಲು ಸಾಧ್ಯವಿಲ್ಲ. ನಿಖರವಾಗಿ ಈ ಕಾರಣದಿಂದಾಗಿಯೇ ಅವರು ಹಿಂಡಿಹಿಪ್ಪೆಯಾಗುತ್ತಾರೆ). ಆದ್ದರಿಂದ, ಸರ್ಕಾರವು ಮೂಲ ಬೆಲೆಗಳ ಮಟ್ಟದಲ್ಲಿ ಕೈಗೊಳ್ಳಲು ಉದ್ದೇಶಿಸಿದ ಹೆಚ್ಚುವರಿ ವೆಚ್ಚಗಳಿಗಿಂತಲೂ ಬಹು ಪಟ್ಟು ಹೆಚ್ಚುವರಿ ಪರೋಕ್ಷ ತೆರಿಗೆ ಆದಾಯವನ್ನು ಪಡೆಯಬೇಕಾಗುತ್ತದೆ. ಅಂದರೆ, ಹಣದುಬ್ಬರವು ಮೂಲತಃ ಅಗತ್ಯವೆಂದು ಕಂಡದ್ದಕ್ಕಿಂತ ದೊಡ್ಡ ಮಟ್ಟದಲ್ಲಿರುತ್ತದೆ. ಹಾಗಾಗಿ, ಗಮನಾರ್ಹ ಮಟ್ಟದ ಹಣದುಬ್ಬರಕ್ಕೆ ಒಳಗಾದ ಪರಿಸ್ಥಿತಿಯಲ್ಲಿ

ಪುಟ 14 ನೋಡಿ

ಬಡವರಿಗೆ ನೆರವಾಗಲಿಕ್ಕಾಗಿ ಇಂಧನ ಬೆಲೆಯೇರಿಕೆ!-ಸಂಪ್ರದಾಯಶರಣ ಆರ್ಥಿಕ ನೀತಿಯ ಅಸಮಬದ್ಧ ತರ್ಕ!!



ಏನಾದರೂ ದೂರು ಇದ್ದರೆ ಪೆಟ್ರೋಲ್ ಪಂಪಿನವನನ್ನು ಕೇಳು!

ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ನಗದು ವರ್ಗಾವಣೆಯ ಅಗತ್ಯ ಬಂಡವಾಳಶಾಹಿಗಳಿಗೂ ಈಗ ಗೋಚರಿಸುತ್ತಿದೆ

ಪುಟ 13 ರಿಂದ

ಅರ್ಥವ್ಯವಸ್ಥೆಯು ವಿಸ್ತಾರಗೊಳ್ಳುವುದಿಲ್ಲ.

ಭಾರತದ ಅರ್ಥವ್ಯವಸ್ಥೆಯಲ್ಲಿ ಸಂಭವಿಸುತ್ತಿರುವುದು ಈ ವಿದ್ಯಮಾನವೇ. ಸರ್ಕಾರದ ವೆಚ್ಚಗಳು ಅರ್ಥವ್ಯವಸ್ಥೆಯನ್ನು ಉತ್ತೇಜಿಸುವುದು ದುರ್ಲಭವೇ. ಎಲ್ಲಕ್ಕಿಂತ ಹೆಚ್ಚಾಗಿ ಪೆಟ್ರೋ ಉತ್ಪನ್ನಗಳ ಮೇಲಿನ ಪರೋಕ್ಷ ತೆರಿಗೆಗಳ ಮೂಲಕ ಸರ್ಕಾರವು ತನ್ನ ಖರ್ಚು-ವೆಚ್ಚಗಳಿಗೆ ಹಣ ಹೊಂದಿಸಿಕೊಳ್ಳುವ ವಿಧಾನವು ಹಣದುಬ್ಬರವನ್ನು ಹರಿಯಬಿಟ್ಟಿದೆ. ಪೆಟ್ರೋಲ್ ಬೆಲೆಯನ್ನು ಲೀಟರ್‌ಗೆ 100 ರೂ.ಗಿಂತಲೂ ಮೇಲಕ್ಕೆ ಏರಿಸಿರುವ ಕ್ರಮವು ಸಾರಭೂತವಾಗಿ ಬಡವರಿಗೆ ನೋವುಂಟುಮಾಡುತ್ತದೆ. ಅರ್ಥವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸುವ ಸಲುವಾಗಿ ಪರೋಕ್ಷ ತೆರಿಗೆಗಳ ಮೂಲಕ ಕಾರ್ಮಿಕರನ್ನು ಹಿಂಡಿ ಹಿಪ್ಪೆ ಮಾಡುವ ಸರ್ಕಾರದ ಪ್ರಯತ್ನವು ಇಲ್ಲದ ಕೊಳ್ಳಿದೆವ್ವದ ಬೆನ್ನಟ್ಟಿಹೋದ ಪ್ರಯತ್ನವಾಗುತ್ತದೆ. ಆಗ ಹಣದುಬ್ಬರದ ಹಾವಳಿ ಮುಂದುವರಿಯುತ್ತದೆ. ಆರ್ಥಿಕ ಪುನರುಜ್ಜೀವನ ಸಾಧ್ಯವಾಗುವುದಿಲ್ಲ.

ಈ ಪರಿಸ್ಥಿತಿಯನ್ನು ಒಂದು ಪರ್ಯಾಯ ನೀತಿಯ ಪರಿಸ್ಥಿತಿಯೊಂದಿಗೆ ಹೋಲಿಸಿ ನೋಡೋಣ. ಸರ್ಕಾರವು 100 ರೂ.ಗಳನ್ನು ಬಡವರಿಗೆ ನೇರ ವರ್ಗಾವಣೆಯಾಗಿ ಖರ್ಚು ಮಾಡುತ್ತದೆ ಎಂದು ಭಾವಿಸೋಣ. ಬಡವರು ಸಂಪಾದಿಸಿದ ಈ 100 ರೂ.ಗಳನ್ನು ತಮಗೆ ಬೇಕಾದ ಸರಕು ಮತ್ತು ಸೇವೆಗಳನ್ನು ಖರೀದಿಸಲು ಖರ್ಚು ಮಾಡುತ್ತಾರೆ. ಬಂಡವಾಳಶಾಹಿಗಳು ತಮ್ಮ ಲಾಭದ ಆದಾಯದಿಂದ ಏನನ್ನೂ ಬಳಸುವುದಿಲ್ಲ ಮತ್ತು ಉತ್ಪಾದನೆಯಲ್ಲಿ ಅವರ ಪಾಲು ಅರ್ಧದಷ್ಟು ಎಂದು ಸರಳತೆಗಾಗಿ ಊಹಿಸಿಕೊಳ್ಳೋಣ. ಅನೇಕ ಸುತ್ತಿನ ವೆಚ್ಚಗಳ ಮೂಲಕ ಅರ್ಥವ್ಯವಸ್ಥೆಯಲ್ಲಿ ಸೃಷ್ಟಿಯಾದ ಒಟ್ಟು ಬೇಡಿಕೆಯು 200 ರೂ. ಮಟ್ಟ ತಲುಪಿದೆ. ಹೆಚ್ಚುವರಿಯಾಗಿ 200 ರೂ.ಗಳ ಸರಕು ಮತ್ತು ಸೇವೆಗಳೂ ಸಹ ಸೃಷ್ಟಿಯಾಗಿವೆ, ಬೆಲೆಗಳಲ್ಲಿ ಯಾವುದೇ ಹೆಚ್ಚಳವಿಲ್ಲದೆ. ಅದರಲ್ಲಿ ಅರ್ಧದಷ್ಟು ಲಾಭದ ಪಾಲು ಎಂಬ ಊಹೆಯಲ್ಲಿ, ಈ ಹೆಚ್ಚುವರಿ ಲಾಭದ 100 ರೂ.ಗಳು ಪುನಃ ಉಳಿಸಲ್ಪಡುತ್ತವೆ.

ಈಗ, ಸರ್ಕಾರವು ಈ ಹೆಚ್ಚುವರಿ 100 ರೂ. ಲಾಭದ ಮೇಲೆ ತೆರಿಗೆ ಹಾಕಿದರೆ, (1) ವಿತ್ತೀಯ ಕೊರತೆಯಲ್ಲಿ ಯಾವುದೇ ಹೆಚ್ಚಳ ಇರುವುದಿಲ್ಲ; (2) ಆರಂಭಿಕ ಪರಿಸ್ಥಿತಿಗೆ ಹೋಲಿಸಿದರೆ, ಖಾಸಗಿ ಸಂಪತ್ತಿನಲ್ಲಿ ಯಾವುದೇ ಹೆಚ್ಚಳ ಇರುವುದಿಲ್ಲ (ಏಕೆಂದರೆ ಸಂಪತ್ತಿಗೆ ಸೇರ್ಪಡೆಯಾಗುವ ಹೆಚ್ಚುವರಿ ಉಳಿತಾಯದ ಮೇಲೆ ತೆರಿಗೆ ವಿಧಿಸಲಾಗಿದೆ), ಆದ್ದರಿಂದ, ಸಂಪತ್ತಿನ ಹಂಚಿಕೆಯ ಪರಿಸ್ಥಿತಿಯೂ ಹದಗೆಡುವುದಿಲ್ಲ; (3) ಆರಂಭದ ವರ್ಗಾವಣೆಯ ಕ್ರಮ ಮತ್ತು ಅಧಿಕ ಉದ್ಯೋಗಗಳಿಂದಾಗಿ ಕಾರ್ಮಿಕರ ಸ್ಥಿತಿ-ಗತಿಗಳು ಸುಧಾರಿಸುತ್ತವೆ; ಮತ್ತು (4) ಈ ವಿಸ್ತರಣಾ ಕಾರ್ಯಕ್ರಮದಿಂದಾಗಿ ಹಣದುಬ್ಬರವೂ ಉಂಟಾಗುವುದಿಲ್ಲ.

ಕಾರ್ಮಿಕರ ಸ್ಥಿತಿ-ಗತಿಗಳನ್ನು ಹದಗೆಡಿಸುವ ಹಣದುಬ್ಬರವನ್ನು ಹರಿಯಬಿಡುವ ಮತ್ತು ಆರ್ಥಿಕ ಚೇತರಿಕೆಯನ್ನೂ ಸಾಧಿಸದ ಸಂಪ್ರದಾಯಶರಣ ಆರ್ಥಿಕ ನೀತಿಗೆ ವ್ಯತಿರಿಕ್ತವಾಗಿ, ಬಂಡವಾಳಶಾಹಿಗಳ ಮೇಲೆ ತೆರಿಗೆ ವಿಧಿಸುವ ಮೂಲಕ ಕಾರ್ಮಿಕರಿಗೆ ವರ್ಗಾವಣೆಗಳನ್ನು ಮಾಡುವ ಪರ್ಯಾಯ ಆರ್ಥಿಕ ನೀತಿಯು ಹಣದುಬ್ಬರಕ್ಕೆ ಅವಕಾಶ ಕೊಡದ ರೀತಿಯಲ್ಲಿ ಆರ್ಥಿಕ ಚೇತರಿಕೆಯನ್ನು ಉಂಟುಮಾಡುತ್ತದೆ. ಅಲ್ಲದೆ, ಬಂಡವಾಳಶಾಹಿಗಳ ಮೇಲಿನ ತೆರಿಗೆಯು ಅವರಿಗೆ ಸಿಗುವ ಹೆಚ್ಚುವರಿ ಲಾಭವನ್ನು ಮಾತ್ರ ಕಬಳಿಸುವುದರಿಂದ, ಅವರ ಪರಿಸ್ಥಿತಿಯೂ ಸಹ ಮೊದಲಿಗಿಂತ ಕೆಟ್ಟದಾಗಲು ಸಾಧ್ಯವಿಲ್ಲ. ಸಂಪ್ರದಾಯಶರಣ ಆರ್ಥಿಕ ನೀತಿಯ ಅಸಂಬದ್ಧತೆಯು, ಮೋದಿ ಸರ್ಕಾರಕ್ಕೆ ಅಲ್ಲದಿದ್ದರೂ, ಬಂಡವಾಳಶಾಹಿಗಳಿಗಂತೂ ಈಗ ಸ್ಪಷ್ಟವಾಗುತ್ತಿದೆ.





ಕೇರಳ: ಪೆಟ್ರೋಲ್-ಡೀಸೆಲ್-ಎಲ್‌ಪಿಜಿ ಬೆಲೆಯೇರಿಕೆ ವಿರುದ್ಧ ಅತಿ ದೊಡ್ಡ ಪ್ರತಿಭಟನೆ



ಜೂನ್ 30 ರಂದು ಕೇರಳ ಇನ್ನೊಂದು ದಾಖಲೆಯನ್ನು ಸೃಷ್ಟಿಸಿತು. ಕೊವಿಡ್-19ರ ದುರಿತ ಕಾದಲ್ಲೂ ಕೇಂದ್ರ ಸರಕಾರ ಸತತವಾಗಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳನ್ನು ಏರಿಸುತ್ತ ಜನಗಳನ್ನು ಲುಟಿ ಮಾಡುತ್ತಿರುವುದರ ವಿರುದ್ಧ **5 ಲಕ್ಷ ಸ್ಥಳಗಳಲ್ಲಿ 20 ಲಕ್ಷ ಮಂದಿ ಒಂದು ಗಂಟೆಯ ಕಾಲ ಫಲಕಗಳನ್ನು ಹಿಡಿದು ಪ್ರತಿಭಟನೆ ನಡೆಸಿದರು.** ರಸ್ತೆಗಳು, ಜಂಕ್ಷನ್‌ಗಳು, ಕೆಲಸದ ಸ್ಥಳಗಳು ಮತ್ತು ಅಂಗಳಗಳು ಈ ಹೋರಾಟದ ಕೇಂದ್ರಗಳಾದವು.

ಕೊವಿಡ್ ಪರಿಸ್ಥಿತಿಯನ್ನು ಬಳಸಿಕೊಂಡು ಬೆಲೆಗಳನ್ನು ಏರಿಸುತ್ತಲೇಇರುವ ಮೋದಿ ಸರಕಾರದ ದುಷ್ಟತನವನ್ನು ಕೊವಿಡ್ ನಿಯಮಾವಳಿಗಳನ್ನು ಪಾಲಿಸುತ್ತಲೇ ವಿರೋಧಿಸಲು ರಾಜ್ಯ ಎಲ್ಲೆಡೆಗಳಲ್ಲಿ ನಾಲ್ಕು-ನಾಲ್ಕು ಮಂದಿ ಪ್ರಮುಖ ಸ್ಥಳದಲ್ಲಿ ನಿಂತು ಸಂಗಜೆ 4ಗಂಟೆಯಿಂದ ಒಂದು ಗಂಟೆಯ ಕಾಲ ತ್ರಿಭಟನೆ ನಡೆಸಬೇಕು ಎಂದು ಎಲ್.ಡಿ.ಎಫ್. ಕರೆ ನೀಡಿತ್ತು.

ಪ್ರತಿ ಪಂಚಾಯತ್ ವಾರ್ಡಿನಲ್ಲಿ 25 ಕಡೆ, ಮತ್ತು ಪ್ರತಿ ಮುನಿಸಿಪಾಲಿಟಿ ವಾರ್ಡಿನಲ್ಲಿ 100 ಕಡೆ ಈ ಪ್ರತಿಬಟನೆಯನ್ನು ಸಂಘಟಿಸಲಾಗಿತ್ತು.

ಇವುಗಳಲ್ಲಿ ರೈತರು, ಕಾರ್ಮಿಕರು, ನೌಕರರು, ಮತ್ತು ಇತರ ದುಡಿಯುವ ಜನವಿಭಾಗಗಲ್ಲದೆ ಸಾಮಾಜಿಕ-ಸಾಂಸ್ಕೃತಿಕ ರಂಗದ ಪ್ರತಿಷ್ಠಿತರೂ ಭಾಗವಹಿಸಿದರು.

ಅಸ್ಸಾಂ: ಅಖಿಲ್ ಗೊಗೊಯ್ ರಾಜದ್ರೋಹ, ಪಿತೂರಿ ಆಪಾದನೆಗಳಿಂದ ಬಿಡುಗಡೆ

ಅಸ್ಸಾಂನ ರೈತ ಮುಖಂಡ ಹಾಗ್ನೂ ಹೊಸದಾಗಿ ರಚನೆಗೊಂಡ ರಾಜಕೀಯ ಪಕ್ಷ ರೈಜೋರ್‌ದಲ್‌ನ ಅಧ್ಯಕ್ಷ ಅಖಿಲ್ ಗೊಗೊಯ್ ಒಂದೂವರೆ ವರ್ಷದ ಜೈಲುವಾಸದ ನಂತರ ಬಿಡುಗಡೆ ಹೊಂದಿದ್ದಾರೆ.

ನಾಗರಿಕತ್ವ ತಿದ್ದುಪಡಿ ಕಾಯ್ದೆ ವಿರುದ್ಧ ದೇಶದಲ್ಲಿ ಸಿಡಿದೆದ್ದ ಹೋರಾಟದ ಸಂದರ್ಭದಲ್ಲಿ ಡಿಸೆಂಬರ್ 2019ರಲ್ಲಿ ಅವರನ್ನು ಐಪಿಸಿ, ಯುಎಪಿಎ ಕಾಯ್ದೆಗಳ ಅಡಿಯಲ್ಲಿ ಬಂಧಿಸಿ ಅವರ ಮೇಲೆ ಕ್ರಿಮಿನಲ್ ಪಿತೂರಿ, ರಾಜದ್ರೋಹ, ಎರಡು ಸಮುದಾಯಗಳ ನಡುವೆ ವೈರತ್ವ ಉಂಟುಮಾಡುವುದು,, ಭಯೋತ್ಪಾದಕ ಸಂಘಟನೆಯೊಂದಕ್ಕೆ ಬೆಂಬಲ, ರಾಷ್ಟ್ರೀಯ ಸಮಗ್ರತೆಯ ವಿರುದ್ಧ ಮಾತಾಡಿರುವುದು ಮುಂತಾದ ಆಪಾದನೆಗಳನ್ನು ಹಾಕಿ ಎರಡು ಎಫ್‌ಐಆರ್‌ಗಳನ್ನು ಹಾಕಿ ಜೈಲಿಗೆ ಹಾಕಲಾಗಿತ್ತು.

ಜೈಲಿನಲ್ಲಿ ಇದ್ದುಕೊಂಡೇ ಇತ್ತೀಚಿನ ವಿಧಾನಸಭಾ ಚುನಾವಣೆಗಳಲ್ಲಿ ಸ್ಪರ್ಧಿಸಿದ ಇವರು ಶಿಬ್‌ಸಾಗರ್ ಕ್ಷೇತ್ರದಿಂದ ಗೆದ್ದಿದ್ದರು.

ಈಗ ರಾಷ್ಟ್ರೀಯ ತನಿಖಾ ಏಜೆನ್ಸಿ(ಎನ್‌ಐಎ) ವಿಶೇಷ ನ್ಯಾಯಾಲಯ ಅವರನ್ನು ಈ ಎಲ್ಲ ಆರೋಪಗಳಿಂದ ಖುಲಾಸೆ ಮಾಡಿದೆ. ಜುಲೈ 1ರಂದು ಅವರು ಜೈಲಿನಿಂದ ಹೊರ ಬಂದಿದ್ದಾರೆ. ಬಿಜೆಪಿ ಸರಕಾರ ಎನ್‌ಐಎ ಮತ್ತು ಯುಪಿಎ ಯಂತಹ ಕಾಯ್ದೆಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿದೆ. ಈ ತೀರ್ಪು ಇಂತಹ ದುರುಪಯೋಗದ ಕೇಸುಗಳ ಮೇಲೆ ಪ್ರಭಾವ ಬೀರಬೇಕಾಗಿದೆ ಎಂದು ಅವರು ಹೇಳಿದ್ದಾರೆ.

ಲಕ್ಷದ್ವೀಪ: ಆಯಿಷಾ ಸುಲ್ತಾನಾ ರವರಿಗೆ ನಿರೀಕ್ಷಣಾ ಜಾಮೀನು

ಲಕ್ಷದ್ವೀಪದಲ್ಲಿ ಆಡಳಿತಾಧಿಕಾರಿ ಪ್ರಫುಲ್ ಪಟೇಲ್‌ರ ಮೂಲಕ ಬಿಜೆಪಿ ಸರಕಾರದ ಸರ್ವಾಧಿಕಾರಶಾಹೀ ಕ್ರಮಗಳ ವಿರುದ್ಧ ದನಿಯೆತ್ತಿದ್ದ ಚಿತ್ರ ನಿರ್ಮಾಪಕಿ ಆಯಿಷಾ ಸುಲ್ತಾನ ಅವರ ಮೇಲೂ ಇತ್ತೀಚೆಗೆ ರಾಜದ್ರೋಹದ ಪ್ರಕರಣವನ್ನು ದಾಖಲು ಮಾಡಲಾಯಿತು. ಈ ಕೇಂದ್ರಾಡಳಿತ ಪ್ರದೇಶದ ಚೆಟ್ಲಟ್ ದ್ವೀಪದಿಂದ ಬಂದಿರುವ ಅವರು ಕೊವಿಡ್-19 ನ್ನು ಕೇಂದ್ರ ಸರಕಾರದ ಈ ದ್ವೀಪನಿವಾಸಿಗಳ ವಿರುದ್ಧ ಜೈವಿಕ ಅಸ್ತ್ರವಾಗಿ ಬಳಸುತ್ತಿದೆ ಎಂದು ಟೀಕಿಸುವ ಮೂಲಕ ಸುಳ್ಳು ಸುದ್ದಿ ಹರಡಿಸಿ ಕೇಂದ್ರ ಸರಕಾರದ ಗೌರವಕ್ಕೆ ಧಕ್ಕೆ ತಂದಿದ್ದಾರೆ ಎಂದು ಬಿಜೆಪಿಯ ಲಕ್ಷದ್ವೀಪ ಘಟಕದ ಅಧ್ಯಕ್ಷರ ದೂರಿನ ಮೇಲೆ ಈ ಪ್ರಕರಣ ದಾಖಲಾಗಿತ್ತು.

ಆಯಿಷಾ ಸುಲ್ತಾನ್ ಅವರ ನಿರೀಕ್ಷಣಾ ಜಾಮೀನಿನ ಅರ್ಜಿಯನ್ನು ಕೇರಳ ಹೈಕೋರ್ಟು ಪುರಸ್ಕರಿಸಿ ಅವರಿಗೆ ಮಧ್ಯಂತರ ಜಾಮೀನು ನೀಡಿದೆ. ಎಫ್‌ಐಆರ್‌ನಲ್ಲಿ ನಮೂದಿಸಿರುವ ಅಪರಾಧಗಳು ಮೇಲ್ನೋಟಕ್ಕೆ ರಾಜದ್ರೋಹ ಮತ್ತಿತರ ಆರೋಪಗಳಿಗೆ ಒಳಗಾಗುವುದಿಲ್ಲ ಎಂದು ಅದು ಹೇಳಿದೆ.

ಆದರೆ ಈ ಆರೋಪವನ್ನು ರದ್ದುಮಾಡಬೇಕು ಎಂಬ ಅವರ ಅರ್ಜಿಯ ಮೇಲೆ ಈ ಪ್ರಕರಣದಲ್ಲಿನ ಮುಂದಿನ ವಿಚಾರಣೆಗಳಿಗೆ ತಡೆಯಾಜ್ಞೆ ನೀಡಬೇಕು ಎಂಬ ಮನವಿಯನ್ನು, ವಿಚಾರಣೆ ಇನ್ನೂ ಆರಂಭಾವಸ್ಥೆಯಲ್ಲಿ ಇರುವುದರಿಂದ ಸಾಧ್ಯವಿಲ್ಲ ಎಂದು ನ್ಯಾಯಾಲಯ ನಿರಾಕರಿಸಿದೆ.

ಪುಟ 11 ರಿಂದ

ಕಾರ್ಮಿಕರ ಐಕ್ಯ ಪ್ರತಿರೋಧ 2001-2005

ನೌಕರರ ಮುಷ್ಕರ ಸಾಟಿಯಿಲ್ಲದ ಯಶಸ್ಸುಗಳಿಸಿತು.

ದುರದೃಷ್ಟವಶಾತ್, ವಿವಿಧ ಹಂತದ ಪ್ರಖ್ಯಾತ ಜನರಿಂದ ಈ ಅಭೂತಪೂರ್ವ ಪ್ರತಿಭಟನೆಗಳು, ಬೃಹತ್ ಸಾರ್ವತ್ರಿಕ ಮುಷ್ಕರ ಮತ್ತು ಬೃಹತ್ ಸಂಖ್ಯೆಯ ಸಹಿಯೊಂದಿಗೆ ಸಂಸತ್ತಿಗೆ ಸಾಮೂಹಿಕ ಅರ್ಜಿಯನ್ನು ಸಲ್ಲಿಸಿದರೂ, ಸಾರ್ವಜನಿಕ ಮತ್ತು ಅಲೈಡ್ ಉದ್ಯೋಗಿಗಳ ಟಿ.ಯು.ಐ.ಮತ್ತು ಐ.ಎಲ್.ಓ. ಗೆ ದೂರು ನೀಡಿದರೂ, ಐ.ಎಲ್.ಓ. ಭಾರತ ಸರ್ಕಾರದಿಂದ ಸ್ಪಷ್ಟೀಕರಣವನ್ನು ಕೇಳಿದರೂ, ನಂತರ ವಿವಿಧ ಪಕ್ಷಗಳಿಗೆ ಸೇರಿದ ಸಂಸತ್ ಸದಸ್ಯರು ಎತ್ತಿದ ಕೋಪಗೊಂಡ ಚರ್ಚೆಯಲ್ಲಿ ಸರ್ಕಾರ ಮೌನವಾಗಿತ್ತು.

ಹೊಸ ವರ್ಷ 2004 ಫೆಬ್ರವರಿ 24 ರ ಐತಿಹಾಸಿಕ ಸಾರ್ವತ್ರಿಕ ಮುಷ್ಕರದಿಂದ ಪ್ರಾರಂಭವಾಯಿತು ಮತ್ತು ಸಾಮೂಹಿಕ ನಿಯೋಗ ಮತ್ತು ಸಂಸತ್ತಿಗೆ ಸಾಮೂಹಿಕ ಸಹಿಯನ್ನು ಸಲ್ಲಿಸುವುದರೊಂದಿಗೆ ಕೊನೆಗೊಂಡಿತು. ಆದರೆ ಮೇ 2004 ರಲ್ಲಿ ಯುಪಿಎ ಸರ್ಕಾರ ರಚನೆ ಮತ್ತು ವರ್ಷದ ಅಂತ್ಯದ ನಡುವಿನ ಅವಧಿಯು ಕಾರ್ಮಿಕ ವರ್ಗದ ದೊಡ್ಡ ಹೋರಾಟದಿಂದ ಕೂಡಿತ್ತು.

ಮುಷ್ಕರದ ಹಕ್ಕಿನ ಬಗ್ಗೆ ಐ.ಎಲ್.ಒ. ಶಿಫಾರಸು

ಸಾರ್ವಜನಿಕ ಮತ್ತು ಅಲೈಡ್ ನೌಕರರ ಟಿ.ಯು.ಐ. ತಮಿಳನಾಡು ಸರ್ಕಾರವು ತೆಗೆದುಕೊಂಡ ದಂಡನಾತ್ಮಕ ಕ್ರಮಗಳ ವಿರುದ್ಧ ಮತ್ತು ಅರ್ಜಿಯನ್ನು ಆಲಿಸುವಾಗ ಸುಪ್ರೀಂ ಕೋರ್ಟ್ ಅನುಮೋದಿಸಿದ ತೀರ್ಪಿನ ವಿರುದ್ಧ ಐ.ಎಲ್.ಒ.ನ ಸಂಘ ಕಟ್ಟುವ ಸ್ವಾತಂತ್ರ್ಯ ಸಮಿತಿಗೆ ದೂರು ನೀಡಿತ್ತು. ನಂತರ ಐಎಲ್‌ಒ ನೌಕರರ ಮುಷ್ಕರ ಹಕ್ಕನ್ನು ದೃಢಪಡಿಸಿತು ಮತ್ತು ದಮನಕಾರಿ ಕ್ರಮಗಳನ್ನು ಹಿಂತೆಗೆದುಕೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸಿತು.

ಎನ್.ಡಿ.ಎ. ಸರ್ಕಾರದ ಸೋಲು

ಒಟ್ಟು ಆರು ವರ್ಷಗಳ ಕಾಲ ಬಿಜೆಪಿ ಮತ್ತು ಅದರ ಆಳ್ವಿಕೆಯಲ್ಲಿ, ದ್ವೇಷ, ಹತ್ಯೆಗಳು ಮತ್ತು ಎಲ್ಲಾ ರೀತಿಯ ಧಾರ್ಮಿಕ ಮತ್ತು ಸಾಮಾಜಿಕ ಅಸ್ಪಷ್ಟತೆಯ ದಾಳಿಯ ಕೋಮು ತೀವ್ರತೆಯ ಕಾಡು ಹುಚ್ಚುತನಕ್ಕೆ ದೇಶ ಸಾಕ್ಷಿಯಾಯಿತು. ಅದರ ಆರ್ಥಿಕ ನೀತಿಯು ಸಂಪೂರ್ಣವಾಗಿ ಬಡಜನ ವಿರೋಧಿ ಮತ್ತು ಶ್ರೀಮಂತ ಪರವಾಗಿತ್ತು. ಯು.ಎಸ್. ಸಾಮ್ರಾಜ್ಯಶಾಹಿಗೆ ಮತ್ತು ವಿಶ್ವಬ್ಯಾಂಕ್-ಐಎಂಎಫ್-ಡಬ್ಲ್ಯುಟಿಒ ಆದೇಶಗಳಿಗೆ ಅದರ ಶರಣಾಗತಿ ಸಾಮಾನ್ಯ ಜನಸಮೂಹವನ್ನು ವಿನಾಶದ ಅಂಚಿಗೆ ದೂಡಿತು, ಸಮಾಜದ ಶ್ರೀಮಂತ ಮೇಲ್ಭಾಗದ ಸ್ತರಗಳ ಸಂತೋಷಕ್ಕೆ ಕಾರಣವಾಯಿತು, ಆದರೆ ಇದು ದೇಶದ ಆರ್ಥಿಕ ಮತ್ತು ರಾಜಕೀಯ ಸಾರ್ವಭೌಮತ್ವದ ಸವೆತಕ್ಕೆ ಕಾರಣವಾಯಿತು.

ಏತನ್ಮಧ್ಯೆ, ಎನ್.ಡಿ.ಎ. ಸರ್ಕಾರವು ರಾಜೀನಾಮೆ ನೀಡಿತು ಮತ್ತು ಮಧ್ಯಕಾಲೀನ ಚುನಾವಣೆಗಳಿಗೆ ರಾಷ್ಟ್ರಪತಿಯನ್ನು ವಿನಂತಿಸಿತು, "ಇಂಡಿಯಾ ಶೈನಿಂಗ್", "ಪ್ರವರ್ಧಮಾನಕ್ಕೆ ಬರುತ್ತಿರುವ ಆರ್ಥಿಕತೆ" ಎಂಬ ತಮ್ಮ ಗಟ್ಟಿ ಘೋಷಣೆಯ ಮೇಲೆ ಜನರಿಂದ ಹೆಚ್ಚು ದೃಢವಾದ ಆದೇಶವನ್ನು ಪಡೆಯಬಹುದೆಂಬ ನಿರೀಕ್ಷೆ ಅವರದಾಗಿತ್ತು. ಆದರೆ ಚುನಾವಣೆಯಲ್ಲಿ ಕೇಂದ್ರದಲ್ಲಿ ತನ್ನ ಮಿತ್ರಪಕ್ಷಗಳೊಂದಿಗೆ ಬಿ.ಜೆ.ಪಿ. ಸೋಲಿಸಲ್ಪಟ್ಟಿತು. ಆಂಧ್ರಪ್ರದೇಶ ಮತ್ತು ಕರ್ನಾಟಕ ಎರಡೂ ರಾಜ್ಯಗಳಲ್ಲಿ, ಸಹ ಅದರ ಮಿತ್ರ ಪಕ್ಷಗಳ ಸರ್ಕಾರಗಳನ್ನು ಚುನಾವಣೆಗಳಲ್ಲಿ ಸೋಲಿಸಲಾಯಿತು.

ಜನತೆಯ ನಾಯಕನಾಗುವ ದೀರ್ಘ ಪಯಣ..... ಪುಟ 8 ರಿಂದ

ನಾಯಕತ್ವವನ್ನು ಖಚಿತಪಡಿಸಿದ ಕಮ್ಯುನಿಸ್ಟ್ ಪಕ್ಷ, ಜನತಾ ಕ್ರಾಂತಿಕಾರಿ ಸೈನ್ಯ (ಪೀಪಲ್ಸ್ ಲಿಬರೇಶನ್ ಆರ್ಮಿ – ಪಿಎಲ್.ಎ) ವನ್ನು ಸ್ಥಾಪಿಸಿತು. ಅದು 1927ರಲ್ಲಿ ಸಾಮ್ರಾಜ್ಯಶಾಹಿ ವಿರುದ್ಧ ಒಂದು ಪ್ರಮುಖ ಮಿಲಿಟರಿ ವಿಜಯ ಸಾಧಿಸಿತು. ಬ್ರಿಟಿಷ್ ಪಡೆಗಳನ್ನು ಅವುಗಳ ನಿಗದಿತ ಕ್ಷೇತ್ರವಾದ ಹಂಕೌ ಮತ್ತು ಜಿಯುಜಾಂಗ್ ಗೆ ವಾಪಸು ಹೋಗುವಂತೆ ಮಾಡಿತು. ಆದರೆ ಕಾರ್ಮಿಕರ ಹೋರಾಟಗಳು ಸಶಸ್ತ್ರ ದಂಗೆಗಳಾಗಿ ಬೆಳೆದಿದ್ದ ಕೆಲವು ಪ್ರದೇಶಗಳಲ್ಲಿ ಅವುಗಳನ್ನು ಕ್ರೂರವಾಗಿ ದಮನಗೊಳಿಸಿದ್ದರಿಂದ ಕೆಲವು ಹಿನ್ನಡೆಗಳನ್ನು ಸಹ ಎದುರಿಸಿತು.

ಕೊಮಿಂಟಾಂಗ್ ನ ಪ್ರತಿ–ಕ್ರಾಂತಿಕಾರಿ ಪಾತ್ರದಿಂದಾಗಿ ಕಮ್ಯುನಿಸ್ಟ್ ಮತ್ತ ಕಾರ್ಮಿಕ ನಾಯಕರ ನರಮೇಧ ನಡೆಯಿತು. ಕಮ್ಯುನಿಸ್ಟ್ ಪಕ್ಷ ಮತ್ತು ಸೋವಿಯೆಟ್ ಒಕ್ಕೂಟ ತನ್ನ ವೈರಿ ಎಂಬ ಧೋರಣೆಯನ್ನು ಅಂಗೀಕರಿಸಿತು. ಈ ದಾಳಿಗಳಿಗೆ ಪ್ರತಿರೋಧ ಒಡ್ಡಲು ಕಮ್ಯುನಿಸ್ಟ್ ಪಕ್ಷವು ನಿರ್ಧರಿಸಿತು. ಅದು ಕಾರ್ಷಿಕ ಕ್ರಾಂತಿಯ ಮೇಲೆ ಮತ್ತು ಶರತ್ಕಾಲದ ಕೊಯ್ಲು ದಂಗೆಗಳನ್ನು ಸಂಘಟಿಸುವತ್ತ ಗಮನ ಕೇಂದ್ರೀಕರಿಸಿತು. ಇದರಿಂದಾಗಿ ರೈತರ ಮಧ್ಯೆ ಪಕ್ಷದ ಪ್ರಭಾವ ಮತ್ತು ಪ್ರತಿಷ್ಟೆ ಗಮನಾರ್ಹವಾಗಿ ಹೆಚ್ಚಿತು. ಜೂ ದೆ ಮತ್ತು ಕೆಂಪು ಸೈನ್ಯ ವಿಲೀನವಾಗಿದ್ದರಿಂದ ಸಶಸ್ತ್ರ ಬಲ ಸಹ ಹೆಚ್ಚಾಯಿತು. ಆದರೆ 1927–28ರ 'ಮಹಾನ್ ಕ್ರಾಂತಿ' ಎಂದು ಕರೆಯಲಾದ ಈ ಅವಧಿಯ ದಂಗೆಗಳು, ಸಫಲವಾಗಲಿಲ್ಲ. ಕ್ರಾಂತಿಯ ಉಬ್ಬರ ಇಳಿಮುಖವಾಗಿತ್ತು. ಈ ಮಿಲಿಟರಿ ಹಿನ್ನಡೆಗಳು ಮತ್ತು ನಷ್ಟಗಳಿಗೆ, ಯಾವುದೇ (ತೀವ್ರ ಪ್ರತಿಕೂಲದ) ಸಂದರ್ಭಧಲ್ಲೂ ಹಿಮ್ಮೆಟ್ಟದೆ ಇರುವ ಮತ್ತು ನಿರಂತರ ದಾಳಿಯನ್ನೇ ಮಾಡುತ್ತಾ ಹೋಗುವ, ಕ್ರಾಂತಿಕಾರಿ ಮತ್ತು ವಾಸ್ತವ ಪರಿಸ್ಥಿತಿಯನ್ನು ಹೆಚ್ಚು ಅಂದಾಜು ಮಾಡುವ ಕೆಲವು 'ಎಡ ಕ್ಷಿಪ್ರಕ್ರಾಂತಿ' ತಪ್ಪುಗಳು ಇದಕ್ಕೆ ಕಾರಣ ಎಂದು ಪಕ್ಷವು ಸ್ವಯಂ–ವಿಮರ್ಶೆಯ ನಂತರ ಗುರುತಿಸಿತು. ಈ ನಷ್ಟಗಳಿದ್ದಾಗ್ಯೂ, ಕ್ರಾಂತಿಕಾರಿ ಪ್ರಭಾವದ ಹಬ್ಬುವಿಕೆ ಮತ್ತು ಗ್ರಾಮೀಣ ಕ್ರಾಂತಿಕಾರಿ ನೆಲೆಗಳ ಸ್ಥಾಪನೆಯಲ್ಲಿ ಮುನ್ನಡೆಯನ್ನೂ ಪಕ್ಷವು ಗುರುತಿಸಿತು.

ಮಾವೊ, ವಿವಿಧ ಕ್ರಾಂತಿಕಾರಿ ನೆಲೆಗಳ ಅನುಭವದ ಆಧಾರದ ಮೇಲೆ 1930ರಲ್ಲಿ –'ಕಾರ್ಮಿಕರು ಮತ್ತು ರೈತರ ಸಶಸ್ತ ಸ್ವತಂತ್ರ ಆಡಳಿತ', 'ನಗರಗಳನ್ನು ಗ್ರಾಮೀಣ ಪ್ರದೇಶಗಳಿಂದ ಸುತ್ತುವರಿಯುವುದು', ಗ್ರಾಮೀಣ ಪ್ರದೇಶಗಳಲ್ಲಿ ಕೆಂಪು ರಾಜಕೀಯ ಅಧಿಕಾರ ಸ್ಥಾಪಿಸಿ ವಿಸ್ತರಿಸುತ್ತಾ ಹೋಗುವುದು', 'ಪರಿಸ್ಥಿತಿ ಪಕ್ವವಾದಾಗ ರಾಷ್ಟ್ರೀಯ ರಾಜಕೀಯ ಅಧಿಕಾರ ಕಿತ್ತುಕೊಳ್ಳುವುದು' – ಮುಂತಾದ ಯೋಚನೆಗಳನ್ನು ಬೆಳೆಸಿದರು.

ಪಕ್ಷವನ್ನು ಬಲಗೊಳಿಸಲು, ಪ್ರಜಾಸತ್ತಾತ್ಮಕ ಮತ್ತು ಸಮಾಜವಾದಿ ಕ್ರಾಂತಿಗಳ ನಡುವಿನ ವ್ಯತ್ಯಾಸವನ್ನು ಮಸುಕುಗೊಳಿಸಿದ – ವ್ಯಕ್ತಿನಿಷ್ಠವಾದ, ವ್ಯಕ್ತಿವಾದ, ಕ್ಷಿಪ್ರಕ್ರಾಂತಿವಾದ, ಎಡ ಮಾರ್ಗಚ್ಯುತಿಗಳು ಮತ್ತು ಹೆಚ್ಚು ಅಂದಾಜು ಮಾಡುವುದು – ಮುಂತಾದವುಗಳ ಹೋರಾಟವನ್ನು ಮುಂದುವರೆಸಲಾಯಿತು. ಮಿಲಿಟರಿ ಪಡೆಗಳ ಮತ್ತು ನಾಯಕತ್ವದ ಮೇಲೆ ಪಕ್ಷದ ರಾಜಕೀಯ ನಾಯಕತ್ವವನ್ನು ಒತ್ತಿ ಹೇಳಲಾಯಿತು. ಕೆಂಪು ಸೈನ್ಯವು, ಪಕ್ಷದ ನಾಯಕತ್ವದಲ್ಲಿ ಕ್ರಾಂತಿಯ ರಾಜಕೀಯ ಕಾರ್ಯಭಾರವನ್ನು ಜಾರಿ ಮಾಡುವ ಸಶಸ್ತ್ರ ಅಂಗ ಎಂದು ಸ್ಪಷ್ಟಪಡಿಸಲಾಯಿತು.

ದೀರ್ಘ ಪಯಣ

ಪಕ್ಷದ ಒಳಗೆ ಸರಿಯಾದ ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಧೋರಣೆಯಲ್ಲಿ ಪಕ್ಷವನ್ನು ಒಯ್ಯಲು ಆಂತರಿಕ ಹೋರಾಟದ ಜತೆಗೆ, ಕೊಮಿಂಟಾಂಗ್ ನ 'ಸುತ್ತುವರೆದು ದಮನ ನಡೆಸುವ' ಅಭಿಯಾನದ ವಿರುದ್ಧ ಹೋರಾಟ ನಡೆಸಿ ಹಿಮ್ಮೆಟ್ಟಿಸುವುದನ್ನೂ ಕಮ್ಯುನಿಸ್ಟ್ ಪಕ್ಷವು ಮಾಡಬೇಕಾಯಿತು. ವೈರಿ (ಕೊಮಿಂಟಾಂಗ್) ಪಡೆಗಳು ತನ್ನ (ಕೆಂಪು ಸೈನ್ಯದ) ಪಡೆಗಳನ್ನು 'ಸುತ್ತುವರೆಯುವುದನ್ನು' ತಡೆಯಲು ಮತ್ತು ಇನ್ನೊಂದು ಕಡೆ ತನ್ನ ಬಲವನ್ನು ಜಮಾವಣೆ ಮಾಡಿ ಕ್ರೋಡೀಕರಿಸಲು, 1934ರಲ್ಲಿ ಕಮ್ಯುನಿಸ್ಟ್ ಪಕ್ಷ ತನ್ನ ಚಾರಿತ್ರಿಕ 'ದೀರ್ಘ ಪಯಣ'ವನ್ನು ಆರಂಭಿಸಿತು. ಮೊದಲಿಗೆ, ಪಕ್ಷದ ಎಡ ದುಸ್ಸಾಹಸ ಧೋರಣೆಗಳಿಂದ ಬಹಳ ನಷ್ಟಗಳಾದವು. ಜನವರಿ 1935ರಲ್ಲಿ ನಡೆದ ಪಕ್ಷದ ಪೊಲಿಟ್ ಬ್ಯುರೊದ ವಿಸ್ತೃತ ಸಭೆ, ಈ ತಪ್ಪುಗಳನ್ನು ಸರಿಪಡಿಸಿಕೊಂಡು–ವೈರಿಯ ದುರ್ಬಲ ಸ್ಥಾನಗಳಲ್ಲಿ ದಾಳಿ ಮಾಡುವ, ಬಹಳ ಕ್ಷಿಪ್ರ ಬದಲಾವಣೆಗೆ ಅವಕಾಶ ಇರುವ ಚಲನಶೀಲ ಯುದ್ಧವನ್ನು ಮಾಡುವ ಮತ್ತು ಉತ್ತರಕ್ಕೆ ಸೈನ್ಯವನ್ನು ಸಾಗಿಸುವ ನಿರ್ಧಾರವನ್ನು ಕೈಗೊಂಡಿತು. ಇದು ಪಕ್ಷದ ಚರಿತ್ರೆಯಲ್ಲಿ ಒಂದು ಸರಿಯಾದ ಸಮಯದಲ್ಲಿ ತಿರುಗುಬಿಂದುವಾಗಿ, ಅದರ ಸಂರಕ್ಷಣೆ ಮತ್ತು ಪುನರುಜ್ಜೀವನಕ್ಕೆ ಕಾರಣವಾಯಿತು.

ಈ 'ದೀರ್ಘ ಪಯಣ' ಒಂದು ದೀರ್ಘ ತಾಳಿಕೆ, ಬದ್ಧತೆ ಮತ್ತು ದೃಢನಿಶ್ಚಯಗಳ ವೀರಗಾಥೆಯಾಗಿತ್ತು. ಅದು ದಾರಿಯುದ್ದಕ್ಕೂ ಕೊಮಿಂಟಾಂಗ್ ಪಡೆಗಳು ಬೆನ್ನಟ್ಟಿ ಬರುವುದರಿಂದ, ದಾರಿಯಲ್ಲಿ ತಡೆಗಟ್ಟುವುದರಿಂದ

ತಪ್ಪಿಸಿಕೊಳ್ಳಬೇಕಾಗಿತ್ತು. ಹಿಮಾಚ್ಛಾದಿತ ಪರ್ವತಗಳು, ನದಿಗಳು, ಹುಲ್ಲುಗಾವಲುಗಳು ಮುಂತಾದ ಪ್ರಾಕೃತಿಕ ಅಡೆತಡೆಗಳನ್ನು ಎದುರಿಸಬೇಕಾಗಿತ್ತು. ತೀವ್ರ ಚಳಿ, ಹಸಿವು, ಗಾಯ, ರೋಗಗಳು ಮತ್ತು ಆಂತರಿಕ ಬಿಕ್ಕಟ್ಟಿನ ಸಂಕಟಗಳನ್ನು ಸಹಿಸಿಕೊಳ್ಳಬೇಕಾಗಿತ್ತು. ಇವೆಲ್ಲವನ್ನು ಒಳಗೊಂಡ ಅತ್ಯಂತ ಸಂಕಟಮಯ ಪರಿಸ್ಥಿತಿಯನ್ನು ಸಹಿಸಿಕೊಂಡು, ಕೆಂಪು ಸೈನ್ಯವು ಕ್ರಾಂತಿಯ ವಿಜಯದಲ್ಲಿ ಎಂದೂ ಕುಂದದ ದೃಢ ನಂಬಿಕೆ ಇರಿಸಿ 'ದೀರ್ಘ ಪಯಣ'ವನ್ನು ಪೂರ್ಣಗೊಳಿಸಿತು. ಈ 'ದೀರ್ಘ ಪಯಣ'ದಲ್ಲಿ 370 ದಿನಗಳಲ್ಲಿ 12,500 ಕಿ,ಮಿ ಗಳ ದೂರವನ್ನು ಕ್ರಮಿಸಿತು. ಈ ಕಷ್ಟಕರ ಮಹಾ ಕಾರ್ಯದಲ್ಲಿ ಸಾವಿರಾರು ಸಂಗಾತಿಗಳು ಮಡಿದರು. ಆದರೆ ಕೊಮಿಂಟಾಂಗ್ ಪಡೆಗಲ ಸುತ್ತುವರಿಯುವಿಕೆಯನ್ನು ಬೇಧಿಸಿ, 1935ರಲ್ಲಿ ಶಾಂಕ್ಸಿ ಪ್ರಾಂತವನ್ನು ತಲುಪಿತು.

'ದೀರ್ಘ ಪಯಣ'ದ ಕೊನೆಯಲ್ಲಿ ಕೆಂಪು ಸೈನ್ಯದ 30 ಸಾವಿರ ಸೈನಿಕರು ಉಳಿದಿದ್ದರು. ಇವರು ಕಮ್ಯುನಿಸ್ಟ್ ಪಕ್ಷ ಮತ್ತು ಕೆಂಪು ಸೈನ್ಯದ ಅತ್ಯುತ್ಕೃಷ್ಟ ಸಂಗಾತಿಗಳಾಗಿದ್ದರು. ಅವರು ದಾರಿಯುದ್ದಕ್ಕೂ ಕ್ರಾಂತಿಯ ಬೀಜಗಳನ್ನು ಎಲ್ಲೆಡೆ ಬಿತ್ತಿದರು. ದೀರ್ಘ ಪಯಣ ಚೀನಾದ ಕ್ರಾಂತಿಯಲ್ಲಿ ಒಂದು ತಿರುಗುಬಿಂದು ಮತ್ತು ಚಾರಿತ್ರಿಕ ಪ್ರಾಮುಖ್ಯತೆ ಪಡೆದಿದೆ.

ಕೆಂಪು ಸೈನ್ಯ ಶಾಂಕ್ಸಿಯಲ್ಲಿ ಇದ್ದ ಪಡೆಗಳನ್ನು ಸೇರಿಕೊಂಡಿತು. ಇದು ಜಪಾನಿ ಯುದ್ಧರಂಗದಿಂದ ಬಹಳ ದೂರವಿರಲಿಲ್ಲ. ಜಪಾನಿನೊಂದಿಗೆ ಯುದ್ಧದಲ್ಲಿ ಸದ್ಯದಲ್ಲೇ ದೇಶ ಹತ್ತಿ ಉರಿಯುವ ಹೊಸ್ತಿಲಲ್ಲಿ ಇತ್ತು.

ಕೋವಿಡ್ ಲಸಿಕೆ: ಬಿಗಿಯಾಗುತ್ತಿರುವ ಪೇಟೆಂಟ್ ಎಂಬ ನೇಣಿನ ಕುಣಿಕೆ... ಪುಟ 9 ರಿಂದ

ಸಂಖ್ಯೆಯಂತೆ ಕಾಣಿಸಿದರೂ ಜಗತ್ತಿನ ಜನರ ಅಗತ್ಯಕ್ಕೆ ಏನೇನೂ ಸಾಲದು. ಜಗತ್ತಿನಲ್ಲಿ ಲಸಿಕೆ ಪಡೆಯಬೇಕಾದ 680 ಕೋಟಿ ಜನರಿದ್ದಾರೆ. ಅಂದರೆ ಕನಿಷ್ಠ 1360 ಕೋಟಿ ಡೋಸ್ ಲಸಿಕೆಗಳ ಅಗತ್ಯವಿದೆ. ಆದರೆ ಶ್ರೀಮಂತ ದೇಶಗಳು ಕೊಡುವ ದಾನದ ಲಸಿಕೆ ಅಗತ್ಯದ ಶೇಕಡಾ 7.4 ಮಾತ್ರ. ಉಳಿದ ಲಸಿಕೆಯನ್ನು ಎಲ್ಲಿಂದ ತರುವುದು ಎಂಬುದು ಅಭಿವೃದ್ಧಿಶೀಲ ರಾಷ್ಟಗಳಿಗೆ ಚಿಂತೆಯ ವಿಷಯವಾಗಿದೆ. ಈ ಹಿನ್ನೆಲೆಯಲ್ಲಿ ಅಭಿವೃದ್ಧಿಶೀಲ ದೇಶಗಳು ಕನಿಷ್ಠ 1000 ಕೋಟಿ ಡೋಸ್ ಲಸಿಕೆಯಾದರೂ ಬೇಕು ಎಂದು ಹೇಳುತ್ತಿವೆ. ಈ ಬೇಡಿಕೆಯ ಪೈಕಿ ಶೇಕಡ 10 ರಷ್ಟನ್ನು ಮಾತ್ರ ಒದಗಿಸುವುದಾಗಿ ಜಿ–7 ದೇಶಗಳು ಹೇಳುತ್ತಿವೆ. ದಾನ ನೀಡುವುದಾಗಿ ಹೇಳಿರುವ ಲಸಿಕೆಯನ್ನು ಕೂಡ ಮುಂದಿನ ವರ್ಷದ ಮಧ್ಯಭಾಗದ ವರೆಗೆ ನೀಡುವುದಾಗಿ ಹೇಳಲಾಗುತ್ತಿದೆ. ಅಂದರೆ ಈಗ ಸಂಗ್ರಹಿಸಿ ಇಟ್ಟು ಕೊಂಡಿರುವ ಬೆಟ್ಟದಷ್ಟು ಲಸಿಕೆಗಳು ಏಷ್ಯಾದ, ಲ್ಯಾಟಿನ್ ಅಮೆರಿಕದ, ಆಫ್ರಿಕಾದ ಜನಗಳಿಗೆ ಸಿಗುವುದಿಲ್ಲ. ಇವರು ನೀಡುವ ಲಸಿಕೆಗಳು ಜನರಿಗೆ ತಲುಪುವಷ್ಟರಲ್ಲಿ ಬಡ ದೇಶಗಳ ಅದೆಷ್ಟು ಅಮೂಲ್ಯ ಜೀವಗಳ ಪ್ರಾಣ ಹರಣವಾಗುವುದೋ ಗೊತ್ತಿಲ್ಲ..

ಈಗಾಗಲೇ ಹೇಳಿರುವಂತೆ, ಲಸಿಕೆ ಅಗ್ಗವಾಗಿ ಲಭ್ಯವಾಗಲು ಮತ್ತು ದೊಡ್ಡ ಪ್ರಮಾಣದಲ್ಲಿ ಉತ್ಪಾದನೆ ಮಾಡಲು ತಾತ್ಕಾಲಿಕವಾಗಿಯಾದರೂ ಲಸಿಕೆಗಳ ಮೇಲಿನ ಪೇಟೆಂಟ್ ಹಕ್ಕುಗಳನ್ನು ರದ್ದುಗೊಳಿಸಬೇಕು. ಆದರೆ ಈಗಷ್ಟೇ ಮುಗಿದ ಜಿ–7 ದೇಶಗಳ ಸಭೆಯಲ್ಲಿ ಈ ವಿಷಯ ಚರ್ಚೆಗೇ ಬಂದಿಲ್ಲ. ಭಾರತ ಮತ್ತು ಆಫ್ರಿಕಾದ ಪ್ರಸ್ತಾಪವನ್ನು ಕೇವಲ ಅಮೆರಿಕ ಮತ್ತು ಫ್ರಾನ್ಸ್ ಮಾತ್ರ ಸಮ್ಮತಿಸಿವೆ. ಆದರೆ ಸಭೆಯಲ್ಲಿ ಚರ್ಚಿಸಿ ಈ ವಿಷಯವನ್ನು ಇತ್ಯರ್ಥ ಪಡಿಸದೆ ಇರುವುದರಿಂದ ಪೇಟೆಂಟ್ ನಿಯಂತ್ರಣಗಳಿಂದ ಯಾವುದೇ ವಿನಾಯಿತಿ ಸಿಗುವುದಿಲ್ಲ. ಅಂದರೆ ಬಡ ದೇಶಗಳ ಜನರಿಗೆ ಬೇಕಾದ ಲಸಿಕೆ ಸಧ್ಯಕ್ಕೆ ಸಿಗುವುದಿಲ್ಲ.

ಸಾರ್ವತ್ರಿಕ ಲಸಿಕೆಗೆ ಪೇಟೆಂಟ್ ರದ್ದತಿ ಅಗತ್ಯ

ಸಾರ್ವತ್ರಿಕವಾಗಿ ಲಸಿಕೆ ನೀಡಬೇಕೆಂದು ದೊಡ್ಡ ಗಂಟಲಿನಲ್ಲಿ ಮಾತನಾಡುವ ಬ್ರಿಟಿಷ್ ಪ್ರಧಾನಿ ಜಾನ್ಸನ್ ತಾತ್ಕಾಲಿಕವಾಗಿಯಾದರೂ ಪೇಟೆಂಟ್ ಹಕ್ಕುಗಳನ್ನು ರದ್ದುಗೊಳಿಸಲು ಸಮ್ಮತಿಸಲಿಲ್ಲ. ಇದರರ್ಥ ಶ್ರೀಮಂತ ದೇಶಗಳ ಕಾಳಜಿ ಎಂಬುದು ಕೇವಲ ಲೊಳಲೊಟ್ಟೆ. ಬಂಡವಾಳಶಾಹಿ ದೇಶಗಳ ಹಿತಾಸಕ್ತಿ ಏನಿದ್ದರೂ ಕೃತಕವಾಗಿ ಲಸಿಕೆ ಅಭಾವ ಸೃಷ್ಟಿಸಿ ಲಾಭವನ್ನು ಕೊಳ್ಳೆಹೊಡೆಯುವುದೇ ಆಗಿದಿಯೇ ಹೊರತು ಜನರ ಜೀವ, ಜೀವನದ ರಕ್ಷಣೆಯಲ್ಲ. ಪೇಟೆಂಟ್ ನಿಬಂಧನೆಗಳನ್ನು ತಾತ್ಕಾಲಿಕವಾಗಿ ರದ್ದುಗೊಳಿಸಲು ಅಮೆರಿಕ ಸಮ್ಮತಿಸಿರುವುದು ಸಮಾಧಾನ ತರುವ ವಿಷಯವಾದರೂ ಲಸಿಕೆಯನ್ನು ಉತ್ಪಾದಿಸಲು ಬೇಕಾದ ಕಚ್ಚಾ ವಸ್ತುಗಳು ಮತ್ತು ಯಂತ್ರೋಪಕರಣಗಳು ಅಮೆರಿಕಾ ಮತ್ತು ಯೂರೋಪ್ ದೇಶಗಳಿಂದಲೇ ಬರಬೇಕಾಗಿರುವುದರಿಂದ ಕೇವಲ ಪೇಟೆಂಟ್ ಸಂಬಂಧಿತ ವಿನಾಯಿತಿಗಳಿಂದ ಹೆಚ್ಚೇನೂ ಸಾಧ್ಯವಾಗುವುದಿಲ್ಲ. ಏಕೆಂದರೆ ಅಮೆರಿಕವು 1950 ರ ರಕ್ಷಣಾ ಉತ್ಪಾದನಾ ಕಾನೂನಿನಡಿ ಲಸಿಕೆ ತಯಾರಿಕೆಗೆ ಬೇಕಾದ ಯಾವುದೇ ರೀತಿಯ ಕಚ್ಚಾ ವಸ್ತು ಮತ್ತು ಉಪಕರಣಗಳನ್ನು ರಫ್ತು ಮಾಡುವುದನ್ನು ನಿಷೇಧಿಸಿದೆ. ಹಾಗಾಗಿ ಈ ಕಾನೂನು ಬದಲಾಗದೆ ಭಾರತವನ್ನೂ ಒಳಗೊಂಡಂತೆ ಬೇರೆ ಅಭಿವೃದ್ಧಿಶೀಲ ದೇಶಗಳಲ್ಲಿ ಲಸಿಕೆ ಉತ್ಪಾದನೆ ತೀವ್ರಗೊಳಿಸಲು ಸಾಧ್ಯವಾಗುವುದಿಲ್ಲ.

ಲಸಿಕೆ ಸಂಶೋಧನೆ ಮಾಡಿ ಉತ್ಪಾದನೆ ಮಾಡುತ್ತಿರುವ ಕಂಪನಿಗಳು ಕೂಡ ತಮ್ಮ ಕಿಸೆಯಿಂದ ಬಂಡವಾಳವನ್ನು ತಂದು ಸುರಿದಿಲ್ಲ. ಭಾರತದಲ್ಲಿ ಕೂಡ ಕೊವ್ಯಾಕ್ಸಿನ್ ಲಸಿಕೆ ಸಂಶೋಧನೆ ಮಾಡಲು ಭಾರತೀಯರ ತೆರಿಗೆ ಹಣದಿಂದ ಸಾವಿರಾರು ಕೋಟಿ ರೂಪಾಯಿ ನೀಡಲಾಗಿದೆ. ನಡೆದಿರುವ ಸಂಶೋಧನೆಯೂ ಸಹ ಸಾರ್ವಜನಿಕ ವಲಯದ ಐಸಿಎಂಆರ್ ನಂತಹ ಸಂಸ್ಥೆಗಳಲ್ಲಿ ನಡೆದಿದೆ. ಲಸಿಕೆ ಉತ್ಪಾದನೆಗೆ ಮೂಲಸೌಕರ್ಯ ಹೊಂದಿಸಿಕೊಳ್ಳಲು ಭಾರತ್ ಬಯೋಟೆಕ್ ಸಂಸ್ಥೆಗೆ 1500 ಕೋಟಿ ರೂಪಾಯಿ ಸಾರ್ವಜನಿಕ ತೆರಿಗೆ ಹಣ ನೀಡಲಾಗಿದೆ. ಆದರೂ ಈ ಸಂಸ್ಥೆ ತನ್ನ ಲಸಿಕೆಗೆ ಗರಿಷ್ಠ ದರ ನಿಗದಿ ಮಾಡಿಕೊಳ್ಳಲು ಭಾರತ ಸರ್ಕಾರ ಅವಕಾಶ ನೀಡಿದೆ. ಭಾರತ್ ಬಯೋಟೆಕ್ ಲಾಭದ ಪಸಲು ತೆಗೆಯುತ್ತಿದೆ.

ಲಸಿಕೆ ಕಂಪನಿಗಳ ಕರಾಳ ಲಾಭಕೋರತನ

ಅಮೆರಿಕದ ಮಾಡೆರ್ನಾ ಕಂಪನಿಯು ಕೋವಿಡ್ ಲಸಿಕೆ ಸಂಶೋಧನೆ ನಡೆಸಿ ಅಭಿವೃದ್ಧಿ ಪಡಿಸಲು ಅಮೆರಿಕ ಸರ್ಕಾರದಿಂದ 6 ಬಿಲಿಯನ್ ಡಾಲರ್ ಹಣ ಪಡೆದಿದೆ. ಜನರ ತೆರಿಗೆ ದುಡ್ಡನಲ್ಲಿ ಇಷ್ಟು ದೊಡ್ಡ ಮೊತ್ತದ ಸಹಾಯ ಪಡೆದ ಮಾಡೆರ್ನಾ ತನ್ನ ಲಸಿಕೆಯ ಪ್ರತಿ ಡೋಸ್‌ಗೆ 15 ಡಾಲರ್ ದರ ನಿಗದಿಪಡಿಸಿ ಅಮೆರಿಕಾ ಸರ್ಕಾರಕ್ಕೆ ಪೂರೈಸುತ್ತಿದೆ. ಅಮೆರಿಕದ ಜನರ ತೆರಿಗೆ ಹಣದಲ್ಲಿ ಲಸಿಕೆ ಸಂಶೋಧನೆ ಮತ್ತು ಅಭಿವೃದ್ಧಿ ಮಾಡಿದ ಮಾಡೆರ್ನಾ ನೈತಿಕವಾಗಿ ಯಾವುದೇ ದರ ಪಡೆಯದೆ ಅಮೆರಿಕದ ಜನಗಳಿಗೆ ಲಸಿಕೆ ಪೂರೈಸಬೇಕು. ಆದರೆ ಮಾಡೆರ್ನಾ ಸಿಇಓ 'ಬೇಡಿಕೆ ಆಧರಿಸಿ ಪ್ರತಿ ಡೋಸ್‌ಗೆ 25 ರಿಂದ 35 ಡಾಲರ್ ದರ ನಿಗದಿ ಮಾಡುತ್ತೇವೆ' ಎನ್ನುವ ಮಾತುಗಳನ್ನಾಡಿದ್ದಾರೆ.

ಈ ಪ್ರಮಾಣದಲ್ಲಿ ಲಾಭವನ್ನು ಕೊಳ್ಳೆ ಹೊಡೆಯುತ್ತಿರುವುದರಿಂದ ಮಾಡೆರ್ನಾ ಕಂಪನಿಯ ಷೇರು ಬೆಲೆ ಕಳೆದ ಒಂದು ವರ್ಷದಲ್ಲಿ 6 ಪಟ್ಟು ಹೆಚ್ಚಳವಾಗಿದೆ. ಮಾಡೆರ್ನಾದ ಸಿಇಓ ಆಸ್ತಿಯಲ್ಲಿ 5.5 ಬಿಲಿಯನ್ ಡಾಲರ್ ಹೆಚ್ಚಳವಾಗಿದೆ. ಇದು ಕೇವಲ ಮಾಡೆರ್ನಾದ ಕಥೆ ಮಾತ್ರವಲ್ಲ ಕೋವಿಡ್ ಲಸಿಕೆ ತಯಾರು ಮಾಡುವ ಎಲ್ಲಾ ಬೃಹತ್ ಔಷಧ ಕಂಪನಿಗಳ ಕಥೆಯೂ ಇದೇ ಆಗಿದೆ. ಅವರೀಗ ದುಡ್ಡಿನ ಬೆಳೆ ಬೆಳೆದು ಕಣಜ ತುಂಬಿಕೊಳ್ಳುತ್ತಿದ್ದಾರೆ.

ಈ ನಡವಳಿಕೆಗಳೆಲ್ಲಾ ನವ ಉದಾರೀಕರಣ ಕಾಲಘಟ್ಟದಲ್ಲಿ ಸರ್ವೆ ಸಾಮಾನ್ಯ. ನವ ಉದಾರವಾದಿಗಳು ಯಾವಾಗಲೂ ಹೇಳುವುದೇನೆಂದರೆ 'ಬಿಕ್ಕಟ್ಟು ಆವರಿಸಿದಾಗಲೇ ಲಾಭ ಮಾಡಿಕೊಳ್ಳಬೇಕು, ಜನತೆಯ ಗಮನ ಬೇರೆಡೆ ಇರುವಾಗಲೇ ಜನ ವಿರೋಧಿ ನೀತಿಗಳನ್ನು ಜಾರಿಗೆ ತರಬೇಕು' ಎಂದು. ಈಗಲೂ ಅದೇ ಆಗುತ್ತಿದೆ. ಜನತೆಯ ಜೀವವನ್ನು ಪಣಕ್ಕಿಟ್ಟು ಬೃಹತ್ ಔಷಧ ಕಂಪನಿಗಳು ವ್ಯಾಪಾರಕ್ಕಿಳಿದಿದ್ದಾರೆ. ನವ ಉದಾರವಾದಿ ಸರ್ಕಾರಗಳು ಆ ವಂಚಕ ಕಂಪನಿಗಳಿಗೆ ಎಲ್ಲಾ ರೀತಿಯ ಬೆಂಬಲ ನೀಡುತ್ತಿವೆ. ಅದು ಸಾಲದೆಂಬಂತೆ ಜನತೆಯ ಮೇಲೆ ನವ ನವೀನ ಹೊರೆಗಳನ್ನು ಹೇರುತ್ತಿದ್ದಾರೆ. ನವ ಉದಾರವಾದಕ್ಕೆ ಸಾವಿನ ಇಂಜೆಕ್ಷನ್ ನೀಡುವ, ಕೋವಿಡ್ ಲಸಿಕೆಯನ್ನು ಸಾರ್ವತ್ರಿಕವಾಗಿ ಪಡೆಯುವ ಹೋರಾಟಕ್ಕೆ ಜನ ಮುಂದಾಗಬೇಕಿದೆ. ■

ತೈಲ ಉತ್ಪನ್ನಗಳ ಬೆಲೆ ಹೆಚ್ಚಳದ ರಾಜಕೀಯ ಅರ್ಥಶಾಸ್ತ್ರ..... ಪುಟ 10 ರಿಂದ

ಹೆಚ್ಚುತ್ತಿರುವಾಗ ಸರ್ಕಾರಗಳಿಗೆ ಇಂಧನದ ಮೇಲೆ ತೆರಿಗೆ ವಿಧಿಸುವುದು ಬಿಟ್ಟು ಇನ್ಯಾವುದೇ ಮಾರ್ಗವಿಲ್ಲ ಎಂದು ಹೇಳಲಾಗುತ್ತದೆ. ಕೋವಿಡ್ ಕಾಲಘಟ್ಟದಲೂ ಸಾಮಾನ್ಯ ಭಾರತೀಯನು/ಳು ಸರ್ಕಾರಕ್ಕಿಂತಲೂ ಮಿಗಿಲಾಗಿ ಹೆಚ್ಚು ಆರ್ಥಿಕ ಸಂಕಷ್ಟದಲ್ಲಿದ್ದಾನೆ/ಳು ಎಂಬುದನ್ನು ಈ ವಾದ ಮರೆಮಾಚುತ್ತದೆ. ಹೆಚ್ಚುವ ಇಂದನ ವೆಚ್ಚದ ಉಬ್ಬರವು ಜನ ಸಾಮಾನ್ಯರನ್ನು ಇನ್ನಷ್ಟು ಬಾಧಿಸುತ್ತದೆ.

ಕಾರ್ಪೊರೇಟ್ ಆದಾಯ ತೆರಿಗೆಯನ್ನು ಶೇ. 10 ಪ್ರಮಾಣದಲ್ಲಿ ಇಳಿಸಿರುವುದರಿಂದ ಕೇಂದ್ರ ಸರ್ಕಾರವು 2019 ರಲ್ಲಿ ಸುಮಾರು 1.45 ಲಕ್ಷ ಕೋಟಿಯಷ್ಟು ಬಿಟ್ಟುಕೊಟ್ಟಿದೆ. ಇದೇ ವರ್ಷದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ನಿಂದ ಒಟ್ಟು ತೆರಿಗೆ ಆದಾಯವಾಗಿ ಕೇಂದ್ರ ಸರ್ಕಾರವು ರೂ. 2.4 ಲಕ್ಷ ಕೋಟಿ ಸಂಗ್ರಹಿಸಿದೆ. ಹೀಗೆ ಜನ ಸಾಮಾನ್ಯರು ಅಗಾಧ ಪ್ರಮಾಣದ ತೆರಿಗೆಯನ್ನು ಪೆಟ್ರೋಲ್ ಮತ್ತು ಡೀಸೆಲ್ ಮೂಲಕ ನೀಡಿ ಕಾರ್ಪೊರೇಟ್‌ಗಳಿಗೆ ನೀಡುವ ಉತ್ತೇಜಕಗಳಿಗೆ ಹಣಕಾಸು ಒದಗಿಸುವಂತೆ ಆಗಿದೆ. ಇಳಿಕೆಯಾದ ಕಾರ್ಪೊರೇಟ್ ತೆರಿಗೆಯು ರಾಷ್ಟ್ರೀಯ ಆದಾಯಕ್ಕಾಗಲಿ ಅಥವಾ ಉದ್ಯೋಗ ಸೃಷ್ಠಿಗಾಗಲೀ ಯಾವುದೇ ಕೊಡುಗೆ ನೀಡಿಲ್ಲ. 2021 ರಲ್ಲಿ ಜಿಡಿಪಿ ಯು ಶೇ. 7.3 ರಷ್ಟು ಕುಸಿದಿದೆ. ಇದೇ ಸಮಯದಲ್ಲಿ ಶೇರು ಮಾರುಕಟ್ಟೆಯಲ್ಲಿರುವ ಕಂಪನಿಗಳ ಲಾಭವು ವೇತನ ಕಡಿತ ಮತ್ತು ಉದ್ಯೋಗ ಕಡಿತದಿಂದಾಗಿ ಬೃಹತ್ ಪ್ರಮಾಣದಲ್ಲಿ ಏರಿದೆ. ಹೀಗಿರುವಾಗ, ಕಾರ್ಪೊರೇಟ್ ಲಾಭಕ್ಕೆ ಜನ ಸಾಮಾನ್ಯರು ಹಣ ಒದಗಿಸಬೇಕು ಎನ್ನುವುದು ಎಷ್ಟು ನ್ಯಾಯಯುತ? ■

JANASHAKTHI KANNADA VARA PATRIKE July 5-11, 2021 Price: Rs. 10/- Date of Publication: 02 July 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

"ಕೃಷಿ ಉಳಿಸಿ– ಪ್ರಜಾಪ್ರಭುತ್ವ ಉಳಿಸಿ" – ದೇಶಾದ್ಯಂತ ಭಾರೀ ಬೆಂಬಲ


ಕೋಲಾರ


ಚಿಕ್ಕಬಳ್ಳಾಪುರ



ಉತ್ತರ ಕನ್ನಡ



ಮೈಸೂರು


ಯಾದಗಿರಿ

ಕೋವಿಡ್ ಕಾಲದಲ್ಲೂ ಹೆಚ್ಚುತ್ತಿರುವ ಜಾತಿ ತಾರತಮ್ಯ ರಾಜ್ಯಾದ್ಯಂತ ಪ್ರತಿಭಟನೆ


ತುಮಕೂರು


ಕೋಲಾರ


ಹ.ಬೊ.ಹಳ್ಳಿ


ಮಂಡ್ಯ



ಬಳ್ಳಾರಿ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**